ಹಿಂದುಸ್ಥಾನದ ಅನೇಕ ಸಂಸ್ಥಾನಿಕರು ವಿಲಾಯತಿಯ ಯಾತ್ರೆ ಮಾಡಿ ಬಂದರು. ಆದರೆ ಅವರು ಕಾಬೂಲದ ಅಮೀರಸಾಹೇಬರಂತೆ ರಾಜ್ಯ ಸುಧಾರಣೆಯ ದೃಷ್ಟಿಯನ್ನಿಟ್ಟುಕೊಂಡಿರಲಿಲ್ಲವೇ ಇಲ್ಲ. ಸಂಸ್ಥಾನಿಕರು ವ್ಯರ್ಥವಾಗಿ ಪ್ರಜರ ದ್ರವ್ಯವನ್ನು ಹಾಳುಮಾಡಿ, ಅವರನ್ನು ದರಿದ್ರಮಾಡುತ್ತ ಇದ್ದಾರೆಂದೇ ಸ್ಪಷ್ಟವಾಗಿರುತ್ತದೆ. ಈ ತರದ ಆರೋಪವು ಅವರ ಮೇಲೆ ದಿನಾಲು ಹೊರಿಸಲ್ಪಡುತ್ತದೆ. ಅಮೀರರು ಒಂದೇ ಸಾರೆ ವಿಲಾಯತಿಯ ಯಾತ್ರೆ ಮಾಡಿ ಬಂದಬಳಿಕ, ತಮ್ಮ ರಾಜ್ಯದಲ್ಲಿ ಮಾಡಿದ ಸುಧಾರಣೆಯನ್ನು ನೋಡಿದರೆ- ತಾವು ಜಗತ್ತಿನಲ್ಲಿ ಬಾಳುವದು ವ್ಯರ್ಥವೆಂದೇ ಸಂಸ್ಥಾನಿಕರಿಗೆ ಅನಿಸದಿರದು.

ಅಮೀರಸಾಹೇಬರು ತಮ್ಮ ರಾಜ್ಯಕಾರಭಾರದಲ್ಲಿ ಪ್ರಜಾಸತ್ತಾತ್ಮಕವೆನಿಸುವಷ್ಟು ಸುಧಾರಣೆ ಮಾಡಿದ್ದಾರೆ ಮಾಂಟೆಗ್ಯುಸಾಹೇಬರು ಹಿಂದುಸ್ಥಾನಕ್ಕೆ ಸ್ವರಾಜ್ಯದ ಕಂತದ ಉಪಕ್ರಮ ಮಾಡಿ, ದಣಿದರು ಸರ್ ಸಾಯಮನ್ನಸಾಹೇಬರು ಸ್ವರಾಜ್ಯ" ಬಿಜಲಿ ಬತ್ತಿ ಹಚ್ಚಿ, ದಿವ್ಯ ಪ್ರಕಾಶ ಕೆಡವತಕ್ಕವರಿದ್ದಾರೆ. ಅಮೀರಸಾಹೇಬರು ಬಿಳೀ ಕಾಗದದ ಮೇಲೆ ಕರೀ ಗೆರೆಗಳನ್ನು ಮೂಡಿಸಿ, ಒಂದ್ ಕ್ಷಣದಲ್ಲಿ ರಾಜ್ಯದಲ್ಲಿ ಕ್ರಾಂತಿ ಎನಿಸುವಷ್ಟು ಸುಧಾರಣೆ ಮಾಡಿದ್ದಾರೆ. ಮನಸ್ಸು ಇದ್ದರೆ- ಅಘಟಿತ ಘಟನೆಯನ್ನು ಮಾಡಬಹುದೆಂದು ಅಮೀರಸಾಹೇಬರ ವರ್ತನದಿಂದ ಸಿದ್ಧವಾಗುತ್ತದೆ.

ಅಮೀರಸಾಹೇಬರು ಪಾರ್ಲಮೆಂಟಿನ ಪದ್ಧತಿ ಪ್ರಕಾರ ರಾಜ್ಯವಾಗಬೇಕೆಂದು ಮನಸಾ ಸಂಕಲ್ಪವಾಯಿತು, ಅದಕ್ಕೆ ಅವಶ್ಯವಿದ್ದ ಎಲ್ಲ ಕಾರಭಾರಗಳನ್ನೂ ಸರಿಪಡಿಸಿದ್ದಾರೆ ಸ್ವಾವಲಂಬನವಿದ್ದ ಹೊರತು ದೇಶ ರಕ್ಷಣೆಯಾಗಲಾರದೆಂಬ ನಂಬಿಗೆಯಿಂದ ದೇಶದಲ್ಲಿ ಪ್ರತಿಯೊಬ್ಬ ತರುಣನು ಮೂರು ವರ್ಷಗಳ ಲಷ್ಕರೀ ನೌಕರಿ- ಶಿಕ್ಷಣವನ್ನು ಹೊಂದಲೇಬೇಕೆಂಬ ಕಟ್ಟಪ್ಪಣೆ ವಿಧಿಸಿದ್ದಾರೆ. ದಂಡಿಗೆ ಬೇಕಾಗುವ ರಾಯಫಲ ಬಂದೂಕ ಮೊದಲಾದವುಗಳನ್ನು ಸದ್ಯದಲ್ಲಿ ಫ್ರಾನ್ಸದಲ್ಲಿ ಕೊಂಡಿದ್ದಾರೆ. ಯುದ್ಧದ ಸಾಹಿತ್ಯ ಮಾಡುವ ಕಾರಖಾನೆಗಳನ್ನೇ ತಮ್ಮ ದೇಶದಲ್ಲಿಡುವರು. ದಂಡಿನ ಶಿಕ್ಷಣ ಮತ್ತು ದಂಡಿಗೆ ಬೇಕಾಗುವ ಆಯುಧಗಳಿಗಾಗಿ ಹತ್ತುವ ವೆಚ್ಚಕ್ಕಾಗಿ, ಪ್ರಜರ ಮೇಲೆ ಕರ ಕೂಡಿಸಬಹುದೆಂದು ಪ್ರಜರು ಸಂತೋಷದಿಂದ ಒಪ್ಪಿದ್ದಾರೆ ಹಿಂದುಸ್ಥಾನ ಸರಕಾರದವರು ಹಿಂದೀ ಜನರಿಗೆ ಒಲಾತ್ಕಾರದ ದಂಡಿನ ಶಿಕ್ಷಣಕೊಡಲು ಇಂಥ ಕರ ಕೂಡಿಸಬೇಕೆಂದರೆ- ಹಿಂದೀ ಜನರು ಸಂತೋಷದಿಂದ ಒಪ್ಪುವರು. ಆದರೆ ಪರಕೀಯ ಸರಕಾರದಿಂದ ಇಂಥ ಅಪೇಕ್ಷೆ ಮಾಡತಕ್ಕದ್ದೇ ಅಲ್ಲ.

ಅಮೀರಸಾಹೇಬರು ಪದವಿಗಳಿಗೆ ನೀರೆರದದ್ದು ದೊಡ್ಡ ಕೆಲಸವಾಯಿತು. ಪದವಿಗಳ ಆಶೆಯಿಂದ ಅನೇಕರು ಅಧಿಕಾರಿಗಳ ಇಚ್ಛಾನುಸಾರವಾಗಿ ನಡೆದು ದೇಶಹಿತದ ವಿರುದ್ಧ ಕೃತ್ಯಗಳನ್ನು ಹೇಗೆ ಮಾಡುತ್ತಾರೆಂಬದಕ್ಕೆ ಹಿಂದುಸ್ಥಾನದಲ್ಲಿ ಕಂಡುಬರುವಂಥ ಕೃತ್ಯಗಳು ಅನ್ಯತ್ರ ಎಲ್ಲಿಯೂ ಕಂಡುಬರಲಾರವು. ಪ್ರತಿಯೊಬ್ಬನು ದೇಶಕಾರ್ಯವನ್ನು ನಿಷ್ಕಾಮಭಕ್ತಿಯಿಂದ ಮಾಡಬೇಕಾದರೆ- ಪದವಿಗಳಿರಕೂಡದು. ಅಮೇರಿಕ, ಫ್ರಾನ್ಸ, ರಶಿಯಾದಲ್ಲಿ ಪದವಿಗಳಿಲ್ಲವೇ ಇಲ್ಲ. ಅಲ್ಲಿ ಧರ್ಮಾತ್ಮರು ಇದ್ದೇ ಇರುವರು. ಕಾಬೂಲದಂಥ ಚಿಕ್ಕ ದೇಶದವರು ಮಾಡಿದ್ದನ್ನು ಹಿಂದುಸ್ಥಾನದಂಥ ದೊಡ್ಡ ದೇಶದವರು ಅನುಕರಣ ಮಾಡಿ, ಮುಂದೆ ಪದವಿ ಕೊಡುವದಂತಿರಲಿ; ಈಗಿನ ಪದವಿಗಳನ್ನೂ ರದ್ದು ಮಾಡುವದು ರಾಷ್ಟ್ರಹಿತ ದೃಷ್ಟಿಯಿಂದ ಅತ್ಯಂತ ಅವಶ್ಯವಾಗಿರುತ್ತದೆ.

ಭರತಪೂರ ಸಂಸ್ಥಾನದಲ್ಲಿ ಅಡಮಿನಿಸ್ಟ್ರೇಟರರಾಗಿದ್ದ ರಾಜಾ ಕಿಶನಪ್ರಸಾದರ ಮೇಲೆ ಲಂಚ ರುಷವತ್ತಿನ ಅನೇಕ ಪ್ರಕರಣಗಳು ಉದ್ಭವಿಸಿವೆ. ಸರ್ವಾಧಿಪತಿಗಳು ಇವರಿಗೆ ಈ ಮೊದಲು ಸಂಸ್ಥಾನದ ಹೊರಗೆ ಹದ್ದುಪಾರ ಮಾಡಿದ್ದರು. ಈಗ ದಿಲ್ಲಿಯಲ್ಲಿ ದಸ್ತಗಿರ ಮಾಡಿದ್ದಾರೆ. ವಿಚಾರಣೆಗಾಗಿ ಭರತಪೂರಕ್ಕೆ ಕಳಿಸುವರು.

ಮಹಾತ್ಮಾಜಿಯವರಿಗೂ ಸಂಪೂರ್ಣ ಸ್ವಾತಂತ್ರ್ಯ ಬೇಕು.

–(೦)

ಸರ್ವ ಪಕ್ಷಗಳ ಪರಿಷತ್ತಿನ ಧ್ಯೇಯವು ವಸಾಹತಿಕ ಸ್ವರಾಜ್ಯವಾಯಿತು ಅಂದ ಬಳಿಕ ನಿಮ್ಮ ಕಾಂಗ್ರೆಸದವರು ಪೆಶಾರಾಬ ಪಂಚರು ಜಬರ ರೆಂದು ಇಂಗ್ಲೀಜ ರಾಷ್ಟ್ರಗೀತವನ್ನು ಹಾಡಿದರು ಈ ದೇಶದಲ್ಲಿ ವಾಸವಾಗಿರುವ ಇಂಗ್ರೇಜ ಜನರು ಹಿಂದೀ ಜನರಿಗೆ ತಕ್ಕುಲತೆಯಿಂದ ಹೇಳುತ್ತಿದ್ದಾರಷ್ಟೇ; ಸರ್ವ ಪಕ್ಷದವರು ವಸಾಹತಿಕ ಸ್ವರಾಜ್ಯ ಬೇಕೆಂದ ತರುವಾಯ ಅದನ್ನೇಕೆ ಇಂಗ್ಲಿಷ ಜನರು ಕೊಡಲಿಕ್ಕಿಲ್ಲ ? ಈ ವಸಾಹತಿಕ ಸ್ವರಾಜ್ಯ ದೊರೆಯುವ ಕಾಲಕ್ಕೆ ಎಷ್ಟು ಕಾಲ [illegible] ಬೇಕು ಎಂದು ದೇವರೇ ಬಲ್ಲ.

ವಸಾಹತಿಕ ಸ್ವರಾಜ್ಯವಾಯಿತೆಂದರೆ- ಸಾಮ್ರಾಜ್ಯ ಮುಕ್ತಿ ಆಯಿತು ಎಂದು ತಿಳಿಯುವದು ಮಾತ್ರ ತಪ್ಪು. ಪಂಡಿತ ಜವಾಹರಲಾಲ ನೆಹರು, ಶ್ರೀ ಶ್ರೀನಿವಾಸ ಅಯ್ಯಂಗಾರ ಮೊದಲಾದವರು ಹೇಳುವಂತೆ ಸಂಪೂರ್ಣ ಸ್ವಾತಂತ್ರ್ಯದಿಂದಲೇ ನಿಜವಾದ ದೇಶೋನ್ನತಿಯಾಗುವದುಂಟು. ಇದರಿಂದಲೇ ಜಗತ್ತಿನಲ್ಲಿ ಮಾನ ಮರ್ಯಾದೆ ದೊರೆಯುವದುಂಟು ಇದರ ಅನುಭವವನ್ನೇ ದಕ್ಷಿಣ ಆಫ್ರಿಕೆಯವರು ಮಾಡಲಾರಂಭಿಸಿದ್ದಾರೆ. [illegible] ಯವರು ಸ್ಪಷ್ಟವಕ್ತ್ತ ಆಗಿದ್ದಾರೆ. ಅವರು ಅನ್ನುವದೇನಂದರೆ-

"ನಮಗೆ ಸಂಪೂರ್ಣ ಸ್ವರಾಜ ಸ್ವಾತಂತ್ರ್ಯ ಬೇಕು. ಬ್ರಿಟಿಶ ಸಾಮ್ರಾಜ್ಯಾಂತರ್ಗತವಾದ ಸ್ವರಾಜ್ಯವೆಂಬದಕ್ಕೆ ನಾನು ಬಾಧ್ಯನಾಗುವದಿಲ್ಲ. ಅಥವಾ ಬ್ರಿಟಿಶ ರಾಷ್ಟ್ರಕ್ಕೆ ಸೇರುವ ದೇಶಗಳ ಒಂದು ಸಹಕಾರ ಸಾಮ್ರಾಜ್ಯವೆಂಬದನ್ನೂ ನಾನು ಒಪ್ಪುವದಿಲ್ಲ. ದಕ್ಷಿಣ ಆಫ್ರಿಕೆಗೆ ಸಂಪೂರ್ಣ ಸ್ವಾತಂತ್ರ್ಯವೇ ಬೇಕು. ಆಫ್ರಿಕೆ ಮತ್ತು ಈ ಧ್ಯೇಯದ ನಡುವೆ ಯಾವ ಅಂತರಪಟವೂ ಇರಕೂಡದು ನಮ್ಮ ಧ್ಯೇಯ ಪೂರ್ಣತೆಗಾಗಿ ಬಾಧಕಪರರಾಗಲಿ, ಬೆರೆಯುವರಾಗಲಿ, ಅಡ್ಡ ಬಂದರೆ- ಆ ಅಡ್ಡ ವಿಘ್ನವನ್ನು ತೆಗೆದು ಹಾಕಲು ನಾನು ಬಲವಾಗಿ ಪ್ರಯತ್ನಿಸುವೆನು."

ಭೂಮಿಯ ತುಂಡಿನ ಮತ್ತು ಸರಿಯಾಧಾರ ಹಚ್ಚಿ ಕೊಡುವ ಕಾಯದೆಗಳ ವಿಷಯವಾಗಿ ಲೋಕಮತವನ್ನು ಜಾಗೃತಪಡಿಸಲು- ರಾ. ಬ. ಕಂಬಳಿಯವರು ಧಾರವಾಡ ಜಿಲ್ಲೆಯಲ್ಲಿ ಚಳವಳಿ ಪ್ರಾರಂಭಿಸತಕ್ಕವರಿದ್ದಾರೆಂದು ಮುಂಬಯಿಯ ಟಾಯಿಮ್ಸದಲ್ಲಿ ಬಂದ ಸುದ್ದಿಯು ಪ್ರಸಿದ್ಧವಾಗಿದೆ.

ಇಂದೂರಿನ ಹೋಳಕರ ಮಹಾರಾಜರ ಮೇಲೆ ಪಾತರದವಳ ದಾವೆಯು.

—(೦)—

ಮುಂಬಯಿಯಲ್ಲಿರುವ ಶೇವಕಾಬಾಯಿ ಪಂಡರಿನಾಥ ರಾಜ ಪ್ರೋಕರಳೆಂಬವಳು ಪದಚ್ಯುತ ತುಕೋಜಿರಾಯರ ಕಕ್ಕನ ಮಗನ ಅಂಗವಸ್ತ್ರವಾಗಿದ್ದಳು. ೧೧ ವರ್ಷಗಳ ಹಿಂದೆ ಸರ ತುಕೋಜಿರಾಯರು ತಮಗಾದ ಪುತ್ರೋತ್ಸವದ ಸಂದರ್ಭಕ್ಕಾಗಿ ನೃತ್ಯ ಗಾಯನ ಅಭಿನಯಗಳಿಂದ ತಮ್ಮನ್ನು ಸಂತೋಷಗೊಳಿಸುವದಕ್ಕಾಗಿ ಇಂದೂರಿಗೆ ಕರಸಿಕೊಂಡರು. ಇವಳು ಮತ್ತು ಇವಳ ಹರೆಯದ ಮಗಳು ಇಬ್ಬರೂ ಅಲ್ಲಿಗೆ ಹೋದರು. ಮುಂದೆ ಎರಡೇ ದಿವಸಗಳಲ್ಲಿ ಹೋಳಕರ ಮಹಾರಾಜರು ತಾತ್ಯಾಸಾಹೇಬನನ್ನು ಹಿಡಿಸಿ, ಮಂಡಲೇಶ್ವರದ ಕಿಲ್ಲೆಯಲ್ಲಿ ಸೆರೆ ಬಂದಿಯಲ್ಲಿಡಿಸಿ, ಶೇವಕಾಬಾಯಿಯು ಮಗಳು ತಮ್ಮ ಪ್ರೀತಿಪಾತ್ರಳಾಗಿರಬೇಕೆಂದು ಮಹಾರಾಜರು ಸಂಧಾನ ಹಚ್ಚಿದರು. ಯಾವ ಮೋಹದ ಮಾತಿಗೂ ಒಳಗಾಗಲಿಲ್ಲ. ಮಹಾರಾಜರಾದ ತಮಗೆ ಅನುಕೂಲರಾಗಿ ನಡೆಯಲೊಲ್ಲೆಂಬ ಸಿಟ್ಟಿನಿಂದ ಇವರನ್ನು ಮೇಲೆ ಹೇಳಿದ ಕೋಟೆಯಲ್ಲಿ ಸೆರೆ ಬಂದಿಯಲ್ಲಿಟ್ಟರು. ೧೧ ವರ್ಷಗಳವರೆಗೆ ಇವರು ಕೈದಿಯಾಗಿದ್ದರು. ಹ್ವಾಯಿಸರಾಯರಿಗೆ ಅಪೀಲು ಮಾಡಿ, ಬಂಧಮುಕ್ತರಾದರು. ಈ ಮಧ್ಯದಲ್ಲಿ ಮಹಾರಾಜರು ಮುಂಬಯಿಯಲ್ಲಿರುವ ಇವರ ಮನೆಯನ್ನು ಜಪ್ತಮಾಡಿ, ದರಬಾರದ ಆಸ್ತಿ ಮಾಡಿದರು. ಈ ಮನೆಯಿಂದ ವರ್ಷಕ್ಕೆ ೫೦೦೦ ರೂಪಾಯಿ ಬಾಡಿಗೆ ಬರುತ್ತಿತ್ತು. ಈ ದರವರ್ಷದ ಉತ್ಪನ್ನದ ರಕಮು ತಮ್ಮನ್ನು ಅನ್ಯಾಯವಾಗಿ ತುರಂಗದಲ್ಲಿಟ್ಟ ಬಗ್ಗೆ ೫೦ ಸಾವಿರ ರೂಪಾಯಿ, ಬೇರೆ ನಷ್ಟಗಳು ಸೇರಿ, ೧,೨೪೨೦೦ ರೂಪಾಯಿ ಕೊಡಿಸಬೇಕೆಂದು ಶೇವಕಾಬಾಯಿಯು ಮುಂಬಯಿ ಹಾಯಕೋರ್ಟಿನಲ್ಲಿ ದಾವೆ ಹಂದಿದ್ದಾಳೆ. ದಾವೆಯು ವಿಚಾರಣೆಯು ನಡೆದಿದೆ.

— —

ಡಿ|| ಲೊ|| ಬೊ|| ಓವ್ಹರಶಿಯರನಿಗೆ ಶಿಕ್ಷೆ.

—೦—

ಸೊಲ್ಲಾಪೂರದ ಡಿ|| ಲೊ|| ಬೊ|| ದ ಒಬ್ಬ ಓವ್ಹರಶಿಯರನು ಬೋರ್ಡಿನವರು ತನ್ನ ಸಂಬಳ ಕೊಡಲಿಲ್ಲೆಂದು ಬೋರ್ಡಿನ ಸಾಮಾನು ಇಟ್ಟುಕೊಂಡು ಹೋದನು. ಈ ಅಪರಾಧಕ್ಕಾಗಿ ಈತನಿಗೆ ೩೦೦ ರೂಪಾಯಿ ದಂಡವಾಯಿತು.

ಯುರೋಪಿಯನ್ನನು ಅಂಗಡಿಕಾರನನ್ನು ಗುಂಡಿನಿಂದ ಹೊಡೆದನು.

(೦)—

ಕೋಲೊಂಬೋ ಪಟ್ಟಣದಲ್ಲಿ ಈಸ್ಟರ್ಲೆ ಎಂಬ ಹಡಗದಲ್ಲಿ ಪ್ರಯಾಣ ಮಾಡುತ್ತಿದ್ದ ಕೆಲ ಯುರೋಪಿಯನ್ನರು ಉತ್ತಮಚಂದನೆಂಬ ವ್ಯಾಪಾರಿಯ ಅಂಗಡಿಗೆ ಹೋಗಿ, ರೇಶಿಮೆಯ ಶರ್ಟುಗಳನ್ನು ಕೊಂಡು, ನೋಟು ಕೊಟ್ಟು ಚಿಲ್ಲರ ನಾಣ್ಯ ಬೇಡಿದರು. ಚಿಲ್ಲರ ನಾಣ್ಯದ ಪುಡಿ ಶಿಲಿಂಗ ಪೆನ್ಸ ನಾಣ್ಯಗಳನ್ನು ಬೇಡಿದರು. ಈ ನಾಣ್ಯಗಳಿಲ್ಲೆಂದು ಗುಮಾಸ್ತನು ಹೇಳಿದ ಕೂಡಲೆ- ಒಬ್ಬನು ಕಿಸೆಯಲ್ಲಿಯ ರಿವ್ಹಾಲ್ವರ ಒಂದನ್ನು ತೆಗೆದವನೇ ಗುಮಾಸ್ತನ ಮೇಲೆ ಮೂರು ಸಾರೆ ಗುಂಡು ಹಾರಿಸಿದನು. ಹೊರಗೆ ನಿಂತಿದ್ದ ರಿಕ್ಷಾ ಕೂಲಿಯು ಗುಮಾಸ್ತನನ್ನು ಬಿಡಿಸಿಕೊಳ್ಳಲು ಒಳಗೆ ಬರಲು ಆತನ ಘಾಯಪಡಿಸಿ, ಸಾಹೇಬನು ಹೊರಬಿದ್ದನು. ದಾರಿಯಲ್ಲಿ ಪೋಲೀಸ ಇನ್ಸಪೇಕ್ಟರನು ಈತನನ್ನು ಹಿಡಿದು, ರಿವ್ಹಾಲ್ವರ ಕಸಗೊಂಡನು. ಕೂಡಲೆ ಈತನ ಸಂಗಾತಿಯಾದ ಬೇರೆ ಯುರೋಪಿಯನ್ನನು ಇನಸ್ಪೇಕ್ಟರ ಮೇಲೆ ಹಲ್ಲೆ ಮಾಡಲು, ಗುಂಡು ಹಾಕಿದ ಸಾಹೇಬನು ಕೊಸರಿಕೊಂಡು ಗಪ್ಪ ಹೇಳಿಸಿದನು. ಈತನನ್ನು ಬಂದರದಲ್ಲಿ ಹಿಡಿದರು. ಆದರೆ ಇನ್ನೊಬ್ಬ ಸಾಹೇಬನು ಮುಂದೆ ಬಂದು, ನಾನೇ ಗುಂಡು ಹಾಕಿದವನೆಂದು ಹೇಳುತ್ತಾನೆ.

ಮೋಟಾರಿನವರ ಸಂಪು.

—೦—

ಮುಂಬಯಿ ಹತ್ತರಿರುವ ಬಾಂದ್ರಾದ ಹಾಡಿಗೆಯ ಮೋಟಾರಿನವರು ಅಪಘಾತಗಳ ದೆಸೆಯಿಂದ ಮೋಟಾರ ಮತ್ತು ಅವುಗಳಲ್ಲಿ ಕೂತು, ಹೋಗುವಂಥ ಪ್ರಯಾಣಿಕರ ದೆಸೆಯಿಂದ ವಿಮೆ ಇಳಿಸಬೇಕೆಂದು ಪೋಲೀಸಸಾಹೇಬರು ಒತ್ತಾಯಪಡಿಸಿದ್ದರಿಂದ, ಮೋಟಾರ ಡ್ರಾಯವ್ಹರರೆಲ್ಲರೂ ಸಂಪು ಮಾಡಿ ಕೆಲಸ ಬಿಟ್ಟಿದ್ದಾರೆ.

———

ಭಾರತ ಮಂತ್ರಿಯ ರಾಜೀನಾಮೆ-

ಲಾರ್ಡ ಬರ್ಕನ್ಹೆಡ್ಡಸಾಹೇಬರಿಗೆ ಹಿಂದುಸ್ಥಾನದ ಟ್ರೇಝರಿಯಿಂದ ದೊರೆಯುವ ಸಂಬಳವು ಸಾಲದಾಗಿದೆ. ಇದಕ್ಕೂ ಹೆಚ್ಚು ಬೇರೊಂದು ಪ್ರಾಪ್ತಿಯ ಕೆಲಸ ನೋಡಿಕೊಂಡಿದ್ದರಿಂದ, ಬೇಗನೆ ರಾಜೀನಾಮೆ ಕೊಡುವರೆಂದು ಕಲಕತ್ತೆಯ ಇಂಗ್ಲಿಷಮನ್ನ ಪತ್ರಕ್ಕೆ ಸ್ಪೇಶಲ ತಾರು ಬಂದಿದೆ.

ವಿವಿಧ ವರ್ತಮಾನಗಳು

—೦—

ಮದ್ರಾಸ ಇಲಾಖೆಯಲ್ಲಿ ಕರ್ನಾಟಕ ಮಿಲ ವೆಂಬ ಹೆಸರಿನದೊಂದೇ ಕಾಗದದ ಗಿರಣಿಯುಂಟು. ಈ ಗಿರಣಿಯ ವರ್ತಮಾನಸ್ಥಿತಿ ಮತ್ತು ಬೆಳವಣಿಗೆಗಾಗಿ ಸರಕಾರವು ತೀರ ದುರ್ಲಕ್ಷ್ಯ ಮಾಡುತ್ತಿದೆಯೆಂಬ ನಿಂದಕ ಠರಾವು ಅಲ್ಲಿಯ ಕೌನ್ಸಿಲದಲ್ಲಿ ಬಹುಮತದಿಂದ ಪಾಸಾಯಿತು.

——

ಮದ್ರಾಸದ ಕೌನ್ಸಿಲದಲ್ಲಿ ಸಾಯಮನ್ನ ಕಮೀಶನದ ಕೂಡ ಸಹಕಾರ ಮಾಡುವ ಠರಾವು ಪಾಸಾಯಿತು.

——

ಕಾಬೂಲದ ಅಮೀರಸಾಹೇಬರು ತಮ್ಮ ಸೈನಿಕರಿಗಾಗಿ ಫ್ರಾನ್ಸ ದೇಶದಲ್ಲಿ ೫೦ ಸಾವಿರ ರಾಯಫಲ ಬಂದೂಕುಗಳನ್ನು ಕೊಂಡರು.

——

ಹಿಮಾಲಯದಲ್ಲಾದ ಅತಿವೃಷ್ಟಿಯ ಮೂಲಕ ಝೀಲಮ ಮತ್ತು ಚಿನಾಬ ನದಿಗಳಿಗೆ ಮಹಾಪೂರ ಬಂದಿದೆ. ಶ್ರೀನಗರ ಪಟ್ಟಣವು ಗಂಡಾಂತರದಲ್ಲಿರುವದು.

——

ಧಾರವಾಡ—

ಮಿ. ಹುಲಕೋಟಿಯವರ ರಾಜೀನಾಮೆಯಿಂದ ತೆರವಾದ ಡಿ. ಲೊ. ಬೊ. ಅಧ್ಯಕ್ಷರ ಸ್ಥಳದಲ್ಲಿ ಮಿ. ಹೊಸಮನಿಯವರು ಆರಿಸಲ್ಪಟ್ಟರು.

——

ರಡ್ಡಿ ಸಹಕಾರಿ ಬ್ಯಾಂಕ ನಿಯಮಿತ
ಧಾರವಾಡ

ಜಾಹೀರ ನೋಟೀಸು.

—(೦)—

ಬ್ಯಾಂಕಿನ ಮಾಲ್ಕಿ ಹಾಗು ವಹಿವಾಟಿನಲ್ಲಿರುವ ಹುಬ್ಬಳ್ಳಿ ತಾಲೂಕ ಪೈಕಿ ಶಿರಗುಪ್ಪಿ ಗ್ರಾಮದ ಜಮೀನು ಸ. ನಂ ೭೬೪/೨ ಕ್ಷೇತ್ರ ಎಕರೆ ೧೨ ಗುಂಟೆ ೧೪ ಆಕಾರ ರೂ. ೨೩—೭—೦ ಇದನ್ನು ಮಾರುವದದೆ ಕೊಳ್ಳಲಿಚ್ಛಿಸುವವರು ಸಮಕ್ಷಮ ಅಥವಾ ಪತ್ರದ್ವಾರದಿಂದ ಮಾಹಿತಿ ತೆಗೆದುಕೊಳ್ಳಬಹುದು.

ಧಾರವಾಡ ೧—೯—೨೮ | H. T. Kalwad. ಮ್ಯಾನೇಜರ

ಸ್ತ್ರೀ [illegible] ನನ್ನ ಮನೆಗೆ [illegible] ಈ ಮಾತು ಊರಲ್ಲಿ ಯಾವತ್ತು ಜನರಿಗೆ ಗೊತ್ತೇ ಇರುತ್ತದೆ ನೀನು ಕಾಡಿದ [illegible] ನಾನು ಗರ್ಭಿಣಿ ಆಗುವದಕ್ಕೆ ಕಿಂದರ ಒಂದೇ ಅಂತಾ ಒಂದು [illegible] ನನಗೆ ಔಷಧ ಕಲ್ಕೊಂಡು ಕೊಡು ಹಕಿ ಮಾತು ಆ ತಾ ಹೇಳಿದಿ ಅದಕ್ಕೆ ನಾನು [illegible] ಆಗದೇ ಇದ್ದದರಿಂದ ಕೂಡೆಯುವದೂ ಬೈಯ್ಯುವದೂ ಪಗ್ಗೆ [illegible] ಮಾಡಲಿಕ್ಕೆ ಹತ್ತಿದಿ ಈ ಮುಜಕೂರು ಜನರು ನೋಡಿರುತ್ತಾರೆ ನಿನ್ನ ತ್ರಾಸ ತಡಿಯಲಾರದೇ ನನ್ನ ತವರ ಮನೆಗೆ ಬಂದಿದ್ದ ತರುವಾಯ ಆದಿ ಆಗ್ಗೆ ಊರಲ್ಲಿ ಕೆಲವು ಜನರನ್ನು ಕೂಡಿಸಿ ಒಂದು ಕಾಗದವ ಮೇಲೆ ನನ್ನ ಹೆಬ್ಬೆಟ್ಟು ಸಿಕ್ಕೋದು ನನ್ನ ಕಡಿಗೆ ಕೆಲವು ದಾಗೀನ ಬಂಗಾರದವು ನಿನ್ನ ಕಡಿಗೆ ಇದ್ದವುಗಳನ್ನು ನನ್ನ [illegible] ಶಿವಲಿಂಗವನ್ನು ತಾವಗಿ ಇವನ ಕಡಿಗೆ ಕೊಟ್ಟು [illegible] ಸಂಗಡಾ ಕಳಿಸಿದ ಕಾಗದಾ ಎನು ಬರೆದಿರುವದು ನನಗೆ ಗೊತ್ತು ಇಲ್ಲ ನಿನ್ನ ಹತ್ತಿರ ಹೋದಲು ನಾನು ರೋಖ ಹಣಾ ಒಂದು ಚಟಿಗೆ ತುಂಬಿದ್ದು ಕೊಟ್ಟಿದ್ದೆ ಮತ್ತು ಬಂಗಾರದ ದಾಗೀನೆ ಕೊಟ್ಟಿದ್ದೆ ಅವುಗಳ ಪೈಕಿ ನನಗೆ ಒಕ್ಕಿ ಕೆಲವು ರೂಪಾಯಿ ಕೊಟ್ಟು ಕಳಿಸಿದಿ ಬಾಕೀ ದಾಗೀನೆ ರೂಪಾಯಿ ನಿನ್ನ ಕಡಿಗೇ ಉಳಕೊಂಡವು ಹಿಂದಿನಿಂದಾ ಜಗಳ ಬರುತ್ತೇನೆ ಅಂತಾ ಹೇಳಿದ ನನಗೆ ೭|| ತಿಂಗಳು ಆಗಿರುವದರಿಂದ ನನ್ನ ಬಾಣಂತನಾ ಆಗೋವರೆಗೆ ನಿನ್ನ ಮೇಲೆ ಯಾವದೂ ಕೆಲಸ ಮಾಡುವಂತೆ ಇಲ್ಲಾ ಜನನ ಆದನಂತರಾ ಧರ್ಮ ಸರಕಾರದಲ್ಲಿ ಕೆಲಸ ನಡಿಸುತ್ತೇನೆ [illegible] ಇನ್ನು ಮೇಲೆ ನನ್ನ ಜಮೀನುಗಳ [illegible] ದೈವತ ಕಡೆಯಿಂದ ಬಿಲ್ಕುಲ ತಗಾದೆ ಮಾಡಬಾರದು [illegible] ಅಥವಾ [illegible] ನಿನ್ನ ಮೇಲೂ ದೈವದ ಮೇಲೂ ಕೂಡೇ ಫಿರ್ಯಾದಿ ಮಾಡುತ್ತೇನೆ ಈ ವಜಕೂರು ದೈವಕ್ಕೂ ಸಹಾ ತಿಳಿಸುತ್ತೇನೆ ತಿಳಿಯುವದು ಅಂತಾ ಕೊಟ್ಟ ನೋಟೀಸು

ತಾರೀಖು ೩೦—೮—೧೯೩೮ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಮನಮವ್ವ ಕೋಮ ಉಜ್ಜಪ್ಪ [illegible] ಪಾಲಿವಸ್ತಿ ಧೋಗೀಂದ ಈಕಿ ಮಾಡಿದ್ದು ಅದೆ.

— —

ಧನಸಂಪಾದನಾಪೇಕ್ಷಿಸುವ ಯುವತಿಯರಿಗೆ

ಸುಸಮಯ.

ಎ [illegible] ಕ್ರಿಶ್ಚಿಯನ್ [illegible], [illegible] [illegible] ಸಭಾ (ಕಲ್ಯಾಣ [illegible]) [illegible] ಇವರಿಗೆ ಬರೆದು ತಿಳಿದುಕೊಳ್ಳಿರಿ.

ನಕಲಿ ಮಾಲಿನ ಬಗ್ಗೆ ಎಚ್ಚರಿಕೆಯಿಂದಿರಿ

ನಮ್ಮ ಊರಿನ ಹೆಸರು ಕಾಯಿದೆ

ಹಿರಾ ಇಂಗು

ಅವಶ್ಯ ನೋಡಿರಿ.

ಇದು ದಿನಾಲು ಮನೆಯಲ್ಲಿ ಉಪಯೋಗವಾದದ್ದು ಆಶ್ಚರ್ಯ ಇದರಿಂದ ರುಚಿಕರ ಮತ್ತು ಸ್ವಾದಿಷ್ಟವಾಗ್ಗುದು ಎಂಬುದು ಎಲ್ಲರಿಗೂ ಖಾತ್ರಿಯಾಗಿರುವದು ನಾವು ನಮ್ಮ ಗುಮಾಸ್ತರನ್ನು ಕಾಬೂಲಕ್ಕೆ [illegible] ಉಂಚೇವಾಲನ್ನು ತೋರಿಸಿಂದ ತೆಗೆದುಕೊಳ್ಳುವದರಿಂದ ನಮ್ಮ ಗಿರಾಕಿಗಳಿಗೆ ಬಹಳ ಸೋಯಿಸ್ಕರ ದೊರೆಯುವದಲ್ಲದ ಖಾತ್ರಿ ಮಾಲು ಸಿಗುವದು. ಈ ಇಂಗು ಬಾಜಾರಿ ಇಂಗಕ್ಕಿಂತಲೂ ಬಹಳ ತೀಕ್ಷ್ಣವಿದ್ದು ಸುವಾಸಿಕವಾಗಿರುವದರಿಂದ ನಮ್ಮ ಒಂದು ತೊಲಿ ಇಂಗು ಇತರ ಹತ್ತು ತೊಲಿ ಇಂಗಿಗಿಂತಲೂ ಮೇಲಾಗುವದು. ಇದು ಔಷಧಿ ವಸ್ತುವಾಗಿರುವದರಿಂದ ಅಜೀರ್ಣ, ಚೀಣಾಜ್ವರ, ಹೊಟ್ಟೆಕಟ್ಟು ಹಿಡಿಯೋಣ, ಮಲೇರಿಯಾ, ಕಾಲರಾ, ಇನ್ಫ್ಲುಯೆಂಝಾ ಮುಂತಾದ ರೋಗಗಳಿಗೆ ಪ್ರತಿಬಂಧವಾಗಿರುವದು. ಉಪ್ಪಿನಕಾಯಿಯಲ್ಲಿ ಉಪಯೋಗಿಸಿದರೆ ಕ್ರಿಮಿಗಳಾಗುವ ಸಂಭವವಿಲ್ಲ. ಇದನ್ನು ಬೇಕಾದಷ್ಟು ಮುಚ್ಚಿಟ್ಟರೂ ವಾಸನೆಯು ಪಸರಿಸದೆ ಇರದು. ಇದನ್ನು ಸಂಗ್ರಹಿಸುವದು ಯೋಗ್ಯವದೆ

ಅರ್ಧಾ ಔಂಸಿನ ಕಿರಕೋಳ ವಿಕ್ರಿಗೆ ಸೋಯಿಸ್ಕರ ಫ್ಯಾನ್ಸಿ ಡಬ್ಬಿಗಳು.

ಇರಾಣಿ ಪ್ಯಾಲ್ಟರ್ ಇಂಗು

ಡಜನ ಒಂದಕ್ಕೆ ನಾಲ್ಕು ರೂಪಾಯಿ.

ಡಬ್ಬಿಯು ಒಂದು ಡಜನಕ್ಕಿಂತಲೂ ಕಡಿಮೆ ಹೆಚ್ಚು ಕೊಡಲೋಣವಿಲ್ಲಾ ಎಲ್ಲರಿಗೂ ಪ್ಯಾಕಿಂಗ ಪೋಸ್ಟೇಜ ಮಾಫ. ಹೆಚ್ಚು ಮಾಲು ಬೇಕಾದವರು ಪತ್ರವ್ಯವಹಾರ ಮಾಡಬೇಕು. ವ್ಯಾಪಾರಸ್ಥರಿಗೆ ಬೋರ್ಡ ಘುಟ ಸಿಗುವವು.

ಪತ್ತೆ— [illegible] ಉಗಲೋಡ ಬ್ರದರ್ಸ [illegible]

೧೦೦ ಕ್ಕೆ ಒಂದು ವರ್ಷಕ್ಕೆ ಒಂದು ರೂಪಾಯಿ ಬಡ್ಡಿ ದರ.

ದಿ ಪಿಪಲ್ಸ ಓನ ಪ್ರಾವಿಡೆಂಟ ಆ್ಯಂಡ ಜನರಲ ಇನ್ಸುರನ್ಸ ಕಂಪನಿ ಲಿಮಿಟೆಡ ಪುಣೆ.

(Life) ಜೀವವಿಮಾ- ಪ್ರೀಮಿಯಮ ೧೦ ತಿಂಗಳಿಗೆ ೨ ರೂ, ೧ ರೂ, ಮತ್ತು ೮ ಆಣೆ ೧೦ ವರ್ಷಗಳ ಮೇಲೆ ಬೋನಸ ಮತ್ತು ಲಾಭ ಸಹಿತ ರಕಮು ಸಿಗುವದು

Marriage ಲಗ್ನಶಾಖೆ ದರ ತಿಂಗಳಿಗೆ ೨ ರೂಪಾಯಿಯಂತೆ ಪ್ರಿಮಿಯಮ ಕೊಡಬೇಕಾಗುವದು ಲಗ್ನದ ವೇಳೆಗೆ ರೂಪಾಯಿ ಕೊಡಲಾಗುವದು.

(Loan) ಸಾಲದಶಾಖೆ- ೧೦೦ ಕ್ಕೆ ವರ್ಷಕ್ಕೆ ಒಂದೇ ರೂಪಾಯಿ ಬಡ್ಡಿ ದರದ ಮೇಲೆ ೫೦ ರಿಂದ ೫೦೦೦ ರೂಪಾಯಿಗಳ ವರೆಗೆ ಜಮೀನು ಇಲ್ಲದೆ ಸಾಲ ದೊರೆಯುವದು

ಧಾರವಾಡ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ.
ಉತ್ಸಾಹೀ ಜನರಿಗೆ ಯೋಗ್ಯ ಕಮೀಶನ ದೊರೆಯುವದು.

ಪತ್ತೆ— ಡಾ|| ನಾಡಗೀರ ವ್ಹಿ. ಬಿ (ಹೋಮಿಯೋ) ಎಸ್. ಬಿ ಹಿರೇಕೇರೂರ ರು|| ಧಾರವಾಡ.

ನೋಟೀಸಿನ ಬಗ್ಗೆ.

—೦—

ಹಿಂಗಲ ಕಾಲಮಿನ ಹತ್ತು ವರ್ಷಗಳಿಗೆ [illegible] ಕವಾಯು ಮುಂದ ಪ್ರತಿಯೊಂದ [illegible] ಒಂದು [illegible] ಇಂಗ್ಲಿಷ ಕಲಿಯುವು [illegible] ಜನ [illegible] ಮ್ಯುನಿಸಿಪಾಲಿಟಿ [illegible] ಮಂಜೂರದ [illegible] ಇಂಗ್ಲಿಷ [illegible] [illegible]

ಮ್ಯಾನೇಜರ ವಿಜಯ ಧಾರವಾಡ.

ಚಂದಾದಾರರಿಗೆ ಸೂಚನೆ

—೦—

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ ಸ್ವೀಕಾರಮಾಡಿ ಉದ್ಯೋಗವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು [illegible] ಬಿಜಾಪುರ [illegible] ಇವರು [illegible] ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರಿಕೆ

ವಿಜಯ

ಬೆಲೆ ಅರ್ಧ ಆಣೆ

[illegible]

ವರ್ಷ ೯) ಧಾರವಾಡ ಸೋಮವಾರ ತಾರೀಖು ೧೮ ನೇ ಸಪ್ಟಂಬರ ೧೯೩೯ (ಸಂಚಿಕೆ ೨೦೫

ದಿ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ, ಧಾರವಾಡ.

ಸ್ಥಳ- ಮಂಗಳವಾರಪೇಟೆ, [illegible] ರಸ್ತೆ.

೧ ಈ ಬ್ಯಾಂಕಿನಲ್ಲಿ ದಾಗೀನಗಳ ಮೇಲೆ ಸಾಲವು ದರದಿಂದ ಕಡಿಮೆ ಮತ್ತು [illegible] ಕಡಿಮೆ ದರದಿಂದ [illegible] ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಎಂಬುದನ್ನು ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ಸಿಗುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ [illegible] ತಿಳಿಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ [illegible] ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ [illegible]

ಮ್ಯಾನೇಜಿಂಗ ಏಜಂಟ.

ದಿ ಧಾರವಾಡ ಅರ್ಬನ ಕೋ ಅಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಸನ್ ಕೋ ಅಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಕಾ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು [illegible] ಲಕ್ಷದ ಮೇಲ್ಪಟ್ಟು, [illegible] ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ಮತ್ತು ಬೇರೆ ತರದ [illegible] ಅನ್ನಾಗಿ ಬಡ್ಡಿ ದೊರೆಯುವದು.

[illegible] ತಿಳಕೊಳ್ಳಬೇಕು.

ಮಂಜುನಾಥರಾವ ಬಿ. [illegible],

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಬ್ಯಾಂಕಿನಲ್ಲಿ [illegible], [illegible] ತಿಂಗಳ [illegible] ಕರಾರಿನಿಂದ ಹಣವನ್ನು [illegible] ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು [illegible] ಕೊಳ್ಳುವ ಬಡ್ಡಿಯ ದರವು ನೂರಕ್ಕೆ [illegible] ತಿಂಗಳಿಗೆ [illegible] ಆಣೆಯಂತಿರುತ್ತದೆ.

ಎ. ಕೆ. [illegible]

ಮ್ಯಾನೇಜಿಂಗ ಡಾಯರೆಕ್ಟರ

—: ಶ್ರೀ ಗುರು ಪ್ರಸನ್ನ :—

ಪ್ರತಿಯೊಬ್ಬ ಕುಟುಂಬಿಕನು ಅವಶ್ಯ ಸಂಗ್ರಹದಲ್ಲಿಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ.

[illegible] ವನಸ್ಪತಿ [illegible] ಅಜೀರ್ಣ, [illegible] ಬೊಜ್ಜು, [illegible] ಉಂಟಾಗುವ [illegible] ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು [illegible] ಉಪಯೋಗವಾಗುವದು. [illegible] ಒಂದು ಡಬ್ಬಿಯ ಕಿಮ್ಮತ್ತು ೧೦ ಆ. [illegible] ಪೋಸ್ಟೇಜ ಖರ್ಚು ಪ್ರ. ೧ ಆಣೆ.

[illegible] ಧಾರವಾಡ.

ವಿಜಯದ ವರ್ಗಣೀ ದರ.

ನಿತ್ಯ ಪತ್ರಿಕೆ	
೧೨ ತಿಂಗಳಿಗೆ	೧೨-೮-೦ ರೂ.
೬ ,,	೭-೦-೦
೪ ,,	೪-೦-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೇಳುವ ವಿಳಾಸಕ್ಕೆ

ಮ್ಯಾ. ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೨೨-೯-೨೬ ನೇ ಇಸ್ವಿ

ಶ್ರೀ.

ವಿಜಯಂ ಶ್ರೀಕಟ್ಟಿಗಳು |
ನೇ [illegible] ನಲಿಸಿ ಸುಸಂತ ತರಿತೆಗೆ ||
ದ "ವಿಜಯಂ" ಶ್ರೀಕರಗಳು |
ನಾವಿಹೆತಗಳ ನಿವಾರಿಸಲಿಪ್ಪುವು [illegible] ||೨||

ಬೆಂಗಳೂರಲ್ಲಿ ಹಿಂದೂ ಮುಸಲಮಾನ ಕಲಹದ ವಿಕೋಪ.

ಬೆಂಗಳೂರಲ್ಲಿ [illegible] ಉಪಾಧ್ಯಾಯ ಮಾನಗ ಪ್ರತ್ಯಕ್ಷಾ-ಪ್ರತ್ಯಕ್ಷ ಪ್ರೇರಣೆಯಿಂದ ಶ್ರೀ ಸಿದ್ಧಿವಿನಾಯಕನ ವಿಗ್ರಹದ ಪುನಃ ಪ್ರತಿಷ್ಠಾಪನೆಗೆ ಒಂದ ವಿಷಯದ ಮೂಲಕ ಆದ ದಂಗೆಯು ಇನ್ನೂ ಶಾಂತವಾಗಿಲ್ಲ. ಮುಸಲಮಾನರು ತಮ್ಮವರೇ ಕೋರ್ಟರು ದಿವಾನರಾಗಿದ್ದಾರೆ, ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದಾರೆಂಬ ಹೆಮ್ಮೆಯಿಂದ ಹಿಂದೂ ಜನರ ಮೇಲೆ ಅತ್ಯಾಚಾರಗಳನ್ನು ನಡೆಸಲು ಎಷ್ಟು ಕಡಿಮೆ ಮಾಡಿಲ್ಲ. ಹಿಂದೂ ರಾಜ್ಯದಲ್ಲಿ ಮುಸಲಮಾನರು ಅನ್ಯಾಯವಾಗಿ, ಬೇಕೆಂದು ಬುದ್ಧಿಪೂರ್ವಕವಾಗಿ ಹಿಂದೂ ವಿಗ್ರಹಗಳನ್ನು ಭಿನ್ನ ಮಾಡಲಿಕ್ಕೆ ಉಂಟಾದ ಕಾರಣವನ್ನು ಶೋಧಿಸುತ್ತಾ ಹೋದರೆ ಅದರ ಉಗಮವು ಬ್ರಾಹ್ಮಣೇತರ ಜನತೆ ಹೊಂಗುತ್ತದೆ.

ಜಸ್ಟಿಸ ಪಕ್ಷದವರೇ ಮದ್ರಾಸ ಇಲಾಖೆಯಲ್ಲಿ ಹೂಡಿದ ಬ್ರಾಹ್ಮಣೇತರ ಚಳವಳಿಯ ಉದಯ ಮೈಸೂರ ರಾಜ್ಯದಲ್ಲಿಯೂ ಹುಟ್ಟಿತು. ಶ್ರೀ ಮಸ್ಸೂರಾಜರು ಬ್ರಾಹ್ಮಣೇತರರಾದರೂ, ಕೊಳ್ಳಪೂರದ ಮಹಾರಾಜರಂತೆ ಬ್ರಾಹ್ಮಣೇತರರೆಂದು ದುರಭಿಮಾನ ಮಾಡಲಿಲ್ಲ. ಕೊಲ್ಲಾಪೂರದವರು ಶ್ರೀ ರಾಮದಾಸಸ್ವಾಮಿಗಳನ್ನು ಮರೆತಂತೆ ಮೈಸೂರರಾಜರು ಬ್ರಾಹ್ಮಣ ಧರ್ಮ ಗುರುಗಳನ್ನು ಮರೆಯಲಿಲ್ಲ. ಸಂಸ್ಥಾನಕ್ಕೆ ಬ್ರಾಹ್ಮಣರಿಂದ ಅನಂತವಾಗಿ ಉಪಕಾರವಾಗಿದೆಯೆಂದೂ, ಈಗಲೂ ಸಹಾಯವಾಗುತ್ತಿರುವದೆಂದೂ [illegible] ಬಹಿರಂಗ ರೀತಿಯಿಂದ ಹೇಳಿ, ಬ್ರಾಹ್ಮಣೇತರರಿಗೆ ಅವಾಚಿತ [illegible] ಪ್ರಗತಿಯು ಪ್ರಥಮ ರಾಜ್ಯ ಕಾರಭಾರದಲ್ಲಿ ಪ್ರವೇಶ ದೊರೆಯುವಂತೆ ಚ[illegible]ಕ್ಕಾವನ ಕೊಟ್ಟರು. ಬ್ರಾಹ್ಮಣೇತರರಿಗೆ ಎಷ್ಟು ಭಾಗದಿಂದ ಕೆಲಸಗಳು ದೊರೆಯಬಹುದೆಂದು ಎ[illegible] ಮಿಲರ ಕಮಿಟಿಯನ್ನು ನೇಮಿಸಿದರು. ಈ ಕಮಿಟಿಯ ರಿಪೋರ್ಟ ಬ್ರಾಹ್ಮಣೇತರರಿಗೆ ಬಹಳವಾಗಿ ಅನುಕೂಲವಾದರೂ, ಬ್ರಾಹ್ಮಣೇತರರು ಕೆಲಸದಲ್ಲಿ ಜವಾಬದಾರಿಯನ್ನು ಬುದ್ಧಿಬಲವನ್ನೂ ತೋರಿಸದ್ದರಿಂದ, ಮಿಲರ ಕಮಿಟಿಯ ರಿಪೋರ್ಟಿನ ಕಾರ್ಯ ಕರ್ತವ್ಯ ಮೂಢವಾಗಿ ಕೂತಿರುತ್ತದೆ. ಈ ರೀತಿಯಿಂದ ಬ್ರಾಹ್ಮಣೇತರರ ಮುಸಲಮಾನರೂ ಒಂದಾಗಿ, ಸಂದು ಸಿಕ್ಕಾಗ, ದರಬಾರದ ಮೇಲೂ, ಸಾರ್ವಜನಿಕ ಸಂಸ್ಥೆಗಳ ಮೇಲೂ ನೇರು ಹಾಯಿಸಿಕೊಳ್ಳಲು ಉ[illegible] ಕೋಚಿತನ ಮಾಡುವರು.

ಬೆಂಗಳೂರು ಇವರಿಗೆ ದೊಂಬಿ ಹಾಕಲು ಮಧ್ಯಸ್ಥಳವಾಗಿದೆ. ಬಾಹ್ಮಣೇತರರ ನೇರು, ಬ್ರಾಹ್ಮಣರ ವಿರುದ್ಧ ಮ್ಯುನಿಸಿಪಾಲಿಟಿಯಲ್ಲಿ ಬಣ ಕಟ್ಟಿದ್ದಾರೆ. ಮಿ. ಪರಮೇಶ್ವರಯ್ಯನವರೂ, ಮಾನಬಹಾದ್ದೂರ [illegible]ನವರೂ ಜಂಗು ಕಟ್ಟಿದವರು. ಮಿ. ಪರಮೇಶ್ವರಯ್ಯನವರು ಚಕ್ರವಾಗಿ ಹೋದ ಬಳಿಕ ಖಾನಬಹಾದ್ದೂರರೇ ಸರ್ವ ಸೂತ್ರಗಳ ಚಾಲಕರಾದರು. ಆದರೆ ಈ ಖಾನಬಹಾದ್ದೂರರು ತಮ್ಮ ನಿಜವಾದ ಪರಿಸ್ಥಿತಿ ಮತ್ತು ಯೋಗ್ಯತೆಯನ್ನರಿಯದೆ, ಮೂರ್ಖತನ ಮಾಡುತ್ತಾ ಹೋಗುತ್ತಿದ್ದಾರೆ. ದಿವಾನರಂಥವರ ಭದ್ರ ಬುದ್ಧಿ ಬಳಿಕ ತಮಗಾದರು ಸರಿ ಎಂಬ ಹೆಮ್ಮೆ ತಟ್ಟಿದ್ದಾರೆ. ಬ್ರಾಹ್ಮಣೇತರರಾದರೂ, ಅವರಿಗೆ ಧರ್ಮಾಭಿಮಾನವುಂಟೆಂಬುದನ್ನು ಇವರು ಮರೆತು, ಅಥವಾ ತಮ್ಮ ಪ್ರಭುತ್ವ ನಡೆಸಬೇಕೆಂಬ ಅತ್ಯಭಿಮಾನದಿಂದ ಯಾವನ ವ್ಯಕ್ತಿಗೇ ಕುರಾನ ಹಾಕಬೇಕೆಂದರು. ಆದರೆ ಬ್ರಾಹ್ಮಣೇತರರೂ ಬ್ರಾಹ್ಮಣರೂ ಸೇರಿ ಅವಮಾನ ಕಿಡಿಗೇಡಿತನಕ್ಕೆ ಅವಕಾಶ ಕೊಡಲಿಲ್ಲ. ಇಷ್ಟೇ ಅಲ್ಲ, ಇವರ ಮಟ್ಟಿಗೆ ಮುಖ್ಯವಾಗಿ ಒಂದು ದಾಸೀದೆಸೆನ್ನು ಸ್ಥಳಾಂತರ ಮಾಡುವಂತೆ ಮ್ಯುನಿಸಿಪಲ ಠರಾವು ಪಾಸ ಮಾಡಿದರು. ಈ ಠರಾವು ಖಾನಬಹಾದ್ದೂರರನ್ನು ಹಂಗಿಸುವದಕ್ಕಿದ್ದರೂ, ಅದರ ಅನಿಷ್ಟ ಪರಿಣಾಮವು ಹಿಂದೂ ಮುಸಲಮಾನ ಮುಖಂಡರ ಮೇಲಾಯಿತು. ಅದೇ ಶ್ರೀ ಸಿದ್ಧಿವಿನಾಯಕನ ಪುನಃ ಪ್ರತಿಷ್ಠಾಪನೆಗೆ ಬಾಧೆ ತಂದು ಸಂಪು ಮತ್ತು ದಂಗೆಗೆ ಪ್ರವೃತ್ತಿ ನೀಡಿತು.

ದಂಗೆಯಾದನಂತರ ದರಬಾರಿನವರು ಕೈಕೊಂಡ ಉಪಾಯವು ಹಿಂದೂ ಜನರಿಗೆ ಸಮ್ಮತವಾಗಿಲ್ಲ. ಸರ ವಿಶ್ವೇಶ್ವರಯ್ಯನವರ ಕಮಿಟಿಯೂ ಬೆಟ್ಟಿಗೆಯದಾಗಿಲ್ಲ. ಯಾಕಂದರೆ ಮುಸಲಮಾನರ ಅತ್ಯಾಚಾರವೂ ನಿಶ್ಚಿತ. ಇದೇ ಸಮಯದಲ್ಲಿ ವಿನಾಯಕನ ಪೂಜೆಯು ಮುಂದೆ ಬಿದ್ದ[illegible]ಗ ಮಸೀದೆಯ [illegible] ದೊರೆತು ಹಿಂದೂ ಜನರು ಭಯಗೊಂಡಿದ್ದಾರೆ. ಈ ಸಮಯವನ್ನು ನೆರೆಹೊರೆಯ ಹೊರಗಿನ [illegible] ಯಾವ ರೀತಿಯ [illegible] ಚಿಂತನ ಮಾಡಬೇಕು.

ಅಸೆಂಬ್ಲಿಯ ಅಧ್ಯಕ್ಷರು ಮತ್ತು ಅವರ ಕೈ ಕೆಳಗಿನ ಕಾರ್ಯವಾದರು

—(೦)—

ಅಸೆಂಬ್ಲಿಯ ಅಧ್ಯಕ್ಷರು ಯಾರೇ ಇರಲಿ, ಅವರ ಮನಸ್ಸು [illegible], ಇವರ ಸ್ವತಂತ್ರ ಕಾರ್ಯ [illegible] ಉದ್ದೇಶದಿಂದ, ಸ್ವಾರ್ಥ ಅಥವಾ ಪಕ್ಷಭೇದ, ವೈಮನಸ್ಯ ಮುಂತಾದ್ದೇನೂ ತೋರಬಾರದು. ಯಾರೇ ಇದ್ದರೂ ಸಂಕರ ಶ್ರೀ ಪಟೇಲರು ಅಧ್ಯಕ್ಷರಾದ ಕೂಡಲೇ ಡೆಪ್ಯುಟಿ [illegible] ತೋರಿಸಿದರು. ಇವರು ಕೌನ್ಸಿಲ ಸೆಕ್ರೆಟರಿಯ [illegible] ದಂತಾದವರು [illegible] ಬಂದನಾಗಿ ಸೇವೆ ಮಾಡಿದರು. [illegible] ಸ್ವತಂತ್ರ ಭಿಮಾನ ಮತ್ತು ಸರಕಾರದ [illegible], ಅಧ್ಯಕ್ಷರ ಮತದ ವಿರುದ್ಧ [illegible] ಕೊಡುವನು. ಇಷ್ಟೇ ಅಲ್ಲದೆ, ಅಸೆಂಬ್ಲಿಯ [illegible] ವಿಷಯವಾಗಿ ಪತ್ರಿಕೆಗಳಿಗೆ [illegible] ಪತ್ರಗಳನ್ನು [illegible] ಅಧ್ಯಕ್ಷರಿಗೆ ತೋರಿಸಿಲ್ಲ. ಈ ಅಕ್ರಮ ಮತ್ತು ಸೆಕ್ರೆಟರಿಯ [illegible] ಯನ್ನು ಶ್ರೀ ಪಟೇಲರು ಗವ್ಹರ್ನರ ಜನರಲರ ಲಕ್ಷ್ಯಕ್ಕೆ ತರಲು, ಅವರು ಸೆಕ್ರೆಟರಿಯನ್ನು ಮುಂಬರಿ ಮಾಡುವದನ್ನು [illegible]. ಅದರೆ ಸೆಕ್ರೆಟರಿಯು ಅಧ್ಯಕ್ಷರಿಗೆ [illegible] ಸನಾಗಿ ಉಳಿದನು. ಸೆಕ್ರೆಟರಿಯು ತನಗೆ [illegible] ಗವ್ಹರ್ನರ [illegible]ಗೆ ಮಾಡಿದ ಸೂಚನೆಯು [illegible]. [illegible] ಶ್ರೀ ಪಟೇಲರು [illegible] ಕರ್ತವ್ಯಗಳ [illegible] ಮುಂದೆ [illegible] ಸರಕಾರ ಪಕ್ಷದಿಂದ ಕ್ರಮಸೇಲು [illegible]. ಅದರಲ್ಲಿ [illegible] ಅಧ್ಯಕ್ಷ ಮತ್ತು ಅಸೆಂಬ್ಲಿಯ [illegible] ಪ್ರಾಯಿಂದು [illegible] ಅಸೆಂಬ್ಲಿ [illegible] ಯಲ್ಲಿ [illegible]. ಈ ಬಗ್ಗೆ [illegible] ಮಾಡುವವು.

ಮದ್ರಾಸದ ನಾಯಮನ್ನು ಸಪ್ತಶರ ಸಹಕಾರಿಗಳು.

—(೦)—

ಮದ್ರಾಸದ ಕೌನ್ಸಿಲದಿಂದ ಈ ಕೆಳಗಿನ ಏಳು ಜನರು ಸಹಕಾರಿಗಳಾಗಿ ಆರಿಸಲ್ಪಟ್ಟಿದ್ದಾರೆ.

೧ ಮಿ ಕುಮಾರಸ್ವಾಮಿ ರೆಡ್ಡಿ.
೨ ಸರ ಪಟೆಸ್ರೀ.
೩ ವೆಂಕಟಗಿರಿಯ ಕುಮಾರ ರಾಜರು.
೪ ಮಿ. ಕಲಿಫುಲ್ಲಾ ಸಾಹೇಬ.
೫ ಮಿ. ಡೇನಿಯಲ ಥಾಮಸ.
೬ ಮಿ. ಪಿ ಶಿವರಾವ.
೭ ಮಿ. ಎಸ್. ಶಿವರಾಜ.

ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಸ್ಕೂಲ್ ಬೋರ್ಡಿನ ಮೆಂಬರರು.

೦ —

೧ ಶಿ[illegible] ಮಿ. ಬಾಗಿ.
೨ [illegible] ಮಿ. [illegible]ಶಾಂತಪ್ಪಾ ಮಿರಜಿ.
೩ [illegible] ಮಿ. ಗೂಡಿನಾಳ ವಕೀಲ
೪ [illegible] ಮಿ. ಹುಂಬಿಕೊಪ್ಪ ವಕೀಲ
೫ [illegible] ಮಿ. ಚನ್ನಬಸಪ್ಪಗೌಡರ.
೬ ಜನ
೧ ಮಿ [illegible] ಸೀಲಿ.
೨ ,, ಮಿ [illegible]ಪ್ಪ ಶೆಟ್ಟಿ.
೩ ,, ಬಿ [illegible] ಕಂಟಿ.
೪ ,, [illegible]

---

೬ ನೇ [illegible]ಗಳಲ್ಲಿ ಬಿನ್ನಹವು.

(೦) —

೩೦ ದಿವಸಗಳಲ್ಲಿ ೪ ಸಾವಿರ ಜನರು ಕೊಡಬೇಕು

— (೦) —

ಕಾಂಗ್ರೆಸ ಮೆಂಬರರನ್ನು ಮಾಡುವ ಕಾರ್ಯವನ್ನು ಕೈಕೊಂಡು ೧ ತಿಂಗಳಾಯಿತು. ಈ ಅವಧಿಯಲ್ಲಿ ಇಡೀ ಕರ್ನಾಟಕದಲ್ಲಿ ಸುಮಾರು ೩|| ಸಾವಿರ ಜನರು ಮಾತ್ರ ಮೆಂಬರರಾಗಿರುವರು. ನಮಗೆ ಉಳಿದ ಅವಧಿ ಎಂದರೆ- ಇನ್ನು ೩೦ ದಿವಸಗಳು ಮಾತ್ರ ಉಳಿದಿವೆ. ಈ ಅವಧಿಯಲ್ಲಿ ವಿಶ್ವ ಪ್ರಯತ್ನ ಮಾಡಿ, ನಮ್ಮ ಕಾರ್ಯವನ್ನು ಪೂರೈಸುವ ಸಂಕಲ್ಪ ಮಾಡದೇ ಕಾರ್ಯಕರ್ತರೆಲ್ಲರೂ, ಮನಸ್ಸು ಮಾಡಿದರೆ- ಇದೇನೂ ದೊಡ್ಡ ಕೆಲಸವಲ್ಲ. ಸ್ಥಳ ಸ್ಥಳಗಳಲ್ಲಿಯ ಮುಖಂಡರೂ ಕಾಂಗ್ರೆಸ ಕಮಿಟಿಗಳೂ, ಈ ಕಾರ್ಯವನ್ನು ಕೈಕೊಂಡು ಸೇವಾದಳಕ್ಕೆ ಸಹಾಯ ಮಾಡಬೇಕೆಂದು ವಿನಂತಿಸುವೆ.

ತಮ್ಮ
ಬಿಂದು ಮಾಧವ ಬುರ್ಲಿ
ಕ. ಪ್ರಾಂ. ಸಂಘಟಕ.
ಹು. ಸೇ. ದ.

ವಿವಿಧ ವರ್ತಮಾನಗಳು.

—(೦)—

ಮದ್ರಾಸ ಇಲಾಖೆಯಲ್ಲಿ ರಾಜಮಹೇಂದ್ರಿ, ಮಚಲಿಪಟ್ಟಣ ಮತ್ತು ವಿಶಾಖಾಪಟ್ಟಣ ಈ ಮೂರು ಜಿಲ್ಲೆಗಳಲ್ಲಿ ಸರಕಾರದವರು ರೆಡ್ಡಿ ಜನ ಮಾಡಿ, ಕಪ್ಪವನ್ನು ಹೆಚ್ಚಿಸತಕ್ಕವರಿದ್ದಾರೆ ರೈತರೂ, ಲೋಕನೇತ್ಯರೂ ಬಾರಡೋಲಿಯ ಅನುಕರಣ ಮಾಡಿ, ಈ ರೆಡ್ಡಿ ಜನ ವಿರೋಧಿಸುವ ಚಳವಳಿ ಪ್ರಾರಂಭಿಸಿದ್ದಾರೆ.

ಗರಿಯೂರ ತಾಲೂಕಿನ ಮಾಮಲೇದಾರರು ಕಾನವಾಡಿಯಲ್ಲಿ ಒಬ್ಬ ರೈತನನ್ನು ಹೊಡೆದರು. ಆಲ[illegible] ಕುಲಕರ್ಣಿಯು ರೈತನಿಗೆ ಮಾಮಲೇದಾರರ ಮೇಲೆ ಫಿರ್ಯಾದಿ ಮಾಡಗೊಡಲಿಲ್ಲ. ಈ ಬಗ್ಗೆ ಕೌನ್ಸಿಲದಲ್ಲಿ ಪ್ರಶ್ನ ಮಾಡಲು ಅಧಿಕಾರಿಗಳು ಕಿವಿಯ ಮೇಲೆ ಕೈ ಇಟ್ಟುಕೊಂಡಂಥ ಉತ್ತರ ಕೊಟ್ಟರು. ರೈತನು ಮಾಮಲೇದಾರರನ್ನು ಹೊಡೆದಿದ್ದರೆ?

ನಿಜಾಮ ಹೈದರಾಬಾದಿನಲ್ಲಿ ಮಹಮ್ಮದಪೈಗಂಬರರ ಜನ್ಮೋತ್ಸವವು ಬಹು ಸಮಾರಂಭದಿಂದ ನೆರವೇರಿತು. ನಿಜಾಮ ಸಾಹೇಬರು ಸೇನಾ ಪರಿವೃತರಾಗಿ ಮೆರವಣಿಗೆಯಿಂದ ಜುಮ್ಮಾ ಮಸೀದಿಗೆ ಬಂದು ನಮಾಜ ಮಾಡಿದರು.

ವರ್ಗಾಡಕ್ಕೆ ಸೇರಿದ ಯುವಕಮಾಳದಲ್ಲಿ ಮ್ಯುನಿಸಿಪಾಲಿಟಿಯ ಜಕಾತಿಯ ಹಣವನ್ನು ಬ್ಯಾಂಕಿಗೆ ಕಳಿಸುವದಕ್ಕೆ ಕಡತಾಗಲು ಆಫೀಸಿನಲ್ಲಿಯೇ ಇಟ್ಟರು. ರಾತ್ರಿಯಲ್ಲಿ ಕಳ್ಳರು ಅದನ್ನು ತಮ್ಮ ಭಸ್ಮಕುಕ್ಷಿನಲ್ಲಿ ಹಾಕಿಕೊಂಡರು.

ಸ್ವಾಮಿ ಶ್ರದ್ಧಾನಂದರ ಚಿರಂಜೀವರಾದ ಪ್ರೊಫೇಸರ ಇಂದ್ರರು ೫೦ ಸಾವಿರ ರೂಪಾಯಿ ಬಂಡವ[illegible] ಒಂದು ಕಂಪನಿ ತೆಗೆದು ಲಿಬರೇಟರ ಎಂಬ ಇಂಗ್ಲಿಷ ವಾರಪತ್ರಕ್ಕೆ ಪ್ರ[illegible] ಕೊಡುವರು.

ಸರ ಅಲ್ಲಿ ಇಮಾಮಸಾಹೇಬರು ಪುನಃ ಹೈದರಾಬಾದ ಸಂಸ್ಥಾನದ ದಿವಾನರಾಗುವರೆಂದು ದಟ್ಟ ವರ್ತಮಾನವಾಗಿದೆ.

ಜಾಹೀರ ನೋಟೀಸು

ಶಿದ್ದಪ್ಪ ತಂದಿ ನಿಂಗಪ್ಪಾ ಶಿದ್ದಪ್ಪನವರ ಸಾಕೀನ ಅರೇಕಟ್ಟಿ ತಾಲೂಕ ಕೋಡ ಇವನಿಗೆ-

ಹನಮವ್ವಾ ಕೋಂ ಉಜ್ಜಪ್ಪಾ ಶಿದ್ದಪ್ಪನವರ ಸಾಕೀನ ಅರೇಕಟ್ಟಿ ಹ ಲಿನಸ್ಸಿ ಭೋಗಾವಿ ತಾಲೂಕ ಕೋಡ ನಾನು ಈ ನೋಟೀಸಿನ ಮೂಲಕ ತಿಳಿಸುವದೇನಂದರೆ- ಅರೇಕಟ್ಟಿ ಗ್ರಾಮದಲ್ಲಿ ನನ್ನ ಹೊಲ[illegible] ಖಾತೆ ಇದ್ದು ನನ್ನ [illegible] ಜಮೀನುಗಳು [illegible] ಹುಟ್ಟಲು ಸಹಾ ಇರುತ್ತವೆ ಇವುಗಳನ್ನು [illegible] ಮಾಡಬೇಕೆಂತ ನಿನ್ನ ಅಣ್ಣನಾದ [illegible] ಮತ್ತು ನೀನು ಕೂಡಿಕೊಂಡು ನನ್ನ [illegible] ಯಿಂದ ನಡಿಸಲಿಕ್ಕೆ [illegible] ನನ್ನ ಗಂಡ [illegible] ವಂತ ಇರುವಾಗ್ಗೆ [illegible] ದ್ದೇ ಇತ್ತು ನನ್ನ ಗಂಡ ಸತ್ತು [illegible] ನನ್ನ ಗಂಡನದೇ ಇತ್ತು [illegible] ನಿನ್ನ ಗಂಡ ಸತ್ತ ಮೂಲಕ [illegible] ಮಾಡಬೇಕೆಂಬ [illegible] ಕಛೇರಿಯಲ್ಲಿ [illegible] ಕೊಟ್ಟಾಗ [illegible] ಮಾಡುತ್ತಿದ್ದಾಗ [illegible] ನನ್ನನ್ನು [illegible] ಮೇಲೆ [illegible] ಆಗ್ಗೆ ನಾನು [illegible] ಕಡಿಗೆ ನೀವು [illegible] ಮೇಲೆ [illegible] ನಿನ್ನ ಖಾತೆ [illegible] ಯಾವ ಕಾಗದಕ್ಕೆ ಸಹಿ ಮಾಡಿಕೊಂಡಿರಿ ಅನ್ನುವದು ನನಗೆ ತಿಳಿಯಲಿಲ್ಲ, ಕೆಲವು ದಿನಗಳ[illegible] ನಿನ್ನ ಅಣ್ಣ [illegible] ದನು. [illegible] ನನ್ನ [illegible] ಪ್ರೀತಿಯಿಂದ [illegible] ನಿನ್ನನ್ನು [illegible] ನನ್ನ ಗಂಡನ ಅಣ್ಣ [illegible] ನನಗೆ [illegible] ನಿನ್ನನ್ನು [illegible] ನನಗೆ [illegible] ನಿನ್ನ [illegible]

R. N. B. 1449

ಸಾಪ್ತಾಹಿಕ **ವಿಜಯ** ಬೆಲೆ ಒಂದು ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ

ವರ್ಷ ೯) ಧಾರವಾಡ ಮಂಗಳವಾರ ತಾರೀಖು ೧೧ ನೇ ಸಪ್ಟಂಬರ ೧೯೨೮ (ಸಂಚಿಕೆ ೩೪

ವಿಜಯ.

ಧಾರವಾಡ ತಾ- ೧೧-೯-೨೮ ನೇ ಇಸ್ವಿ.

ಮಿ. ಶಿವಲಿಂಗಪ್ಪನವರ ಸರದಾರಿ ಉಳಿಯಿತು.

ಧಾರವಾಡ ಜಿಲ್ಹೆಯಲ್ಲಿ ಸಬ್ಇನ್ಸಪೆಕ್ಟರರಾಗಿದ್ದ ಮಿ ಶಿವಲಿಂಗಪ್ಪನವರ ಹೆಸರು ಕೇಳದವರಾರೂ ಇಲ್ಲ. ಈ ಗೃಹಸ್ಥರು ಬೇಡರ ಜಾತಿಯವರು. ಪೋಲೀಸಖಾತೆಯಲ್ಲಿ ಸಿಪಾಯಿಯಿಂದ ಪ್ರಾರಂಭ ಮಾಡಿ, ಸಬ್ಇನ್ಸಪೆಕ್ಟರರ ಪದವಿಗೆ ಏರಿದವರು. ಸಿಲ್ವರನ ಗ್ರೇಡಿನಲ್ಲಿ ಸಹ ಇವರು ಬಂದು, ಹೆಚ್ಚಿನ ಪದವಿ ಹೊಂದಿ, ಸಬ್ಇನ್ಸಪೆಕ್ಟರ ಕೆಲಸದಿಂದ ಜವಾಬದಾರಿಗೆ ... ಈ ವಿಷಯದ ... ಹೆಚ್ಚಿನ ... ಈ ಜಿಲ್ಹೆಯಲ್ಲಿ ಇಲ್ಲವೇ ಇಲ್ಲ ... ಧಾರವಾಡದ ಗೂಢಚಾರನ ಪ್ರಕರಣದಲ್ಲಿ "ಶಿವಲಿಂಗಪ್ಪ ಫೌಜದಾರ, ಇಂಥಾ ಸರದಾರ" ಎಂದು ಇವರು ಒಂಗಿನವರಿಂದ ಮಾತ್ರವಲ್ಲ, ಇತರರ ಯೋಗ್ಯತೆಯವರೆಂದು ... ಅಧಿಕಾರಿಗಳಿಂದ ... ಅನಿಸಿ ಕೊಂಡಿದ್ದರೂ ಸಲ್ಲುವದು. ಇವರು ಪೋಲಿಸಖಾತೆಯಲ್ಲಿ ಸೇರಿ ೩೨ ವರ್ಷವಾಯಿತು. ಒಂದು ತಾಕೀದಿ ಇಲ್ಲ, ದಂಡವಿಲ್ಲ; ಶಿಕ್ಷೆ ಕರಾ ಇಲ್ಲ. ಒಮ್ಮೆ ಪೋಲಿಸರೇ ... ತಗಲಿಸುವದು ಇವರ ಆಯುಷ್ಯದಲ್ಲಿ ಎರಡೆ ಗುಂಡು ಒಡೆದಂತಾಯಿತು. - ಮಿ ಶಿವಲಿಂಗಪ್ಪನವರಿಗಾದ ಹಿಂಬಡತಿಯು ಅವರ ಮಟ್ಟಿಗಲ್ಲ. ಅನೇಕ ಜನ ಸಬ್ಇನ್ಸಪೆಕ್ಟರರು ಹಿಂಬಡತಿ ಹೊಂದಿದ್ದಾರೆ ತುರುಂಗ ಕಂಡಿದ್ದಾರೆ ಅವು ಪೋಲಿಸಖಾತೆಯಲ್ಲಿ ನಿತ್ಯ ಸತ್ಕರ್ಮ ಆಗುವವರಾ ರೆಂಬಂತಿರುತ್ತವೆ. ಅವೆಲ್ಲ ಮೇಲಿನ ಶಿಕಾರಿಗಳು. ಆದರೆ ಶಿವಲಿಂಗಪ್ಪನ ಶಿಕಾರವು ಹಾಗಲ್ಲ, ಗೂಢ ಶಿಕಾರದ ಬೇಟೆ ಹೊಡೆದಂತೆ. ಆದ್ದರಿಂದ ಇವರಿಗಾದ ಹಿಂಬಡತಿಯು ಲೋಕ ಚರ್ಚೆಯದಾಯಿತು. ಇವರನ್ನು ಇನ್ನೂ ಹಿಂಬಡತಿಗೆ ಹಾಕಿ, ಸಿಪಾಯಿ ಮಾಡಿ, ಹವೇಲದಾರಿ ಕೆಲಸಕ್ಕೆ ತರುವೆಂದೂ ವರ್ತಮಾನವಾಯಿತು.

ಶಿವಲಿಂಗಪ್ಪನವರು ಧಾರವಾಡದಲ್ಲಿರುವ ಶಹರ ಪೋಲೀಸ ಠಾಣೆಯ ಮುಖ್ಯಸ್ಥಾನದಲ್ಲಿದ್ದರು. ಧಾರವಾಡದಿಂದ ಹುಬ್ಬಳ್ಳಿಗೆ ಹೋದದ್ದು ಮತ್ತಷ್ಟು ಉಚ್ಚಸ್ಥಾನವಾಯಿತು. ಅಲ್ಲಿ ಇವರು ಹೋದ ಬಳಿಕ ಗುನ್ಹೆಗಳ ಸಂಖ್ಯೆಯು ಮಿತಿ ಮೀರಿತು. ಒಂದು ವರ್ಷದಲ್ಲಿ ಇನ್ನೂರಕ್ಕಿಂತ ಹೆಚ್ಚು ಗುನ್ಹೆಗಳು ರಜಿಸ್ಟರಕ್ಕೆ ಏರುತ್ತಿದ್ದಿಲ್ಲ. ಇವರ ಕಾಲದಲ್ಲಿ ಇವು ಇಮ್ಮಡಿಸಿ ನಾಲ್ಕುನೂರಕ್ಕಿಂತ ಹೆಚ್ಚಾದವು ಊರ ತುಂಬ ಬೊಬ್ಬಾಟವಾಯಿತು. ಆಗ ಪೋಲಿಸಖಾತೆಯ ಇಬ್ಬರು ಅಸಿಸ್ಟಂಟ ಸುಪರಿಂಟೆಂಡಂಟರು ಮಾತ್ರವಲ್ಲದೆ, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರೂ ಗುನ್ಹೆಗಳ ತಪಾಸ ಮಾಡಿ, ಮಿ ಶಿವಲಿಂಗಪ್ಪನವರ ತಪಾಸಣೆಯು ಯೋಗ್ಯವೆಂದೂ, ಗುನ್ಹೆಯ ರಜಿಸ್ಟರ ಸರಿಯಾಗಿರುತ್ತವೆಂದೂ ಕೆಲಸ ಉತ್ತಮವೆಂದೂ ಮನಗಂಡರು. ಇದೇ ವೇಳೆಯಲ್ಲಿ ಸಿಲ್ವರನ ಗ್ರೇಡಿನಲ್ಲಿ ಹೆಸರು ಹಾಕಿದಂತೆ ಇವರಿಗೆ ಮೇಲಾಧಿಕಾರಿಗಳಿಂದ ಒದಗು ಬಂತು. ಇದು ಯಶಸ್ವಿಯು ಮಾಡಿದಂತೆ ಈ ಗ್ರೇಡಿನ ಬಡತಿಯನ್ನು ತಡಕಡಿ ಮಾಡಿ ಅಂತೆ ಒಳೆದು ಬಂತು.

ಇದಕ್ಕೆ ಇದರ ಹಿಂದೆಯೇ ಕ್ರಿಮಿನಲ ಸೆಟಲಮೆಂಟದವರು ಮಾಡುತ್ತಿರುವ ಕಳವು ತುಡುಗುಗಳೇ ಕಾರಣವೆಂಬ ಬಲವಾದ ಸಂಶಯವುಂಟಾಯಿತು. ಸೆಟಲಮೆಂಟದವರು ಕಳವು ತುಡುಗು ಮಾಡುವರು ಅವರ ಅಧಿಕಾರಿಗಳು ಅವನ್ನು ಮುಚ್ಚಿಕೊಳ್ಳುವರೆಂಬ ಬೊಬ್ಬಾಟವಾಯಿತು. ಶಿವಲಿಂಗಪ್ಪನು ಇವುಗಳ ತಪಾಸು ಮಾಡಿ, ಈ ಆರೋಪವು ಬಹುಮಟ್ಟಿಗೆ ನಿಜವಿರುತ್ತದೆನ್ನುವಂತೆ ಸಿದ್ಧ ಮಾಡಬಲ್ಲ ... ಹೀಗಾಗಿ ಸೆಟಲಮೆಂಟದ ಆಫೀಸರರಿಗೂ ಇವರಿಗೂ ದ್ವೇಷ ಬಿದ್ದು, ಸೆಟಲಮೆಂಟದ ಯುರೋಪಿಯನ್ನ ಕಾಮದಾರರು ... ಸಾಹೇಬರ ಮುಂದೆ ಬಲವಾಗಿ ... ಕೆಲು, ಅವರು ಈ ವಿಚಾರಣೆ ಎಸ್ಸ ... ಮೊದಲು ಮಿ ಶಿವಲಿಂಗಪ್ಪನವರನ್ನು ಪರಸ್ಥಳಕ್ಕೆ ವರ್ಗ ಮಾಡಿ ಅನೇಕವಾಗಿ ಸಾಕ್ಷೀ ಪುರಾವೆಗಳನ್ನು ತಕ್ಕೊಳ್ಳಲುಪಕ್ರಮಿಸಿದರು. ಇದರಲ್ಲಿ ಪಟ್ಟೆಯವರಾದ ರಾವಸಾಹೇಬ ಜಗದಾಳೆ ಸಬ್ಇನ್ಸಪೆಕ್ಟರ ಮಿ. ಜಂದಾಪುರಕರ ಮೊದಲಾದವರು ಮುಖ್ಯ ಭಾಗ ತಕ್ಕೊಂಡರು. ವಿಚಾರಣೆಯ ವೇಳೆಯಲ್ಲಿ ದಿನಾಲು ತರತರದ ಸುದ್ದಿಗಳು ಕೇಳಿಬರುತ್ತಿದ್ದವು. ಹಾದಿಗುಂಟ ಬೀದಿಗುಂಟ ಒದರುವ ಸುದ್ದಿಗಳನ್ನು ಕೇಳಿ, ಅನೇಕರು ಮಿ. ಶಿವಲಿಂಗಪ್ಪನವರ ಅವತಾರ ಸಮಾಪ್ತಿಯಾಯಿತೆಂದು ಸ್ಪಷ್ಟವಾಗಿ ಮಾತಾಡುತ್ತಿದ್ದರು. ಆದರೆ ಈ ವಿಚಾರಣೆಯೆಲ್ಲ ಗುಡ್ಡ ತೋಡಿ, ಇಲೀ ತೆಗೆದಂತಾಯಿತು.

ಮಿ ಶಿವಲಿಂಗಪ್ಪನವರ ಮೇಲೆ ಬಂದ ಅನೇಕ ಆರೋಪಗಳಲ್ಲಿ ಎರಡೇ ಆರೋಪಗಳುಳಿದವು. ಕೆಲವು ಆರೋಪಗಳ ವಿಷಯದಲ್ಲಿ ಇವರ ಗೈರಹಾಜರಿಯಲ್ಲಿ ಜನರ ಜವಾಬು ತಕ್ಕೊಂಡಿದ್ದರೆ ಹೀಗೆ ಒಬ್ಬನ ಬೆನ್ನ ಹಿಂದೆ ಆತನಿಗೆ ತಿಳಿಯದೆ ಜನರ ಜವಾಬು ತಕ್ಕೊಂಡು, ಆ ಪ್ರಕಾರ ಹುಕುಮು ಮಾಡುವದು ಪೋಲೀಸ ಕಾಯದೆಯ ಪ್ರಕಾರ ಕಾಯದೇಶೀರವಾಗುತ್ತದೆಂದು ಮುಂಬಯಿ ಅಥವಾ ರಾವಸಾಹೇಬ ಜಗದಾಳೆಯವರೆಂದರೂ, ಅದು ಸಾಮಾನ್ಯವಿಚಾರ ದೃಷ್ಟಿಯಿಂದ ಸಮಂಜಸವಾಗಲಾರದೆಂದು ಯಾರೊಬ್ಬರು ಹೇಳುವರು. ಇವರ ಗೈರಹಾಜರಿಯಲ್ಲಿ ತಕ್ಕೊಂಡ ಜವಾಬುಗಳು ಆರೋಪಿಗೆ ಸಂಶಯದ ಫಾಯದೆ ಕೊಡುವಂತಹಗಿರುತ್ತವೆಂದು ಸಹಜವಾಗಿ ಧ್ವನಿತವಾಗುತ್ತವೆ. ಇವರ ಮೇಲೆ ಉಳಿದ ಪ್ರಕರಣಗಳಾದರೂ ಬಹಳೇ ಕಡಿನೆಯು ಕರಗ ... ಒಂದು ಬೆಳ್ಳಿಯ ಕೋಡೆಯದು. ಎರಡನೆಯದು ಅಂದೆಘಟ್ಟದಲ್ಲಿ ಹೋಗುವಾಗ ಪೋಟಾರ ಜಕಾತಿ ಕೊಡಲಿಲ್ಲೆಂಬುದು. ಇವೆರಡೂ ಪುರಾವೆಯಿಂದ ಸಿದ್ಧವಾಗಲಿಲ್ಲ. ಆದ್ದರಿಂದ ಇವರು ಸಹಜವಾಗಿ ದೋಷಾರೋಪದಿಂದ ಮುಕ್ತರಾಗಲು ಸಿದ್ಧವಾದವು

ಮಿ. ಶಿವಲಿಂಗಪ್ಪನವರ ಮೇಲೆ ಪುರಾವೆಯ ಸಹಾಯವಾಗದಲು ಹುಬ್ಬಳ್ಳಿಯ ಪರಿಸ್ಥಿತಿಯೂ ಕಾರಣವಾಯಿತು. ರಾ. ಬ. ಕೆಂಬಳಿ ಮೊದಲಾದ ಪ್ರತಿಷ್ಠಿತರೆಂಬ ಗೃಹಸ್ಥರ ... ಹಸ್ತಕರೆಂಬ ಭಾವನೆ ... ದರೆ ಮಿ. ಶಿವಲಿಂಗಪ್ಪನವರು ಇಂದವರ ... ದಲ್ಲಿ ಇಳಿಯುವಂಥವರಲ್ಲ. ಧಾರವಾಡದಲ್ಲಿ ರಾ. ಬ. ಗೋಪಾಳಗಿರಿಯವರಿಗೂ ಇವರಿಗೂ ಇದೇ ಪ್ರಕಾರ ಜಗಳ ಬಿದ್ದಿತ್ತು. ... ಷ ಯಾರ ದಾಕ್ಷಿಣ್ಯವಿ ... ದ್ಧವಾದ ಸ್ಥಿತಿಯು ಮನೆತನದವರ ಮೇಲೆ ... ನಡೆಸಿದ್ದರು ಮಿ. ಶಿವಲಿಂಗಪ್ಪನವರ ಮೇಲೆ ಮೆ. ಹಾಲಂಸಸಾಹೇಬರು ವಿಚಾರಣೆಯನ್ನು ಪ್ರಾರಂಭ ಮಾಡಿದ ಕೂಡಲೆ ಇವರ ವಿಷಯವಾಗಿ ತಮ್ಮ ... ದ ಸೊಂದ ಅನೇಕ ಜನರು ಪ್ರತಿಕೂಲರಾಗಿ ನಿಂತರು. ಆದ್ದರಿಂದ, ಈ ಸಮಯದಲ್ಲಿ ಮುಗಿಯಬೇಕಾಗಿದ್ದ ವಿಚಾರಣೆಯು ಘನವಾಗಿ ಬೆಳೆಯಿತು. ಕಡೆಗೆ ಗುಡ್ಡವಾಯಿತು ... ಯಲ್ಲಿ ಮಿ. ಶಿವಲಿಂಗಪ್ಪನವರು ನಿರ್ದೋಷಿಯಾಗಿ, ಮೊದಲಿನ ಸಬ್ಇನ್ಸಪೆಕ್ಟರ ... ದೊರೆಯಿತು. ಸರದಾರಿಯು ಅವರ ಕೂಡ ಉಳಿಯಿತು

ಮಿ! ಶಿವಲಿಂಗಪ್ಪನು ... ... ಬ್ರಾಹ್ಮಣೇತರನು. ಬ್ರಾಹ್ಮಣೇತರ ಮುಖಂಡರಾದ ... ಧಾರವಾಡದ ಪಾಟೀಲ ... ಕೆಂಬಳಿಯವರು ಇವರಿಗ ... ಲ್ಲಿ ಸಹಾಯ ಮಾಡಬೇಕಾಗಿತ್ತು. ರಾ. ... ಬ್ರಾಹ್ಮಣೇತರ ಪಕ್ಷಕ್ಕಿರುವ ಅಧಿಕಾರವು ದೊಡ್ಡ ಪೇರಣಕವಾದರೂ ... ಒಂದೇ ಆಗಿಲ್ಲವೆ? ಈ ಗುಂಪಿನವರ ಸಹಾಯವು ಮಾಡುವದೊಂದೆಡೆ ಇದ್ದಿರಲಿ, ಇವರಿಗೆ ಅಷ್ಟು ಮಟ್ಟಿಗೆ ವಿರೋಧವನ್ನೇ ಬೆಳೆಸಿದರೆಂದು ಅಸ್ವಾಭಾವಿಕವಲ್ಲ. ಬ್ರಾಹ್ಮಣೇತರ ಮುಖಂಡರೇ ಕೈಬಿಟ್ಟ ಬಳಿಕ ಇವರಿಗೆ ಸಂಕಟ ಒಂದಾಗ ನಿಜವೆಂಕಟರಮಣನೆಂಬಂತಾಗಿ ಸಹಾಯವಾಡಿದವರಾರು ಯಾರು? ಯಾವ ಅಸಹಕಾರಿಗಳನ್ನು ಬೊಗ್ಗಳೆಯಬೇಕೆಂದು ಮಿ. ಶಿವಲಿಂಗಪ್ಪನವರು ಪ್ರಯತ್ನಶಾಲಿಗಳಾಗಿದ್ದರೋ? ಆ ಅಸಹಕಾರಿಗಳೇ ಇವರಿಗೆ ಸಹಾಯಮಾಡಿ, ಇವರ ಕೆಲಸ ಹೋಗದಂತೆ, ಸರಕಾರದಲ್ಲಿ ದೊರಕಿಸಿದ ಗೌರವವನ್ನು ಉಳಿಸಿಕೊಟ್ಟರು. ಮುನಸಿಪಾಲ್ಟಿ ಪ್ರೆಸಿಡೆಂಟ ... ಜೋಶಿಯವರು ಅಸಹಕಾರಕ್ಕಾಗಿ ತಿ. ಕೃಷ್ಣ ಒಸ್ಟ ಸ್ಥಾನ ಕಂಡಂದರು. ವಕೀಲಿಯ ಸನದು ... ಮಾಡಿಸಿಕೊಂಡರು. ಅಂಥವರು ಮಿ. ಶಿವಲಿಂಗಪ್ಪನವರಿಗೆ ಅಭಯಕೊಟ್ಟು, ವಕೀಲಿ ಹಿಡಿದು, ಸಾಕ್ಷಿಗೆ ನಿಂತು, ಅಪೀಲ ಅರ್ಜಿ ಬರೆದು ಎಲ್ಲ ರೀತಿಯಿಂದಲೂ ಸಹಾಯಮಾಡಿದರೆಂಬ ಸಂಗತಿಯನ್ನು ಕೇಳಿ, ಓದಿ, ಜನರು ಆಶ್ಚರ್ಯಚಕಿತರಾಗಬಹುದು. ಈ ವೇಳೆಯಲ್ಲಿ ಧಾರವಾಡದ ಇನ್ನೊಬ್ಬ ಅಸಹಕಾರಿಯಾದ ಶ್ರೀ ವಿಠ್ಠಲರಾವ ಜೋಶಿಯವರು ಸಹಾಯಕರಾಗಿದ್ದರೆಂಬುದನ್ನು ವಿಶೇಷವಾಗಿ ನೆನಪಿನಲ್ಲಿಡಬೇಕಾದದ್ದು. ಬ್ರಾಹ್ಮಣೇತರ ಪುಕ್ಕಟೆ ಸಹಕಾರವೆಂಬುದು ಬರೇ ದಿವಾಕಿನ ಆಡಂಬರಗಳಾಗಿದ್ದು, ನಿಜವಾದ ಸಹಾಯವು ನಿಸ್ವಾರ್ಥಿ ಮತ್ತು ದೇಶ ಹಿತೈಷಿಗಳಿಂದಲೇ ದೊರೆಯುವದೆಂದು ಮಿ ಶಿವಲಿಂಗಪ್ಪ ಮತ್ತು ಇವರಂತೆ ಬೇರೆ ಜನರಿಗೆ ಈಗಲಾದರೂ ಹೊಳೆಯಲಿ. ತಿಳಿಯಲಿ, ದ್ವೇಷ ಮತ್ತು ಮತ್ಸರವೆಯ ಮೇಲೆ ಗಂಡಾಂತರ ಬಂದಾಗ ಸಹಕಾರಿಗಳೆಂಬವರು ನೋಡಿಕೊಂಡಾಗ ಸಹ ನೆರವಾಗಲಿಲ್ಲವಲ್ಲ!! ಅಸಹಕಾರಿಗಳು ಯಾವ ವೈಷಮ್ಯ ಹಿಡಿಯದ, ತಮಗೆ ಮಾಡಿದ ಸಹಾಯದ ಉಪಕಾರವನ್ನು ಮಿ. ಶಿವಲಿಂಗಪ್ಪನವರು ಕೃತಜ್ಞತೆಯಿಂದ ನೆನೆಸಿದರೆ ಯಾವ ಕಾರಣದಿಂದಲೇ ಆಗಲಿ, ತಿಳಿದು ಅಥವಾ ತಿಳಿಯದೆ ಆದಂದ ಪಾಪ ಭಾಗವನ್ನು ಕೆಲವಂತೆಯಾದರೂ ಕೊಳೆದುಕೊಳ್ಳಬಹುದಾಗುತ್ತದೆಂದು ತಿಳಿಯುತ್ತೇವೆ.

ಹೊರಗೆ ... , ಒಳಗೆ ದುರ್ಜನರು

... ಪತ್ರದಲ್ಲಿ ಬಂದಂಗದಲ್ಲಿ ... ಯೂಟ್ಟಿಯಲ್ಲಿ ದುರ್ಜನರು ಎಂಬ ... ದು ಲೇಖ ಬಂತು ಇದು ಬ್ರಿಟಿಶ ರಾಜನೀತಿಗೆ ಸಂಬಂಧಿಸಿದ್ದೆಂದು ಆರೋಪ ಹೊರಿಸಿ, ಬಂಗಾಲ ಸರಕಾರದವರು ... ದಿವಾಡಿದರು. ಮ್ಯಾಜಿಸ್ಟ್ರೇಟರು ಇವರಿಗೆ ಒಂದು ತಿಂಗಳ ಸಾದಾ ಕೈದು ಸಾವಿರ ರೂಪಾಯಿ ದಂಡದ ಶಿಕ್ಷೆ ವಿಧಿಸಿದರು.

ವಸಾಹತಿನವರಿಗೂ ಸಂಪೂರ್ಣ ಸ್ವಾತಂತ್ರ್ಯ ಬೇಕು

—(೦)—

ಸರ್ವ ಪಕ್ಷಗಳ ಪರಿಷತ್ತಿನ ಧ್ಯೇಯವು ವಸಾಹತಿನ ಸ್ವರಾಜ್ಯವಾಯಿತು ಅಂದ ಬಳಿಕ ನೀತಿ ಕಾಂಗ್ರೆಸದವರು ಪೋರಾಜ ಪಂಚಮ ಜಾರ್ಜರೆಂದು ಇಂಗ್ರೇಜಿ ರಾಷ್ಟ್ರಗೀತವನ್ನು ಹಾಡಿರೆಂದು ಈ ದೇಶದಲ್ಲಿ ವಾಸವಾಗಿರುವ ಇಂಗ್ರೇಜಿ ಜನರು ಹಿಂದೀ ಜನರಿಗೆ ತಕ್ಕಾ ಬಗೆಯಿಂದ ಹೇಳುತ್ತಲಿದ್ದಾರಷ್ಟೇ. ಸರ್ವ ಪಕ್ಷದವರು ವಸಾಹತಿನ ಸ್ವರಾಜ್ಯ ಬೇಕೆಂದ ಕೂಡಲೆ ಅದನ್ನೇನು ಇಂಗ್ಲಿಶ ಜನರು ಕೊಟ್ಟಂತಾಯಿತೆ? ಆ ವಸಾಹತಿನ ಸ್ವರಾಜ್ಯ ದೊರೆಯಬೇಕಾದರೆ ಎಷ್ಟು ಕಂಪಕಾಲ ಕಳೆಯುವದೋ ದೇವರೇ ಬಲ್ಲ.

ವಸಾಹತಿನ ಸ್ವರಾಜ್ಯವಾಯಿತೆಂದರೆ ಸಾಯುಜ್ಯ ಮುಕ್ತಿಯಾಯಿತೆಂದು ತಿಳಿಯುವದು ಮಾತ್ರ ಹುಚ್ಚತನವು. ಪಂಡಿತ ಜವ್ಹೆರಲಾಲ ನೆಹರು, ಶ್ರೀ ಶ್ರೀನಿವಾಸಯ್ಯಂಗಾರ ಮೊದಲಾದವರು ಹೇಳುವಂತೆ ಸಂಪೂರ್ಣ ಸ್ವಾತಂತ್ರ್ಯದಿಂದಲೇ ನಿಜವಾದ ದೇಶೋನ್ನತಿಯಾಗುವದು. ಇದರಿಂದಲೇ ಜಗತ್ತಿನಲ್ಲಿ ಮಾನ ಮರ್ಯಾದೆ ದೊರೆಯುವದುಂಟು. ಇದರ ಅನುವಾದವನ್ನೇ ದಕ್ಷಿಣ ಆಫ್ರಿಕೆಯವರು ಮಾಡತೊಡಗಿದ್ದಾರೆ. ಡಾಕ್ಟರ ಹರ್‍ಜೋಗ ... ಸ್ವತಃ ... ಆಗಿದ್ದರೆ ಇವರು ಅನು ...

"ನಮಗೆ ಸಂಪೂರ್ಣ ಸ್ವರಾಜ್ಯ ಸ್ವಾತಂತ್ರ್ಯಬೇಕು. ಬ್ರಿಟಿಶ ಸಾಮ್ರಾಜ್ಯಾಂಗಭೂತವಾದ ಸ್ವರಾಜ್ಯವೆಂಬದಕ್ಕೆ ನಾನು ಬಾಧ್ಯನಾಗುವದಿಲ್ಲ. ಅಥವಾ ಬ್ರಿಟಿಶ ರಾಷ್ಟ್ರಕ್ಕೆ ಸೇರುವ ದೇಶಗಳ ಒಂದು ಸಹಕಾರ ಸಾಮ್ರಾಜ್ಯವೆಂಬದನ್ನೂ ನಾನು ಒಪ್ಪುವದಿಲ್ಲ. ದಕ್ಷಿಣ ಆಫ್ರಿಕೆಗೆ ಸಂಪೂರ್ಣ ಸ್ವಾತಂತ್ರ್ಯವೇ ಬೇಕು. ಆಫ್ರಿಕೆ ಮತ್ತು ಈ ಧ್ಯೇಯದ ನಡುವೆ ಯಾವ ಅಂತರವಿದ್ದರೂ ಇರಕೂಡದು ನಮ್ಮ ಧ್ಯೇಯ ಪೂರ್ಣತೆಗಾಗಿ ಬಾದಿಶಹರಾಗಲಿ, ಬೇರೆಯವರಾಗಲಿ, ಅಡ್ಡ ಬಂದರೆ ಆ ಅಡ್ಡ ವಿಘ್ನವನ್ನು ತೆಗೆದು ಹಾಕಲು ನಾನು ಬಲವಾಗಿ ಪ್ರಯತ್ನಿಸುವೆನು."

ವಿಜಾಪೂರದ ಲಿಂಗಾಯತ ಹಾಯಸ್ಕೂಲಿನ ಮೇಲೆ ದಾವೆ.

—(೦)—

ಧಾರವಾಡದವರಾಗಿ ಎಮ್. ಎ. ಪರೀಕ್ಷೆ ಪಾಸಾಗಿ, ಸಾಂಗಲಿಯ ವಿಲಿಂಗಡನ್ನ ಕಾಲೇಜಿನಲ್ಲಿ ಕೆಲ ಕಾಲ ಕನ್ನಡ ಪ್ರೊಫೆಸರರಾಗಿ, ತರುವಾಯ ವಿಜಾಪೂರದ ಲಿಂಗಾಯತ ವಿದ್ಯಾವರ್ಧಕ ಸಂಸ್ಥೆಯ ಹಾಯಸ್ಕೂಲಿನಲ್ಲಿ ಪ್ರಿನ್ಸಿಪಾಲರಾಗಿ ... ರಾವ ಕೆ ... ಇವರು ವಿಶೇಷ ಅಭ್ಯಾಸಕ್ಕಾಗಿ ಇಂಗ್ಲಂಡಕ್ಕೆ ಹೋಗಬೇಕೆಂದು ... ಯುರೋಪಿಗೆ ಹೋಗುವರು. ಇವರು ಲಿಂಗಾಯತ ಶಾಲೆಯಲ್ಲಿದ್ದಾಗ, ಸಂಬಳದ ಜಗಳ ಬಂದು, ದಿವಾಣಿ ಕೋರ್ಟಿನಲ್ಲಿ ದಾವೆ ಹೂಡ ಬಗಿದೆ. ಇವರು ಯುರೋಪಕ್ಕೆ ಹೋಗುವದು ತ್ವರೆಯದ್ದರಿಂದ, ವಿಜಾಪೂರದ ಕೋರ್ಟಿನಲ್ಲಿ ಸ್ಪೆಶಲ್ಲಾಗಿ ಎರಡು ದಿವಸ ಇವರ ದಾವೆಯ ವಿಚಾರಣೆ ನಡೆಯಿತು.

ಮೆಡ್ರಾಸದಲ್ಲಿ ಶ್ರೀ ಶ್ರೀನಿವಾಸಯ್ಯಂಗಾರರು ಸ್ವರಾಜ್ಯ ಸ್ವಾತಂತ್ರ್ಯದ ಒಂದು ಕೂಟ ಸ್ಥಾಪಿಸಿದರು. ಹಿಂದೂ ಮುಸಲಮಾನ ... ಬ್ರಾಹ್ಮಣ-ಬ್ರಾಹ್ಮಣೇತರ ಕೌನ್ಸಿಲ ... ದವರು ... ...

ಬೆಂಗಳೂರಲ್ಲಿ ಹಿಂದೂ ಮುಸಲಮಾನರ ಕಲಹದ ವಿಕೋಪ.

ಬೆಂಗಳೂರಲ್ಲಿ ಖಾನಬಹಾದ್ದೂರ ಅಬ್ಬಾಸ ಖಾನರ ಪ್ರತ್ಯಕ್ಷ-ಪರೋಕ್ಷ ಪ್ರೇರಣೆಯಿಂದ ಶ್ರೀ ಸಿದ್ಧಿವಿನಾಯಕನ ವಿಗ್ರಹದ ಪುನಃ ಪ್ರತಿಷ್ಠಾಪನೆಗೆ ಬಂದ ವಿಷಯದ ಮೂಲಕ ಆದ ದಂಗೆಯು ಇನ್ನೂ ಶಾಂತವಾಗಿಲ್ಲ. ಮುಸಲಮಾನರು ತಮ್ಮವರೇ ದಿವಾನರಾಗಿದ್ದು, ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದಾರೆಂಬ ಹೆಮ್ಮೆಯಿಂದ ಹಿಂದೂ ಜನರ ಮೇಲೆ ಅತ್ಯಾಚಾರಗಳನ್ನು ನಡೆಸುವದು ಎಷ್ಟು ಕಡಿಮೆ ಮಾಡಿಲ್ಲ. ಹಿಂದೂ ರಾಜ್ಯದಲ್ಲಿ ಮುಸಲಮಾನರು ಅನ್ಯಾಯವಾಗಿ, ಬೇಕೆಂದು ಬುದ್ಧಿಪೂರ್ವಕವಾಗಿ ಹಿಂದೂ ವಿಗ್ರಹಗಳನ್ನು ಭಿನ್ನ ಮಾಡಿದರೆಂಬ್ಬ, ಉಂಟಾದ ಕಾರಣವನ್ನು ಶೋಧಿಸುತ್ತಾ ಹೋದರೆ ಅದರ ಬುಗಮವು ಬ್ರಾಹ್ಮಣೇತರ ಪಕ್ಷ ಹೋಗುತ್ತದೆ.

ಜಸ್ಟಿಸ ಪಕ್ಷದವರು ಮದ್ರಾಸ ಇಲಾಖೆಯಲ್ಲಿ ಹೂಡಿದ ಬ್ರಾಹ್ಮಣೇತರ ಬಂಡಾಯದ ಉರಿಯು ಮೈಸೂರ ರಾಜ್ಯದಲ್ಲಿಯೂ ಹಬ್ಬಿತು. ಶ್ರೀ ಮನ್ಮಹಾರಾಜರು ಬ್ರಾಹ್ಮಣೇತರರಾದರೂ, ಕೊಲ್ಹಾಪುರದ ಮಹಾರಾಜರಂತೆ ಬ್ರಾಹ್ಮಣೇತರರೆಂದು ಹುಚ್ಚುಚ್ಚಾರ ಮಾಡಲಿಲ್ಲ. ಕೊಲ್ಹಾಪುರದವರು ಶ್ರೀ ರಾಮದಾಸಸ್ವಾಮಿಗಳನ್ನು ಮರೆತಂತೆ ಮಹಾರಾಜರು ಬ್ರಾಹ್ಮಣ ಧರ್ಮ ಗುರುಗಳನ್ನು ಮರೆಯಲಿಲ್ಲ. ಸಂಸ್ಥಾನಕ್ಕೆ ಬ್ರಾಹ್ಮಣರಿಂದ ಅನಂತವಾಗಿ ಉಪಕಾರವಾಗಿದೆಂದೂ, ಈಗ್ಯೂ ಸಹಾಯವಾಗುತ್ತಿರುವದೆಂದೂ ನಿರ್ವಂಚನೆಯಿಂದ ಜಾಹೀರ ರೀತಿಯಿಂದ ಹೇಳಿ, ಬ್ರಾಹ್ಮಣೇತರರಿಗೆ ಅವರವರ ಶಿಕ್ಷಣದ ಪ್ರಗತಿಯ ಪ್ರಕಾರ ರಾಜ್ಯ ಕಾರಭಾರದಲ್ಲಿ ಪ್ರವೇಶ ದೊರೆಯುವದೆಂದು ಆಶ್ವಾಸನ ಕೊಟ್ಟರು. ಬ್ರಾಹ್ಮಣೇತರರಿಗೆ ಎಷ್ಟು ಭಾಗದಿಂದ ಕೆಲಸಗಳು ದೊರೆಯಬಹುದೆಂದು ವಿಚಾರ ಮಾಡಲು ಮಿಲರ ಕಮಿಟಿಯನ್ನು ನೇಮಿಸಿದರು. ಆ ಕಮಿಟಿಯ ರಿಪೋರ್ಟು ಬ್ರಾಹ್ಮಣೇತರರಿಗೆ ಬಹುವಾಗಿ ಅನುಕೂಲವಾದರೂ, ಬ್ರಾಹ್ಮಣೇತರರು ಕೆಲಸದಲ್ಲಿ ಚಟುವಟಿಕೆಯನ್ನೂ ಬುದ್ಧಿಬಲವನ್ನೂ ತೋರಿಸದ್ದರಿಂದ ಮಿಲರ ಕಮಿಟಿಯ ರಿಪೋರ್ಟು ಕಾರ್ಯ ಕರ್ತವ್ಯ ವ್ಯರ್ಥವಾಗಿ ಕಾಣುತ್ತಿರುತ್ತದೆ. ಆ ಸಿಟ್ಟಿನಿಂದ ಬ್ರಾಹ್ಮಣೇತರರೂ ಮುಸಲಮಾನರೂ ಒಂದಾಗಿ, ಸಂದು ಸಿಕ್ಕಿದ, ದರ್ಬಾರದ ಮೇಲೂ, ಸಾರ್ವಜನಿಕ ಸಂಸ್ಥೆಗಳ ಮೇಲೂ ಸೇಡು ತೀರಿಸಿಕೊಳ್ಳಲು ಉಲ ಕೋಟಿಕನ ಮಾಡುವರು.

ಬೆಂಗಳೂರು ಇವರಿಗೆ ದೊಂಬಿ ಹಾಕಲು ಮಧ್ಯಸ್ಥಳವಾಗಿದೆ. ಬ್ರಾಹ್ಮಣೇತರರೂ ಸೇರಿ, ಬ್ರಾಹ್ಮಣರ ವಿರುದ್ಧ ಮ್ಯುನಿಸಿಪಾಲಿಟಿಯಲ್ಲಿ ಬಣ ಕಟ್ಟಿದ್ದಾರೆ. ಮಿ. ಪರಮೇಶ್ವರಯ್ಯನವರೂ ಖಾನಬಹಾದ್ದೂರ ಅಬ್ಬಾಸಖಾನರೂ ಒಂದು ಕಟ್ಟಿದವರು. ಮಿ. ಪರಮೇಶ್ವರಯ್ಯನವರು ಜಡ್ಜರಾಗಿ ಹೋದ ಬಳಿಕ ಖಾನಬಹಾದ್ದೂರರೇ ಸರ್ವಸೂತ್ರಗಳ ಚಾಲಕರಾದರು. ಆದರೆ ಈ ಖಾನಬಹಾದ್ದೂರರು ತಮ್ಮ ನಿಜವಾದ ಪರಿಸ್ಥಿತಿ ಮತ್ತು ಯೋಗ್ಯತೆಯನ್ನರಿಯದೆ, ಮೊಘಲ ಬಾದಶಹರಂತೆ ವರ್ತಿಸುತ್ತಿದ್ದಾರೆ. ದಿವಾನಸಾಹೇಬರ ಛತ್ರದ ಬಳಿಕ ಕಮರಿ ತನಗೆ ಎಂಬ ಹೆಮ್ಮೆ ತೊಟ್ಟಿದ್ದಾರೆ. ಬ್ರಾಹ್ಮಣೇತರರೂ, ಅವರಿಗೆ ಧರ್ಮಾಭಿಮಾನವುಂಟೆಂದಕ್ಕೆ ಇವರು ಏರೆತು, ಅಥವಾ ತಮ್ಮ ಪ್ರಭುತ್ವ ನಡೆಸಬೇಕೆಂದು ಅಧ್ಯಕ್ಷ ಖಾನರ ಮಹಾಪುರುಷ ವೃಕ್ಷಕ್ಕೆ ನೀರೆರೆದು ಸಾಕತೊಡಗಿದರು. ಆದರೆ ಬ್ರಾಹ್ಮಣೇತರರೂ ಬ್ರಾಹ್ಮಣರೂ ಸೇರಿ ಆಬಾಸಖಾನರ ಕಿಡಿಗೇಡಿತನಕ್ಕೆ ಅನುವು ಕೊಡಲಿಲ್ಲ. ಇಷ್ಟೇ ಅಲ್ಲ, ಇವರ ಮಟ್ಟಿಗೆ ಮಯ್ಯನೆಂಬ ಒಂದು ಮಸೀದೆಯನ್ನು ಸ್ಥಳಾಂತರ ಮಾಡುವಂತೆ ಮ್ಯುನಿಸಿಪಾಲಿಟಿಯಲ್ಲಿ ಠರಾವು ಪಾಸ ಮಾಡಿದರು. ಆ ಠರಾವು ಖಾನಬಹಾದ್ದೂರರನ್ನು ಕಂಗೆಡಿಸುವದಕ್ಕಿದ್ದಿತು, ಅದರ ಅನಿಷ್ಟ ಪರಿಣಾಮವು ಹಿಂದೂ ಮುಸಲಮಾನ ಮಧ್ಯೇಬಂದ ಮೇಲಾಯಿತು. ಅದೇ ಶ್ರೀ 'ಸಿದ್ಧಿವಿನಾಯಕನ ಪುನಃ ಪ್ರತಿಷ್ಠಾಪನೆಗೆ ಬಂದಿ ಕಾರಣ ನಿಂದು ಮತ್ತು ದಂಗೆ ಪ್ರವೃತ್ತಿ ಮಾಡಿತು.

ದಂಗೆಯಾದನಂತರ ದರಬಾರಿನವರ ಕೈಕೊಂಡ ಉಪಾಯವು ಹಿಂದೂ ಜನರಿಗೆ ಸಮ್ಮತವಾಗಿಲ್ಲ. ಸರ ವಿಶ್ವೇಶ್ವರಯ್ಯನವರ ಕಮಿಟಿಯೂ ಒಪ್ಪಿಗೆಯದಾಗಿಲ್ಲ. ಏಕೆಂದರೆ ಮುಸಲಮಾನರ ಅತ್ಯಾಚಾರವು ನಿಂತಿಲ್ಲ. ಇದೇ ಸಮಯದಲ್ಲಿ ವಿನಾಯಕನ ಪೂಜೆಯು ಹಬ್ಬವೇ ಬಂದಿದೆ, ಆಗ ಮುಸಲಮಾನರು ಗೊಂದಲ ಹಾಕಿದರಾದಾರೆಂದು ಹಿಂದೂ ಜನರು ಭಯಗೊಂಡಿದ್ದಾರೆ. ಈ ಹಬ್ಬವನ್ನು ನೆರವೇರಿಸತಕ್ಕ ಪೂರ್ಣ ಜವಾಬದಾರಿಯು ದಿವಾನ ಮತ್ತು ಖಾನಬಹಾದ್ದೂರ ಅಬ್ಬಾಸಖಾನರ ಮೇಲುಂಟು.

ಸ್ವರಾಜ್ಯ ಸಾಮ್ರಾಜ್ಯದಲ್ಲಿ ಸಂಸ್ಥಾನಿಕರ ದರ್ಜೆ.

ಲಖನೌದಲ್ಲಿ ಕೂಡಿದ ಸರ್ವ ಪಕ್ಷೀಯ ಪರಿಷತ್ತಿನಲ್ಲಿ ಸ್ವರಾಜ್ಯ ಸಾಮ್ರಾಜ್ಯದಲ್ಲಿ ಸಂಸ್ಥಾನಿಕರ ದರ್ಜೆ ಯಾವದೆಂಬ ಪ್ರಶ್ನೆಯು ವಾದವಿವಾದವಾಯಿತು. ನೆಹರೂ ಕಮಿಟಿಯಲ್ಲಿಯೂ ಈ ಭಾಗವುಂಟು. ಹಿಂದುಸ್ಥಾನವು ಭರತಖಂಡವೆನಿಸಿ ಅನೇಕ ದೇಶಗಳುಂಟು. ಹಲವು ದೇಶಗಳ ಒಂದು ಗೂಡುವಿಕೆಯಾಗಿ, ಅವುಗಳ ಅಧಿಪತ್ಯವು ಒಬ್ಬನಿಗೆ ಅಧೀನವಾಗಿ,ಅಂಥ ರಾಜ್ಯಕ್ಕೆ ಸಾಮ್ರಾಜ್ಯವೆನ್ನುವರು. ಹಿಂದುಸ್ಥಾನವು ಯುಗಾಗಳಿಂದ ಸಾಮ್ರಾಜ್ಯವಾಗಿದೆ. ಸಿಕ್ಕಿದ ಬಗವತ್ಪ್ರಾರ್ಥನೆಯು ಮಂಗಲ ಪದ್ಯದಲ್ಲಿ ಸ್ವರಾಜ್ಯ ಸಾಮ್ರಾಜ್ಯವೆಂಬ ನುಡಿಯುಂಟು. ಹಿಂದುಸ್ಥಾನವು ಜಗದಾದಿಯಿಂದ ಜಗದಂತ್ಯದ ವರೆಗೆ ಸಾಮ್ರಾಜ್ಯವಾಗಿಯೇ ಉಳಿಯುವದು.

ಹಿಂದುಸ್ಥಾನವು ಈ ನಂತರ ಒಬ್ಬ ಸಾರ್ವಭೌಮ ಅಥವಾ ಒಬ್ಬ ಬಾದಶಹನ ಅಂಕಿತವಾಗಿ ಉಳಿಯಲಾರದು. ಕೈಮೂರಲಿಂಗನಂಥವನು ದಾರೀ ಕರನು ಅಮೇರಿಕೆಯಂತೆ ಪ್ರಜಾಪ್ರಭುತ್ವದ್ದಾಗುವದು. ಫ್ರಾನ್ಸದ ಬಂಡವಲಗಾರರಂತೆ ದೀಕ್ಷು, ರಶಿಯಾದ ಬೊಲ್ಶೆವಿಕವಾದಿಗಳು ಇಂಗ್ಲೆಂಡಿನ ಟೋರಿ ಲೋಕ ವ್ಯವಹಾರ ಪ್ರಕಾರ ನಿರೂಪಿತನವಾಗುವದು. ಏನಾದರೂ ಏಕತಂತ್ರವಾಗಲಾರದೆಂಬುದು ಖಂಡಿತ. ಇಂಥ ಪರಿಸ್ಥಿತಿಯಲ್ಲಿ ಸಂಸ್ಥಾನಿಕರಿಗೆ ಯಾವ ದರ್ಜೆ ಇರಬೇಕೆಂಬ ಪ್ರಶ್ನವು ಸಹಜವಾಗಿ ಹುಟ್ಟುತ್ತದೆ. ಇಂಗ್ಲಿಷ ಸರಕಾರದವರು ಬಟ್ಲರ ಕಮಿಟಿ ನೇಮಿಸಿ ಈ ಬಗ್ಗೆ ತಮ್ಮ ಪರವಾಗಿ ವಿಚಾರ ನಡಿಸಿದ್ದಾರೆ. ನೆಹರು ಕಮಿಟಿಯವರು ಅಂದರೆ ಲೋಕಪಕ್ಷದವರು ತಮಗೆ ಉಚಿತ ತೋರಿದಂತೆ ವಿಚಾರಮಾಡಿದ್ದಾರೆ. ಬಟ್ಲರ ಕಮಿಟಿಯ ರಿಪೋರ್ಟು ಹೊರಬೀಳುವ ಮುಂಚಿತವಾಗಿಯೇ ನೆಹರು ಕಮಿಟಿಯವರು ಸಂಸ್ಥಾನಿಕರ ದರ್ಜೆಯನ್ನು ಗೊತ್ತುಮಾಡಿದ್ದಾರೆಂಬದನ್ನು ವಿಶೇಷವಾಗಿ ಧ್ಯಾನದಲ್ಲಿಡುವಂಥ ಸಂಗತಿಯು.

ವಾಸ್ತವಿಕವಾಗಿ ನೋಡಿದರೆ ಸಂಸ್ಥಾನಿಕರು ಬಟ್ಲರ ಕಮಿಟಿಯ ಮುಂದೆ ಸೈಬೋಲಿಗರಂತು ನಿಲ್ಲತಕ್ಕದ್ದೇ ಅಲ್ಲ. ಇವರು ಸ್ಕಾಟರಂ. ಬ್ಯಾರಿಸ್ಟರರಿಗೆ ತಮ್ಮ ಪರವಾಗಿ ವಕೀಲಿ ಕೊಟ್ಟಿದ್ದಾರೆ. ಈ ಸ್ಕಾಟಸಾಹೇಬನ ಬುದ್ಧಿಸಾಮರ್ಥ್ಯ ಅಪ್ರತಿಮವಾದ್ದು. ಎಮ ಕೋರ್ಟಿನಲ್ಲಿ ಅಲಾಡಿಸಲಾಗಲಿ, ಇಂಗ್ಲಿಷ ಸರಕಾರದವರು ಹಿಂದುಸ್ಥಾನಕ್ಕೆ ವಸಾಹತಿನ ಸಂಪೂರ್ಣ ಸ್ವರಾಜ್ಯಾಧಿಕಾರ ಕೊಡುವದಿಲ್ಲ. ಕುಸು ಕುಸು ವೇಳೆಯು ಸುತ್ತಾ ಹೋಗುವದು. ಅದ್ದರಿಂದ ಇಂದೀ ಪ್ರಮುಖರ ಇಂಥ ಹೊಸ ಒಡಂಬಡಿಕೆ ಮಾಡಿಕೊಂಳ್ಳದೆ, ಇನ್ನು ಯುರೋಪಿಯನ್ನರ ಛಾಯೆಯಲ್ಲಿಯೇ ಕ್ರಿಯಾಗಬೇಕೆಂದೂ, ಕೆಲಕಾಲವಾದರೂ ಕಿಂದು ಗಾರಿಕೆ ನಡೆಯಬೇಕೆಂದೂ ಬಟ್ಲರ ಕಮಿಟಿಯ ಮುಖಾಂತರವಾಗಿ ತಮ್ಮ ಯೋಗಕ್ಷೇಮ ನೋಡಿಕೊಳ್ಳಲುದ್ಯುಕ್ತರಾಗಿದ್ದಾರೆ.

ಇಂಗ್ರೇಜಿ ಅರಸರು ಯಾವ ಬುದ್ಧಿಯಿಂದ ಮೊದಲಿನಂತೆ ನಿರಂಕುಶವಾಗಿ ಸುಲ್ತಾನಶಾಹಿ ನಡೆಸಲಾರರೋ ಅದೇ ಬುದ್ಧಿಯಿಂದ ಸಂಸ್ಥಾನಿಕರೂ ತಂತಮ್ಮ ದೇಶಗಳಲ್ಲಿ ಬಾದಶಹಿ ಸುಲ್ತಾನಶಾಹಿ ನಡಿಸಲಾರರು. ಪ್ರಜರು ಸಂಪೂರ್ಣ ಸ್ವಾತಂತ್ರ್ಯ ಬೇಡುವರು. ತಾವೇ ರಾಜ್ಯಕರ್ತರಾಗುವರು. ಸಂಸ್ಥಾನಿಕರು ಪಿತ್ರಾರ್ಜಿತ ಆಸ್ತಿಯ ಸ್ವಾಮಿತ್ವವೆಂದು ರಾಜಾರಂತ ತಕ್ಕಷ್ಟು ಪಡೆದೊಂದೇ ಮಾರ್ಗ ವಾಗುತ್ತದೆ. ಆಗ ದೇಶಾಂತರವಿರುವಂತೆ ಮುಂದೆ ರಾಜಾಂತರವಾಗುವದು. ಈ ಪ್ರಕಾರ ಅವರು ನಡೆಸುದಿದ್ದರೆ ಚಿಕ್ಕ ದೊಡ್ಡ ಅಪರಾಧಕ್ಕನುಸರಿಸಿ ರಾಜ್ಯ ಕಳಕೊಳ್ಳುವರು. ದೇಶಾಂತರವಾಸಿಯಾಗುವರು. ವನಾಶಾಸನ- ಪರ್ವಾಸನದಿಂದ ಅನ್ಯತ್ರದಲ್ಲಿ ಜೀವಿಸುವರು. ಅನೇಕ ಸಂಸ್ಥಾನಿಕರು ಇಂದು ಈ ತರದ ಒಂದಿಲ್ಲೊಂದು ಪ್ರಕಾರದ ಫಲಗಳ ಭೋಗಿಸುತ್ತಿದ್ದಾರೆ.

ಸಂಪೂರ್ಣ ಸ್ವಾತಂತ್ರ್ಯದ ಹಿಂದುಸ್ಥಾನವಾಗಲಿ, ವಸಾಹತಿನ ಸ್ವರಾಜ್ಯವಾಗಲೀ ಇವರ ಪ್ರಶ್ನೆಗೆ ಸಂಬಂಧವು ವಿತಸ್ತೀರ್ಣಯ ರಾಜ್ಯಕರ್ತರ ಕೂಡ ಆಗಿ ಅ ರಿಂಬೆಗೆ ನೀರಿಡುವ ನೀರು ಕೂಡಿದಂತೆ ಮಾರ್ಗಹಿತವಾಗುವದೇ ಹಿತವು. ಕೆಂಪು ಬಣ್ಣದಲ್ಲಿ ಕೂಡಿ ಕೆಂಪು, ಕರೀ ಬಣ್ಣದಲ್ಲಿ ಸೇರಿ ಕರೀದು ಆಗುವದೇಕೆ? ಪರದೇಶೀಯ ಮತ್ತು ಪಂಕ್ತಿಯರಾಗಿಂದ ಗೆಸ್ಟರಕಾಯಿಸ್ಸರ ಕಪಟ ಸ್ನೇಹವಾಗುವದಕ್ಕಿಂತ, ಸ್ವದೇಶ, ಸ್ವಧರ್ಮ, ಸ್ವಜನಾಭಿಮಾನ ಸಹುಸಂಧ ಜನಾಂಗದ ಕೂಡ ಅನುರಾಗದಿಂದ ನಡೆಸುವದರಿಂದ ವಾಸವೇನು? ಕಾರಣ ಸೂರ್ಯನಾರಿನ ಹೂವಿನಂತೆ ಮುಂಜಾನೆ ಸಂಜೆ ಎಂದು ಹೊರಳದೆ ಒಂದೇ ಧ್ಯೇಯ ಮತ್ತು ಒಂದೇ ನಿಶ್ಚಯವುಳ್ಳವರಾಗಿ ನಡೆದರೆ ಪ್ರಜಾಸತ್ತಾತ್ಮಕವಾಗುವಂಥ ಹಿಂದುಸ್ಥಾನದಲ್ಲಿ ನಿಸ್ಸಂಶಯವಾಗಿ ಗೌರವವೆನಿಸುವ ಶ್ರೇಷ್ಠತೆಯ ದರ್ಜೆ ಉಳಿಯುವದು.

ಪಂಡಿತ ಸಾಹೇಬರು ಇವರನ್ನು ಹಿಂದುಸ್ಥಾನದ ರಾಜಕಾರಣದಿಂದ ಅಲಿಪ್ತವಾಗುವ ದುದರುದ್ದೇಶದಿಂದಲೇ ನರಿಂದ್ರ ಮಂಡಲ ಸ್ಥಾಪಿಸಿದರು. ಅದರಿಂದ ಕಳೆದ ಮತ್ತು ವರ್ಷಗಳಲ್ಲಿ ಯಾವ ಪ್ರಯೋಜನವೂ ಆಗಲಿಲ್ಲ. ಸಾಧ್ಯವಾದ ಗುಲಾಮಗಿರಿಯನ್ನು ಅನುಭವಿಸುತ್ತಿರುವ ವಿಷಕ್ಕೇ ಒಂದು ಪ್ರತ್ಯಕ್ಷ ಸಾಕ್ಷಿಯು ಬಟ್ಲರ ಕಮಿಟಿಯು ಬೆನ್ನು ಹತ್ತುವದೆಂದರೆ ಪ್ರಜ್ಞಾರಾಜ್ಯಸನ್ನ ಕೊರಗೆ ಕಟ್ಟಿಕೊಳ್ಳುವಂತಿದ. ಕಾರಣ ಸಂಸ್ಥಾನಿಕರು ಪ್ರಾನ್ಸದ ಇತಿಹಾಸವನ್ನು ಓದಿಕೊಂಡು, ತಮ್ಮ ಸ್ಥಿತಿಯಿದ್ದರೂ, ಭಾವೀ ಸಂಸ್ಕೃತಿಯು ಹೀನವಿಚಾರವನ್ನು ಇಂದು ಮನಸುದನು ಬುದ್ಧಿಯು ಉತ್ತಮ ಲಕ್ಷಣವಾಗುತ್ತದೆ.

ಅಸೆಂಬ್ಲಿಯ ಅಧ್ಯಕ್ಷರು ಮತ್ತು ಅವರ ಕೈ ಕೆಳಗಿನ ಕಾಮದಾರರು

—(೦)—

ಅಸೆಂಬ್ಲಿಯ ಅಧ್ಯಕ್ಷರು ಯುರೋಪಿಯನ್ನರಿರುವ ತನಕ ಸರಕಾರ ಮತ್ತು ಅವರ ಕೈಕೆಳಗಿನ ಕಾಮದಾರರ ಒಣ್ಣೊಂದೇ ಅದ್ದರಿಂದ, ಪಕ್ಷಪಾತ ಅಥವಾ ಮತಭೇದ, ವೈಮನಸ್ಯ ಮುಂತಾದ್ದೇನೂ ತೋರಲಿಲ್ಲ. ಯುರೋಪಿಯನ್ನರ ನಂತರ ಶ್ರೀ ಪಟೇಲರು ಅಧ್ಯಕ್ಷರಾದ ಕೂಡಲೆ ದೇಶಿ ವಿದೇಶಿ ಎಂಬ ಭೇದ ತೋರಹತ್ತಿತು. ಇವರ ಕೈ ಕೆಳಗಿನ ಸೆಕ್ರೆಟರಿಯೇ ಇವರ ಮುಖ ಮುತ್ತಿನಲ್ಲಿರದಂತಾದನು. ಸರಕಾರದವರು ಅಸೆಂಬ್ಲಿಯ ಮೇಲೆ ಬಹಳವಾಗಿ ಸಾಗಿರ [illegible] ದವ ನಿವಿಡಿದು, ಅಧ್ಯಕ್ಷರ ಮತದ ವಿರುದ್ಧ ಸಹ ಹೋಯ ಕೊಡುವೆನು. ಇಷ್ಟೇ ಅಲ್ಲದೆ, ಅಸೆಂಬ್ಲಿಯ ಠರಾವುಗಳ ವಿಷಯವಾಗಿ ವಿಲಾಯತಿಗೆ ಕಳಿಸುವ ಕಾಗದ ಪತ್ರಗಳನ್ನು ಈ ಅಧ್ಯಕ್ಷರಿಗೆ ತೋರಿಸಲಿಲ್ಲ. ಈ ಅಕ್ರಮ ಮತ್ತು ಸೇಕ್ರೆಟರಿಯ ಅವಿವೇಕ ವರ್ತನೆಯನ್ನು ಶ್ರೀ ಪಟೇಲರು ಗವರ್ನರ ಜನರಲರ ಲಕ್ಷಕ್ಕೆ ತರಲು ಅವರು ಸೇಕ್ರೆಟರಿಯನ್ನು ಬೆಂಬಲ ಮಾಡುವದನ್ನು ಮಾತ್ರ ಬಿಡಿತಪಡಿಸಿದರು. ಅದಕೆ ಸೇಕ್ರೆಟರಿಯು ಅಧ್ಯಕ್ಷರಿಗೆ ಜವಾಬದಾರನೇ ಹೊರತು ಅನ್ಯನಾಗಿ ಉಳಿದನು. ಸೇಕ್ರೆಟರಿಯು ತಮಗೆ ಜವಾಬದಾರನಾಗಿರಬೇಕೆಂದು ಗವರ್ನರ ಜನರಲರಿಗೆ ಮಾಡಿದ ಸೂಚನೆಯು ಫಲಹೀನವಾಯಿತು. ಇದ್ದರಿಂದ ಶ್ರೀ ಪಟೇಲರು ದರಬಾರದ ಒಳಗಿನ ಕಲೇ-ಬಿಲೇ ಕೃತ್ಯಗಳ ಪ್ರಕಟಣೆಯನ್ನು ಅಸೆಂಬ್ಲಿಯ ಮುಂದೆ ಓದಿದರು. ಸರಕಾರ ಪಕ್ಷದಿಂದ ಮಿ. ಕ್ರೆರಾರಸಾಹೇಬರು ಉತ್ತರ ಕೊಟ್ಟರು. ಅದರಲ್ಲಿ ಗುಪ್ತಭಾಗವೇ ಬಹಳವಾಗಿರುತ್ತದೆ. ಸರಕಾರದ ಪ್ರತಿನಿಧಿ, ಅಧ್ಯಕ್ಷ ಮತ್ತು ಅಸೆಂಬ್ಲಿಯ ಪ್ರತಿಯೊಂದು ಪಕ್ಷದ ಪ್ರಮುಖರು ಅಧ್ಯಕ್ಷರ ಕಚೇರಿಯಲ್ಲಿ ಕೂಡಿಕೊಂಡು ಈ ಬಗ್ಗೆ ಆಲೋಚನೆ ಮಾಡುವರು.

ಮದ್ರಾಸದ ಸಾಯಮನ್ನ ಸಪ್ತಕರ ಸಹಕಾರಿಗಳು.

—(೦)—

ಮದ್ರಾಸದ ಕೌನ್ಸಿಲದಿಂದ ಈ ಕೆಳಗಿನ ಏಳು ಜನರು ಸಹಕಾರಿಗಳಾಗಿ ಆರಿಸಲ್ಪಟ್ಟಿದ್ದಾರೆ

೧ ಮಿ ಕುಮಾರಸ್ವಾಮಿ ರೆಡ್ಡಿ
೨ ಸರ ಪಟ್ರೋ
೩ ವೆಂಕಟಗಿರಿಯ ಕುಮಾರ ರಾಜರು.
೪ ನೆ. ಕಲಿಫುಲ್ಲಾ ಸಾಹೇಬ.
೫ ಮಿ ಡೆನಿಯಲ ಥಾಮಸ.
೬ ಮಿ ಎ. ಶಿವರಾವ
೭ ಮಿ ಎಸ್. ಶಿವರಾಜ.

ಭಾರತ ಮಂತ್ರಿಯ ರಾಜೀನಾಮೆ.

ಲಾರ್ಡ ಬರ್ಕನ್ಹೆಡ್ಡಸಾಹೇಬರಿಗೆ ಹಿಂದುಸ್ಥಾನದ ಕ್ರೇಯಿಯಿಂದ ದೊರೆಯುವ ಸಂಬಳಕಾಲದಾಗಿದೆ ಅದಕ್ಕೂ ಹೆಚ್ಚು ಬೇರೆ ಪ್ರಾಪ್ತಿಯ ಕೆಲಸ ನೋಡಿಕೊಂಡಿದ್ದರಿಂದ ಬೇಗನೇ ರಾಜೀನಾಮೆ ಕೊಡುವರೆಂದು ಕಲಕತ್ತೆಯ ಇಂಗ್ಲಿಷಮನ್ನ ಪತ್ರಕ್ಕೆ ಸ್ಪೇಶಲ ತಾರ. ಬಂದಿದೆ.

ಮದ್ರಾಸ ಇಲಾಖೆಯಲ್ಲಿ ರಾಜಮಹೇಂದ್ರಿ, ಮಚ್ಚಲೀಪಟ್ಟಣ ಮತ್ತು ವಿಶಾಖಾಪಟ್ಟಣ ಈ ಮೂರು ಜಿಲ್ಹೆಗಳಲ್ಲಿ ಸರಕಾರದವರು ರಿಸ್ಟಿಜನ ಮಾಡಿ, ಲೈಸೆನ್ಸ ಪಟ್ಟಿ ಸತಕ್ಕವರಿದ್ದಾರೆ ರೈತರೂ, ಲೋಕಪಕ್ಷೀಯರೂ ಜಾದಿದೇಶದ ಆಲ ಕರಣ ಮಾಡಿ, ಈ ರಿಸ್ಟಿಜನ ವಿರೋಧಿಸುವ ಚಳುವಳಿ ಪ್ರಾರಂಭಿಸಿದ್ದಾರೆ.

ಗಣಿಮಾಡಿಕ ತಾಲೂಕಿನ ಮಾಮಲೇದಾರರು ಕಾಮವಳಿಯಲ್ಲಿ ಒಬ್ಬ ರೈತನ ಹೊಡೆದರು. ಅಲ್ಲಿನ ಕುಲಕರ್ಣಿಯು ರೈತನಿಗೆ ಮಾಮಲೇದಾರರ ಮೇಲೆ ಫಿರ್ಯಾದಿ ಮಾಡಗೊಡಲಿಲ್ಲ. ಈ ಬಗ್ಗೆ ಕೌನ್ಸಿಲದಲ್ಲಿ ಪ್ರಶ್ನೆ ಮಾಡಲು ಅಧಿಕಾರಿಗಳು ಕಿವಿಯ ಮೇಲೆ ಕೈ ಇಟ್ಟುಕೊಂಡಂಥ ಉತ್ತರ ಕೊಟ್ಟರು. ರೈತನು ಮಾವ ಲೆಂದಾಟವನ್ನು ಕೊಡಬೇಕೆ ?

ನಿಜಾಮ ಹೈದರಾಬಾದಿನಲ್ಲಿ ಮಹಮದನ ಗಂಬರ ಜನ್ಮೋತ್ಸವವು ಬಹು ಸಮಾರಂಭದಿಂದ ನೆರವೇರಿತು. ನಿಜಾಮಸಾಹೇಬರು ಸ್ವತಃ ಸರ್ವಪ್ರಕರಾಗಿ ಮೆರವಣಿಗೆಯಿಂದ ಜುಮ್ಮಾ ಮಸೀದಿಗೆ ಬಂದು ನಮಾಜ ಮಾಡಿದರು.

ವರ್ಷಾದಕ್ಕೆ ಸೇರಿದ ಯಾವತಮಾಳದಲ್ಲಿ ಮ್ಯುನಿಸಿಪಾಲಿಟಿಯ ಜಕಾತಿಯ ಹಣವನ್ನು ಬ್ಯಾಂಕಿಗೆ ಕಳಿಸುವದಕ್ಕೆ ತಡವಾಗಲು ಆಫೀಸಿನಲ್ಲಿಯೇ ಇಟ್ಟರು. ರಾತ್ರಿಯಲ್ಲಿ ಕಳ್ಳರು ಅದನ್ನು ತಮ್ಮ ಧಿಕ್ಷಸ್ಥಾನದಲ್ಲಿ ಹಾಕಿಕೊಂಡರು.

ಸ್ವಾಮಿ ಶ್ರದ್ಧಾನಂದರ ಚಿರಂಜೀವರಾದ ಪ್ರೊಫೆಸರ ಇಂದ್ರರು ೫೦ ಸಾವಿರ ರೂಪಾಯಿ ಬಂಡವಲದ ಒಂದು ಕಂಪನಿ ತೆಗೆದು ಲಿಬರೇಟರ ಎಂಬ ಇಂಗ್ಲಿಷ ವಾರಪತ್ರಕ್ಕೆ ಪುನರ್ಜನ್ಮ ಕೊಡುವರು.

ಕಾಬೂಲದ ಅಮೀರಸಾಹೇಬರು ತಮ್ಮ ಸೈನಿಕರಿಗಾಗಿ ಫ್ರಾನ್ಸ ದೇಶದಲ್ಲಿ ೫೦ ಸಾವಿರ ರಾಯಫಲ ಬಂದೂಕುಗಳನ್ನು ಕೊಂಡರು.

ಸರ ಅಲ್ಲಿ ಇಮಾಮಸಾಹೇಬರು ಪುನಃ ಹೈದರಾಬಾದ ಸಂಸ್ಥಾನದ ದಿವಾನರಾಗುವರೆಂದು ತಟ್ಟ ವರ್ತಮಾನವಾಗಿದೆ.

ಮದ್ರಾಸದ ಕೌನ್ಸಿಲದಲ್ಲಿ ಸಾಯಮನ್ನ ಕಮೀಶನದ ಕೂಡ ಸಹಕಾರ ಮಾಡುವ ಠರಾವು ಪಾಸಾಯಿತು.

ಧಾರವಾಡ—

ಮಿ ಹುಲಕೋಟಿಯವರ ರಾಜೀನಾಮೆಯಿಂದ ತೆರವಾದ ಡಿ. ಲೊ. ಬೋ. ಅಧ್ಯಕ್ಷರ ಸ್ಥಳದಲ್ಲಿ ಮಿ. ಜೋಶಿಯವರು ಆರಿಸಲ್ಪಟ್ಟರು.

ಸತ್ತಿಯ ಖಟ್ಲೆ.

ಜಾಲಿಯ ಗಿಡದ ಪ್ರಕಾಶ.

ಬೆಳಗಾವ ಜಿಲ್ಲಾ ಪೋಲೀಸ ಹಾಗು ಮುಲ್ಕೀ ಖಾತೆಯ ದೊಡ್ಡ ದೊಡ್ಡ ಅಧಿಕಾರಿಗಳ ಮೇಲೆ ಬಂದ ಆರೋಪ.

ಬೆಳಗಾವ ಜಿಲ್ಲಾ ಅಥಣಿ ತಾಲೂಕ ಪೈಕಿ ಸತ್ತಿ ಗ್ರಾಮದ ಪಾಟೀಲ ಯಾಗನೂ ಕುಲಕರ್ಣಿ ಇವರಲ್ಲಿ ದ್ವೇಷವಿದ್ದದರಿಂದ ಈ ಖಟ್ಲೆಯು ಇತ್ತೀಚಿಗೆ ವಿಕೋಪಕ್ಕೆ ಬಂದಿದೆ.

ಆರೋಪಿಗಳು.

೧ ಮಿ| ಬಂಕಟಸಿಂಗ ಪೋ. ಸ. ಇನ್ಸಪೆಕ್ಟರ
೨ ,, ಸದಾಶಿವ ರಾವಜಿ ಕಾನಸ್ಟೇಬಲ್
೩ ಅಲಗೌಡಾ ಶಾತಗೌಡಾ ಪಾಟೀಲ
೪ ತಮ್ಮಣ್ಣಾ ಶಿವಪ್ಪಾ ಕರೋಲಿ (ಪಂಚ)
೫ ಮಿರಾಸಾಬ ಸುಲತಾನಸಾಬ ,,
೬ ಕಳಬಸಪ್ಪಾ ರಾಚಪ್ಪಾ ,,
೭ ಮಹಮದ ಖಾಜು
೮ ಬಾಬು ಈರಪ್ಪಾ
೯ ಪರಗೌಡಾ ಬಸಗೌಡಾ
೧೦ ಎ| ರಿಂಗ ಡೆ. ಸು. ಆಫ್ ಪೋಲೀಸ
೧೧ ,, ಜೋಸೆಫ ಪೋಲೀಸ ಇನ್ಸಪೇಕ್ಟರ
೧೨ ,, ಜಾಧವ ಪೋಲೀಸ ಇನ್ಸಪೇಕ್ಟರ
೧೩ ,, ಪರಾಂಜಪೆ ಮಾಮಲೇದಾರ ಅಥಣಿ

ಈ ಪ್ರಕಾರ ೧೩ ಜನರು ಆರೋಪಿಗಳಿದ್ದು ಅವರ ಮೇಲೆ ಇ. ಪಿ. ಕೋಡ ೧೨೦ ಬಿ. ೧೬೧ ೧೬೩ ೨೦೧, ೩೦೫, ೨೧೩, ೨೧೮, ೨೧೯, ೧೧೪ ಈ ಕಲಮುಗಳ ಪ್ರಕಾರ ಆರೋಪ ಇಡಲ್ಪಟ್ಟಿದೆ.

ಆರೋಪಿಗಳ ಪರವಾಗಿ ಮಿ| ಜೇಲೆ, ಮಿ ಸಪನೂರ ಎ| ದೇಶಪಾಂಡೆ, ಮಿ| ಕಜ್ಜೂರ, ಮಿ| ಮಹಾಬಲಶೆಟ್ಟಿ, ಮೂರಜಾವದೇ ವಕೀಲ ನೇಮಿಸಿದ್ದಾರೆ. ಪ್ರಾಸಿಕ್ಯೂಶನದ ಪರಿಯಿಂದ ಮಿ| ದಳವಿ ಇವರು ನೇಮಿಸಿದ್ದಾರೆ. ಸಿ. ಆಯ. ಡಿ. ಖಾತೆಯ ಡೆ. ಸುಪರಿಂಟೆಂಡೆಂಟ ಆಫ್ ಪೋಲೀಸ ಮಿ| ರೇಸಿಪುಡ, ಇವರು ಮುದ್ದಾಂ ಬಂದಿರುವರು. ಮಿ| ಕಳ್ಳೇರ ಸಿ. ಆಯ. ಡಿ. ಇನ್ಸಪೇಕ್ಟರ ಇವರು ಮುಖ್ಯ ಫಿರ್ಯಾದಿಯಾಗಿದ್ದಾರೆ.

ಖಟ್ಲೆಯ ಹಕೀಕತ್ತು.

ಸತ್ತಿ ಗ್ರಾಮದ ವಿಠು ಎಂಬ ಹೊಲೆಯರವನು ಸಂಕೇಶ್ವರ ಹುಲ್ಲಗಾವಲದ ಕಾವಲಗಾರನಿದ್ದು ತಾ| ೨೮-೧೦-೧೯೨೭ ಇಸ್ವಿ ದಿವಸ ಸಂಕೇಶ್ವರ ಹದ್ದಿಯಲ್ಲಿಯ ಸುಮಾರು ೧೩ ರೂಪಾಯಿ ಬೆಲೆಯ ಒಂದು ಜಾಲಿಯ ಗಿಡವನ್ನು ಯಾರೋ ಕಡಿದೊಯ್ದುದನ್ನು ನೋಡಿ ಸತ್ತಿಯ ಪೋಲೀಸ ಪಾಟೀಲ ಅಲಗೌಡನೇ ಒಯ್ದಿರುವನೆಂದು ಅಲ್ಲಿಯ ಪಂಚ ಹಾಗೂ ಜನರಿಗೆ ತಿಳಿಸಿದನು. ಮರುದಿವಸ ಪಂಚರು ಆ ಜಾಗೆಗೆ ಹೋಗಿ ಸದಾಶಿವ ಕಾನಸ್ಟೇಬಲ್ಲನ ಸಮಕ್ಷಮ ಪಂಚನಾಮಾ ಮಾಡಿದರು. ಸದರಿ ಸಿಪಾಯಿಯು ತನ್ನ ಪೋಲೀಸ ಪಟೆಸ್ತೀಲ ಬುಕ್ಕಿನಲ್ಲಿ ಸದರಿ ಗಿಡವನ್ನು ಅಲಗೌಡನೇ ಒಯ್ದ ಬಗ್ಗೆ ಹಾಗೂ ಪಂಚನಾಮಾ ಮಾಡಿದ ಬಗ್ಗೆ ಬರೆದಿಟ್ಟನು. ಆಗ್ಗೆ ಮಿ| ಬಂಕಟಸಿಂಗ ಸಬ್ ಇನ್ಸಪೇಕ್ಟರರು ಅಲಗೌಡನ ಮೇಲೆ ಫಿರ್ಯಾದಿಯಾದ ಸುದ್ದೀ ಕೇಳಿ ಸತ್ತಿಗೆ ಹೋಗಿ ಅಲಗೌಡನ ಕಡೆಯಿಂದ ಲಂಚ ತೆಗೆದುಕೊಂಡು ಮೊದಲಿನ ಸಾಕ್ಷಿಗಳನ್ನು ನಾಶಮಾಡಿ ಮತ್ತೆ ಪುನಃ ಕೊಟ್ಟ ಸಾಕ್ಷಿ ತಯಾರು ಮಾಡಿಕೊಂಡು ವಿಠು ಹೊಲೇರ ಇವನ ಮೇಲೆ ಕಳವಿನ ಆರೋಪ ಹೊರಿಸಿದರು. ಹಾಗು ಅಲಗೌಡನನ್ನು ಉಳಿಸಿಕೊಂಡರು.

ಇದನ್ನೆಲ್ಲ ಸಾಧಿಸಲಿಕ್ಕೆ ಸದಾಶಿವ ಸಿಪಾಯಿ ಪಾಟೀಲ ಮತ್ತು ಸತ್ತಿ ಗ್ರಾಮದ ಪಂಚರನ್ನು ಸಾಮೀಲ ಮಾಡಿಕೊಂಡರು. ಬಂಕಟಸಿಂಗ ಸ. ಇನ್ಸಪೇಕ್ಟರ ಇವರು ಅಲಗೌಡನ ಜವಾಬನ್ನು ತಾ. ೨೩-೧೦-೨೭ ದಿವಸ ತಕ್ಕೊಂಡಿದ್ದು ಅದರ ಮೇಲೆ ತಾ. ೨೩-೧೦-೨೬ ಅಂತಾ ನಮೂದ ಮಾಡಿದರು. ಆದರಂತೆ ೨೩ನೇ ತಾರೀಖಿನ ದಿವಸ ಮಹಜರ ರಿಪೋರ್ಟ ೨೧ನೇ ದಿವಸ ಕಳಿಸ್ಯಂತ ಧಾಖಲೆಗಳನ್ನು ಸಹ ತಿದ್ದಿಕೊಂಡರು. ಬಂಕಟಸಿಂಗ ಅಲಗೌಡಾ, ವ ಸದಾಶಿವ ಈ ಮೂವರು ತಮ್ಮಣ್ಣಾ ಮಿರಾಸಾಬ ವ ಕಳಬಸಪ್ಪಾ ಇವರ ಸಹಾಯದಿಂದ ಪಂಚನಾಮಾ ಮಾಡಿದರು. ಅಲಗೌಡನೇ ಗಿಡ ಕಡಿದ ಬಗ್ಗೆ ಮೊದಲು ಕುಲಕರ್ಣಿಯು ಮಾಡಿದ ಪಂಚನಾಮೆಯು ಹಕೀಕತ ಬರೆದ ಪೆಟ್ರೋಲ ಬುಕ್ಕಿನಲ್ಲಿಯ ಪಾನು ಹರಿದು ಹೊಸ ಪಾನು ಹಾಕಲ್ಪಟ್ಟಿತು. ಇದಕ್ಕಾಗಿ ಅಲಗೌಡನು ಬಂಕಟಸಿಂಗನಿಗೆ ೪೦೦ ರೂಪಾಯಿ ಲಂಚಕೊಟ್ಟನು. ವಿಠು ಹೊಲೇರ ಇವನು ತನ್ನ ಮೇಲೆ ಸುಳ್ಳು ಆರೋಪ ಬಂದಿದೆಂದು ಅಥಣಿ ಮಾಮಲೇದಾರ ಮಿ| ಪರಾಂಜಪೆ ಇವರ ಕಡೆಗೆ ಫಿರ್ಯಾದಿ ಕೊಟ್ಟನು. ಮಿ| ಪರಾಂಜಪೆ ಇವರು ಬಂಕಟಸಿಂಗ ಸಬ್ಇನ್ಸಪೇಕ್ಟರ ಕಡೆ ಚೌಕಸಿಗೆ ಹಾಕಿದರು. ವಿಠ ಹೊಲೇರ ಇವನು ಆ ತಾಲೂಕ ಎಡ್ಡಿ ಡೆ. ಸು. ಆಫ್ ಪೋಲೀಸ ಮಿ| ರಿಂಗ ಇವರಿಗೆ ಭೆಟ್ಟಿಯಾಗಿ ಬಂಕಟಸಿಂಗ ಇವರ ಕಡೆಗೆ ತಪಾಸಕ್ಕೆ ಕಳಿಸಿದ ಪ್ರಕರಣವನ್ನು ಮಿ| ಜೋಸೆಫ ಇವರ ಕಡೆಗೆ ಕೊಡಿಸಬೇಕೆಂದು ಬೇಡಿಕೊಂಡನು. ಆಗ್ಗೆ ಮಿ| ರಿಂಗ ಇವರು ತಮ್ಮ ಸ್ವಂತದ ಸಲುವಾಗಿ ಹಾಗು ಮಿ| ಜೋಸೆಫ ಇವರ ಸಲುವಾಗಿ ಕೆಲವು ಹಣ ತಕ್ಕೊಂಡು ಆ ಪ್ರಕರಣವನ್ನು ಜೋಸೆಫ ಇವರ ಕಡೆಗೆ ಕಳಿಸಲಿಕ್ಕೆ ಕಬೂಲ ಮಾಡಿದನು. ಇದನ್ನೆಲ್ಲ ಬಂಕಟಸಿಂಗ ಹಾಗು ಅಲಗೌಡನು ಅಂಜಿ ತಿಂದು ಕೂಡಿಯಲ್ಲಿ ಪೋಲಿಸ ಖಾತೆಯವರನ್ನ ಕೂಡಿದ್ದಾಗ್ಗೆ ಮಿ| ರಿಂಗ, ಜಾಧವ, ಜೋಸೆಫ ಇವರಿಗೆ ಭೆಟ್ಟಿಯಾಗಿ ಅನುಕ್ರಮವಾಗಿ ೭೦೦-೭೦೦-೧೦೦ ರೂಪಾಯಿ ಲಂಚಕೊಟ್ಟನು ಪುನಃ ಬಂಕಟಸಿಂಗನಿಗೆ ವಿಠು ಹೊಲೇರ ಇವನ ಮೇಲೆ ಖಟ್ಲೆ ಹಾಕಲಿಕ್ಕೆ ಹೇಳಿದರು. ಅದರಂತೆ ಮಿ| ಪರಾಂಜಪೆ ಇವರ ಕಡೆಗೆ ಮುದ್ದತಿ ಕೆಲವು ಸಾಕ್ಷಿ ತಕ್ಕೊಳ್ಳದೆ ಅವರ ಮೇಲೆ ಕಳವಿನ ಆರೋಪದ ಬಗ್ಗೆ ಶಿಕ್ಷೆ ಕೊಟ್ಟು ಕಡೆಗೆ ಸೆಶನ ಕೋರ್ಟ ಅಪೀಲದಲ್ಲಿ ಶಿಕ್ಷೆಯು ರದ್ದಾಯಿತು. ಅಷ್ಟರಲ್ಲಿ ವಿಠು ಈತನು ಪರಣ ಹೊಂದಿದನು.

ಸವದತ್ತಿ ಮ್ಯುನಿಸಿಪಾಲಿಟಿ.

—(೦)—

ಅಧ್ಯಕ್ಷರ ಬೆದರಿಕೆ.

ಸವದತ್ತಿಯ ಮ್ಯುನಿಸಿಪಾಲಿಟಿಯಲ್ಲಿ ಇಬ್ಬಣ ವಾಗಿದ್ದಲ್ಲ; ಈ ಬಣ ದ್ವೇಷವು ವಿಕೋಪಕ್ಕೆ ಹೋಗಿ, ಅಧ್ಯಕ್ಷರು ತಾವು ಲೋಕನಿಯುಕ್ತರಾಗಿ ಬಿಕ್ಕಟ್ಟೆಂಬದನ್ನು ಮರೆತು, ಮತ್ತು ಮುಂದಿನ ಕೆಲಸ ಬಾರಾದ್ದೆನೆಂಬದನ್ನು ನೈಮರೆತು ಮ್ಯುನಿಸಿಪಾಲಿಟಿಯ ತುಂಬ ದುರಾಡಳಿತವನ್ನು ನಡೆಸಿ, ಮ್ಯುನಿಸಿಪಾಲಿಟಿಯ ಎಲ್ಲ ಅಧಿಕಾರವನ್ನ ತಮ್ಮಾಧೀನ ಮಾಡಿಕೊಂಡಿದ್ದಾರೆ.

ತಾರೀಖು ೨೫ನೇ ಆಗಸ್ಟದ ದಿವಸ ಪ್ರೆಸಿಡೆಂಟ ಸ್ಥಿರ ಹಾಜರಿಯಲ್ಲಿ ವ್ಹಾಯಿಸ ಪ್ರೆಸಿಡೆಂಟರು ಜನರಲ ಕಮಿಟಿ ಕರೆದರು. ಇದಾ ವಿರುದ್ಧ ಸ್ಥಳೀ ಪ್ರೆಸಿಡೆಂಟರೇ ತಿಳಿಸಿಯ ಕಾರಣದಿಂದ ಅವರ ಹಟದಿಂದ ಜನರಲ ಕಮಿಟಿ ಕರೆದರು. ಈ ಕುಸ್ತಿ ನೋಡುವದಕ್ಕಾಗಿ ಊರೊಳಗಿನ ನೂರಾರು ಅಧವಾ ಅದಕ್ಕೂ ಹೆಚ್ಚು ಜನರು ಕಮಿಟಿಗೆ ಬಂದರು.

ಕಮಿಟಿಯ ಕೆಲಸವೆಲ್ಲವೂ ಶೈನೋನ್ನೆ ಬಾಯಿಸೊನ್ನೆಯಿಂದಲೇ ನಡೆಯಿತು. ಅಧ್ಯಕ್ಷರ ವಕ್ತೃಪರವಾಗಿ ಮಾತಾಡಬಾರದು, ಅಧ್ಯಕ್ಷರು ಸೊನ್ನೆ ಮಾಡಬೇಕು; ಸೇಕ್ರೆಟರಿಯು ಬರೆಯಬೇಕೆಂದು ಮುಂದಾಗಿ ಗೊತ್ತು ಮಾಡಿಕೊಂಡಿದ್ದರು. ಅವರ ಸಂಕೇತದ ಪ್ರಕಾರ ಸೇಕ್ರೆಟರಿಯು ಬರೆಯ ಲಾರಂಭಿಸಿದನು. ಹೀಗಾಗಿ ಕಮಿಟಿಯಲ್ಲಿಯವರ ಕೆಲಸ ನಡೆಯಿತೆಂದು ಎರಡನೆಯ ಬಣದ ಮೂವರಿಗೂ ಪ್ರೇಕ್ಷಕರಿಗೂ ತಿಳಿಯದೆ ಹೋಯಿತು. ಹೊಸ ಸೇಕ್ರೆಟರಿ, ದೇಶಮಾನ್ಯ ಮಿ. ಚನ್ನಬಸವಗೌಡಾ ಇವರಿಗೂ ನಿನಾ ತಿಳಿಯದಾಯಿತು. ಪ್ರೆಸಿಡೆಂಟರು ಸೊನ್ನೆಮಾಡಿ ಹೇಳುವ ಮತ್ತು ಸೇಕ್ರೆಟರಿಯು ಬರೆಯುವ ಘಠನೆ ಆದನಂತರ ಅಧ್ಯಕ್ಷರು ಒಂದು ಆಫೀಸ ಆರ್ಡರ ತೆಗೆದರು. ಅದೇನಂದರೆ. "ಯಾವತ್ತು ಸವರರ ಬರುವ ನನ್ನ ಪೂರ್ವ ಅಧಿಕಾರದ ಕಳಗೆ ಕಾಯದೆಯಿಂದ ರೂಲ ಪ್ರಕಾರ ಇರುತ್ತಾರೆ. ಯಾರೂ ನನ್ನ ಹುಕುಮಿನ ಹೊರತು ಎರಡನೇದವರು ಯಾವ ಕೆಲಸಗಳನ್ನ ಕೇಳಬಾರದು. ಕಚೇರಿ ಕಾಗದಪತ್ರ ಮತ್ತು ನಾಮಾನ ತೋರಿಸಬಾರದು. ಆಫೀಸ ವೇಳೆಯ ಹೊರತು ಆಫೀಸು ಇಲ್ಲದಾಗ್ಯೆ ಕಚೇರಿಯಲ್ಲಿ ಯಾರನ್ನು ಬಿಡಬಾರದು. ಇದರ ವಿರುದ್ಧ ಯಾರಾದರೂ ವರ್ತಿಸಿದರೆ ಯೋಗ್ಯ ಶಿಕ್ಷೆಯ ಪಾತ್ರರಾದೀತು."

ಈ ಪ್ರಕಾರ ಅಧ್ಯಕ್ಷ ಮಹಾಶಯರು ಹುಕುಮು ಮಾಡಿದ ನಂತರ ಆ ಪಾಟು ಮತ್ತು ಸಂದುಕಗಳಿಗೆ ಕೀಲೀ ಹಾಕಿಸಿ, ಕೀಲಿ ಪೋಸರು ಮಾಡಿಸಿದರು. ಇದರ ಕೆಲಸ ಮೊದಲಿನವರು ಅಧ್ಯಕ್ಷರಿಗೆ ಅಧೀನರಾದರು. ಸೇಕ್ರೆಟರಿ, ವ್ಹಾಯಿಸ ಪ್ರೆಸಿಡೆಂಟ ಮೊದಲಾದವರು ಏನಾದರು ಕೇಳ ಬೇಕಾದರಾಯಿತು ನಿಮಗೆ ಅಧಿಕಾರ ಮಾತ್ರ. ಇದೆ ನಿಮ್ಮ ಪಾಲ ಶಮ್ಮ ... ಅಧ್ಯಕ್ಷರ ... ಯು ಅಧ್ಯಕ್ಷರ ಮನೆಯಲ್ಲಿ ನಡೆದಿದೆ.

ವ್ಹಾಯಿಸ ಪ್ರೆಸಿಡೆಂಟರು ಜನರಲ ಕಮಿಟಿಯಲ್ಲಿ ನೇಮಿಸಲ್ಪಟ್ಟಿದ್ದ ಸೆಕ್ರೆಟರಿಯು ಪ್ರೆಸಿಡೆಂಟರ ಜನರಲ ಕಮಿಟಿಯಲ್ಲಿ ನನ್ನಂತೋ ಬರಹ ದೋರ ಆಗಿದ್ದಾನೆ. ಈತನು ಸೈಟರಿಯಲ್ಲಿ ಈತನಿಂದ ಒಂದ ಪಣವನ್ನು ಟ್ರೆಜರಿಯಲ್ಲಿ ಜಮಾ ಕಕ್ಕೊಳ್ಳಬಾರದೆಂದು ಅಧ್ಯಕ್ಷರು ಟ್ರೆಜರಿ ಆಫಿಸರಿಗೆ ಬರೆದು ತಿಳಿಸಿದ್ದಾರೆ. ಪಾದ ಜವಾಬದಾರಿ ವ್ಯವಹಾರದಿಂದ ತಿರಸ್ಕಾರ ಕೆಲಸದ ತನಕ ಮ್ಯುನಿಸಿಪಾಲಿಟಿಯ ಕುಂಟು ಬೀಳಬಂದೆನಿಸಿ ನಡೆದಿದೆ. ಕಲೆಕ್ಟರ ಕಮಿಶನರ ಸಾಹೇಬರು ಈ ವಿಷಯ ದಾಗಿ ಲಕ್ಷ್ಯ ಕೊಡಬೇಕಾಗಿ ಮತ ಮಾಡಬೇಕೆಂದು ಅಗತ್ಯ ಪೂರ್ವಕವಾಗಿ ಸೂಚಿಸುತ್ತೇವೆ.

ಧಾರವಾಡದಲ್ಲಿ ನಕಲೀ ಮೊಹರಮ್ಮ.

——(೦)——

ಹಿಂದುಗಳಲ್ಲನೇಕರು ಒಂದುಗೂಡಿ ದಾರವಾಡದಲ್ಲಿ ಕಾಲ್ಪನಿಕ ಮೊಹರಮದ ದಿವಸ ವಿಚಿತ್ರ ವೇಷಗಳನ್ನು ಹೊಂದಿಸುತ್ತಿರುವರು. ವೇಷಗಳು ಸಜ್ಜಾಗಿವೆ. ದೇವರ ಹಾಡುಗಳಿವೆ, ಕುಣಿತವಿದೆ, ಬಡಿಗ್ಯಾಯಿದೆ, ಬ್ಯಾಂಡ ಬಾರಿಸುವರು, ನಿಸ್ಸಿಮ ಮೇಲ ಕೈಯಿಟ್ಟು, ವ್ಹಾ ಪೂ ಸುಂಯ್ಯಾ ನ ನೆರವಿಷ್ಟದ ಅನುಕರಣೆಯಿವೆ. ಅದಕ್ಕಾಗಿ ಈ ದಿಕ್ಕಿನಲ್ಲಿ ಇಷ್ಟೇ ಅಂತರ, ಮುಸಲ್ಮಾನರ ಅಸ್ತಿಲ್ಲ ಸೂರಿನ್ನವಲ್ಲಿ ದೇವಲಿಗರುವವು. ಹೀಗಿರಿಸ ಜನರ ಈ ಅನುಕರಣ್ಯದ ಹಲವುದಕ್ಕೆ ಹಿಂದುಗಳಿಲ್ಲ ಇಷ್ಟೇ ಅಲ್ಲದೆ; ಉಳಿದ್ದೆಲ್ಲ ದೇವ ಭೂಷಣಗಳೆಲ್ಲ ಮೋಹರಮ್ಮ ಏನೇ ತೋರುತ್ತಿರುವರು.

ವೇಷಗಳಿರಲಿ, ಮೊಹರಮ್ಮದ ಅನುಕರಣಗಳಿರಲಿ ದೇವತಾ ಸ್ತೋತ್ರದ ವಿಕೀಕರಣಕ್ಕಾಗಿ, ಜಲಚ್ರ ಹಿಂದೀ ಬಾಂಧವರ ಏಕೀಕರಣವಾದದ್ದು ಬದ್ಧವನ್ನವು. ಶುಭದಿನವು ಐಕ್ಯೋದ್ಯೋತಕವೆಂದು ಧಾರಾಳವಾಗಿ ಹೇಳಬಲ್ಲೆವು. ಆದರೆ ನಕಲೀ ಮೊಹರಮ್ಮ ವಾಗಬಾರದು! ಒಡೇ ಕುಣಿ ಕುಣಿದು ದಣಿಯಬಾರದು. ಒಂದೆರಡು ದಿವಸ ಹೆಸರಿನಿಂದ ಪದಗಳನ್ನು ಮಾಡಿಕೊಂಡು, ಮಸಲಂ ದಂತೆ ವೇಷ ಭೂಷಣಗಳಿಂದ ಮೆರೆಯಬಾರದು. ಈ ಕೃತಿಯ ಸ್ಥಿತಿಯನ್ನು ಕೆಳಗಿನವರ ಸಿಇವಾದ ಹೇತುವಾದಷ್ಟೆ ಐಕ್ಯತೆ, ದೇವತಾರಾಧನೆಯ ಮಾತಿಗೆ ಬೇಕಾದದ್ದೆಲ್ಲ ನೆಲ್ಲೋಚನೆಯಿಂದ ತಾವು ಆಚರಿಸುವದೇನಂದರೆ—

೧ ಪ್ರತಿಯೊಂದು ಮೇಳದವರು ಯಾರೊಬ್ಬ ಸಾಧು ಸತ್ಪುರುಷರ ಸಂಪೂರ್ಣ ಚರಿತ್ರವನ್ನು ಪದ್ಯರೂಪದಿಂದ ತಾಳಗತ್ತಿನೊಡನೆ, ನೋಟಕರ, ಮನಪೊಲಿಸುವಂತೆ ಅನ್ನಬೇಕು.

೨ ಧರ್ಮದ ಸಿಜಾದ ತತ್ವಗಳಿದ್ದ ಪದಗಳು ಪಠಿಸಬೇಕು.

೩ ಸತ್ಪುರುಷರ ನಮನವೇಶಗಳಿದ್ದ ಚಾಕ್ಯಗಳು ದೊಡ್ಡ ಅಕ್ಷರದ ಪಟಗಳು ಪ್ರತಿಯೊಂದು ಮೇಳದವರ ಕೈಯಲ್ಲಿ ಎಲ್ಲರಿಗೂ ಕಾಣುವಂತಿರಬೇಕು.

೪ ಸ್ವಾತಂತ್ರ್ಯ, ಸ್ವದೇಶಭಕ್ತಿಯ ಲಾವಣಿಗಳಿರಬೇಕು.

೫ ಅನುಕರಣಮಾಡುವಂಥ ರೀತಿಯ ಉಡುಪುಗಳಿರಬಾರದು.

೬ ಮಹಾತ್ಮಾಜಿಯವರ, ಸತ್ಪುರುಷರ, ದೇಶಭಕ್ತರ ದೊಡ್ಡ ದೊಡ್ಡ ಫೋಟೋಗಳು ಪ್ರತಿಯೊಂದು ಮೇಳದವರ ಮುಂದೆ ಎಲ್ಲರಿಗೂ ಕಾಣುವಂತಿರಬೇಕು. ಇವರಲ್ಲಿ ಒಬ್ಬರ, ಇಬ್ಬರ ಚರಿತ್ರವಾದಷ್ಟರ ಮಟ್ಟಿಗೆ ಹೆಚ್ಚು ಜನರು ಅರಿಯತಕ್ಕದ್ದಾಗಿ.

೭ ದಾಂಡಪಟ್ಟಿ ಗರಡಿ ಹೊಡೆಯುವಿಕೆ, ದೊಡ್ಡ ಆಟ ಬಲವರ್ಧಕ ಚಮತ್ಕಾರಗಳು ನೋಡುಗರಿಗೆ ಮನೋರಂಜನೆ ಕೊಡಬೇಕು.

ಹೀಗೆ ಮೊದಲಾದ ಸ್ಥೂಲರೂಪದಿಂದ ಸಿದ್ಧಾಂತವನ್ನು ಸದ್ಯೋಕ್ತಿಯಿಂದ ಸೂಚಿಸಿದ್ದೇವೆ. ಈ ಸೂಚನೆಯ ಗ್ರಾಹ್ಯತೆಯನ್ನು ನಿರ್ಣಯಿಸಿ ಮನಸಿನಿಂದ ನಿರ್ಣಯಿಸಿ, ಅವಶ್ಯಕವಾದ ಸುಧಾರಣೆಗಳನ್ನು ಶೀಘ್ರವೇ ಸ್ವೀಕರಿಸಿ, ... ನೀತಿ ... ಧರ್ಮಕ್ಕೂ ಅಥವಾ ... ಹಿಂದುಗಳ ಮಾನ ... ದಿಂದ ಆ ಪರಮ ಕರುಣಾಳುವಾದ ಪರಮಾತ್ಮನನ್ನು ಪ್ರಾರ್ಥಿಸುವೆವು.

ಯಾರು ಉಂಡ ಮನೆಯ ಗಳ ಎಣಿಸುವರು?

ಹಿಂದುಸ್ಥಾನದ ನಿಜ ಮಿತ್ರರಾರು!!

—(೦)—

ಅಬ್ಬಬ್ಬ!! ಸರ ನಾಯಮನಸಾಹೇಬರೇ!!

—೦—

ಮದ್ರಾಸದ ಹಿಂದಿನ ಮಂತ್ರಿಯವರಾಗಿ, ಈಗಿನ ಕೌನ್ಸಿಲದ ಚುನಾವಣೆಯಲ್ಲಿ ಅರಿಯದ ಹೊಂದಿದ ಸರ ಕೆ. ವ್ಹಿ. ರೆಡ್ಡಿಯವರು ಯಾವಾಗಲು ಸರಕಾರದ ಪಕ್ಷಪಾತಿಗಳಾಗಿದ್ದಾರೆ. ಬ್ರಿಟಿಶ ಪಕ್ಷದವರು ನಾಯಮನನ್ನ ಕಮಿಶನಕ್ಕೆ ಬಹಿಷ್ಕಾರ ಹಾಕಬೇಕೆಂಬ ಠರಾವು ನಿಶಾದೆದಾಗ ಕೂಡ, ಇವರು ಸರಕಾರದ ಸ್ತುತಿ ಮಾಡುತ್ತಾ, ವಿರೋಧಿಸಿದ ಮಾತ್ರ ಸುಮ್ಮನೆ ಇದ್ದಾರೆ. ಆಹೋ ಏನ ಆಶ್ಚರ್ಯ! ಅವರ ಪ್ರಶಂಸೆಯ ವಾಕ್ಯಗಳ ಸಂಗ್ರಹವನ್ನು ಪ್ರಸಿದ್ಧಿಪಡಿಸಬೇಕಾಗಿದೆ. ಇವರಿಗೆ ... ಮಾಡಿಸಿದರು. ... "ಸರ ನಾಯಮನು ನಮ್ಮ ನಾಡಾರೋಬುದು ಹಿಂದುಸ್ಥಾನದ ನಿಜವಾದ ಮಿತ್ರರಾಗಿದ್ದಾರೆ. ಅವರ ನಿಷ್ಪಕ್ಷಪಾತದಿಂದ ಹಿಂದುಸ್ಥಾನಕ್ಕೆ ಪ್ರತ್ಯಕ್ಷವಾಗಿ ಹಿತವಾಗುವದೆಂದು" ಭಾಷಣ ಮಾಡಿದ್ದಾರೆ. ಇದರ ಮೇಲಿನ ಉದ್ಗಾರವು ಮೇಜವಾನಿಯ ವೇಳೆಯಲ್ಲಿದ್ದುದರಿಂದ, ಉಂಡ ಮನೆಯ ಗಳ ಎಣಿಸುವಂತಿರುತ್ತದೆ. ನಮಗು ದೊಡ್ಡ ದೊಡ್ಡ ಇಂಗ್ಲಿಷ ಜನರನ್ನು ಕಂಡು, ಹಿಂದುಸ್ಥಾನದ ವಿಷಯದಲ್ಲಿ ಅವರ ಸಹಾನುಭೂತಿಯನ್ನು ನೋಡಿ ಸಂತೋಷಿಸುತ್ತಿದ್ದಾರೆ. ಆದರೆ ವಿಶ್ವಾಸವಿದ್ದಷ್ಟು ಜನರನ್ನು ಮೊದಲಾದವರು ನಿರಾಶೆಗೊಂಡಿದ್ದಾರೆ ಇದರ ಅರಿಗೆಯಾಗಿರುವದು ಮಹಾಖೇದವಾದದ್ದೇ ಸರಿ.

ಒಬ್ಬ ಸರರಿಗೆ ಇನ್ನೊಬ್ಬ ದೊಡ್ಡ ಸರರ ಸ್ವಮೋಕ್ಷದ!!

—(೦)—

ಸರ ಕೆ. ವ್ಹಿ. ರೆಡ್ಡಿಯವರು ಮದ್ರಾಸದ ಮಂತ್ರಿಯಾಗಿದ್ದರು. ಸರ ಕೆ. ... ದ್ವಿನೀಯ ... ಸರ ನಾಯಮನು ಸರಕಾರ ... ಹಾಕಿದ ಸ್ವರಾಜ್ಯವನ್ನು ... ಮುಂದೆ ಕೊಟ್ಟಂತೆ ಉದ್ಗಾರ ತೆಗೆದಿದ್ದಾರೆ.

ಸರ ಪಟ್ಟಾಭಿ ... ಇವರು ಪಾರ್ಲಮೆಂಟಿನ ಸ್ವರಾಜ್ಯದ ಬಗ್ಗೆ ಮಹಾನು ರಾಜಕೀಯದ ಇಂಗ್ಲಿಷ ಜನರು ತಮ್ಮ ಜನದ ದೃಷ್ಟಿಯನ್ನು ಬದಲು ಮಾಡುವರೆಂದು ಹೇಳುತ್ತಾರೆ. ಇದೇ ಹಿಂದುಸ್ಥಾನವು ವರ್ತಮಾನದ ಸ್ವರಾಜ್ಯವನ್ನು ಒಲಿಸಿಕೊಳ್ಳುತ್ತದೆಂಬದನ್ನು ಅಂಗೀಕರಿಸುವ ಮನಸ್ಸಿನಲ್ಲಿ ಗುರುತು ಇಲ್ಲ ದಿತ್ಯಾಶ್ಚರ್ಯವು. ಹಿಂದೀ ಜನರು ಬಲೀ ನಂತವು ದೂರಿನ, ಅದು ದೊರೆಯುವಂತೆ ಕೃತಿಯ ಅಭಿ ವ್ಯಕ್ತಪಡಿಸುವರು. ಲಾರ್ಡ ಬರ್ಕನಹೆಡ್ಡ ಮತ್ತು ಅರ್ಲಾವಿಂಟರ್ನಸಾಹೇಬರು ಭಾರತ ಮಂತ್ರಿ ಉಪ ಮಂತ್ರಿಯಾಗಿರುವ ತನಕ ಹಿಂದುಸ್ಥಾನವು ಬ್ರಿಟಿಶ ಸರಕಾರದಿಂದ ಏನನ್ನೂ ಅಪೇಕ್ಷಿಸ ಕೂಡದು.

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರವರೆಗೆ ಶನಿವಾರ ೧೦ ರಿಂದ [illegible] ಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲು ಖಾತೆಗಳು:— ಪ್ರತ್ಯೇಕವಾಗಿ ತೆಗೆಯಲ್ಪಡುವವು.

ಮುದತಿ ಠೇವುಗಳು— ಒಪ್ಪಿಗೆಯಿಂದ ತೆಗೆದುಕೊಳ್ಳಲ್ಪಡುವವು- ಬಡ್ಡಿದರ ರೂ. ೩॥ ೬ ತಿಂಗಳ ಕರಾರಿನಿಂದಲೂ ತೆಗೆದುಕೊಳ್ಳಲ್ಪಡುವವು. ಬಡ್ಡಿದರ ೩॥ ರೂ

ಸೇವಿಂಗ್ಸ ಬ್ಯಾಂಕ— ಒಪ್ಪಿಗೆಯಿಂದ ತೆಗೆದುಕೊಳ್ಳಲ್ಪಡುವವು ಬಡ್ಡಿದರ ೩ ರೂ.

ಸರಕಾರಿ ಹಾಗು ಇತರ [illegible]

[illegible] ಮೇಲೆ [illegible] ಬಡ್ಡಿದರ [illegible] ರೂ [illegible] ಕ್ಕಿಯು ಸಲುವಾಗಿ [illegible] ಮಾಡಿ ಅವಾ [illegible] ಹಿಡಿಯುವದರಲ್ಲಿ ಬರುವದು. [illegible] ತಿಳಿಸಲ್ಲಿ [illegible] ವದರಲ್ಲಿಯೂ ಬರುವದು [illegible] ದುವವು

ವ್ಯಾಪಾರಿ ಮಂಡಿಗಳು ಯೋಗ್ಯ ಕಮೀಷನದಿಂದ ತೆಗೆದುಕೊಳ್ಳಲ್ಪಡುವವು. [illegible] ಗಳನ್ನು ಕೊಡಕೊಳ್ಳುವದಕ್ಕಾಗಿ [illegible] ಸವಲತುಗಳನ್ನು ಕೊಡುವದರಲ್ಲಿ ಬರುವವು. [illegible] ನಿಯಮಗಳ ಪ್ರತಿಗಳೂ [illegible] ಪತ್ರಗಳೂ ಸದರಿ ಬ್ಯಾಂಕಿನಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ — ಬಿ. ಜೋಸೆಫ,
ತಾ॥ ೧೮ [illegible] — ಏಜಂಟರು

ಶ್ರೀ ವಿದ್ಯಾರಣ್ಯ ಪ್ರಕಾಶ ಸಂಸ್ಥೆಯೂ
ಶ್ರೀ. ಶಂಕರ ಕರ್ನಾಟಕ ಪುಸ್ತಕ ಭಾಂಡಾರವೂ

ಶ್ರೀ ಶಾಕಾಂಭರೀ ನಿಧಿಯೂ

೧ ಶ್ರೀ ವಿ ಪ್ರ ಸಂಸ್ಥೆಯಿಂದ ೧) ಕರ್ನಾಟಕ ಸಿಂಹಾಸನ ಸ್ಥಾಪನೆ [೨] ಕಥೆಗಳನ್ನೊಳಗೊಂಡ [illegible] ಚರಿತ್ರೆ (೩) ಛತ್ರಪತಿ [illegible] (೪) ಕರ್ನಾಟಕ ಸಾಮ್ರಾಜ್ಯ [illegible] ಪ್ರಕಟವಾಗಿವೆ. [illegible] ಹೊಂದಿದ್ದಾರೆ. [illegible] ತಿಳಿಸಿ ಬರೆಯತಕ್ಕದ್ದು. [illegible]

೨ ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರದಲ್ಲಿ ಎಲ್ಲ ಬಗೆಯ ಕನ್ನಡ ಪುಸ್ತಕಗಳು [illegible]

ಮದ್ರಾಸದ ಕಾಂಗ್ರೆಸ ಸಭೆಯಲ್ಲಿ ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವರಾಜ್ಯ, ಸ್ವಾತಂತ್ರ್ಯ ಬೇಕೆಂಬ ಠರಾವು ಪಾಸಾಯಿತು. ಅನಂತರ ಆದ ಸರ್ವ ಪಕ್ಷೀಯರ ಸಭೆಯಲ್ಲಿ ಬ್ರಿಟಿಶ ಸಾಮ್ರಾಜ್ಯಾಂತರ್ಗತವಾದ ವಸಾಹಾತಿನ ಸ್ವರಾಜ್ಯವಾದರಾಯಿತೆಂಬ ಠರಾವು ಮಾಡಲ್ಪಟ್ಟಿತು. ಅದರೆ ಭಾರತೀಯ ಮಹಾಸಭೆಯ ಧ್ಯೇಯಕ್ಕೂ ಇದಕ್ಕೂ ಭೂಮ್ಯಾಕಾಶದಷ್ಟು ಅಂತರ!! ಉಚ್ಚ ಧ್ಯೇಯದಿಂದ ಕನಿಷ್ಠ ಧ್ಯೇಯಕ್ಕೆ ಪತನ!! ಆದುದರಿಂದ ಪಂಡಿತ ಜವ್ಹಾರಲಾಲ, ಶ್ರೀ ಶ್ರೀನಿವಾಸ ಅಯ್ಯಂಗಾರ ಮೊದಲಾದವರು ಸಂಪೂರ್ಣ ಸ್ವಾತಂತ್ರ್ಯ ಮತವಾದಿಗಳಾಗಿ, ಈ ಮತವನ್ನು ಹಿಂದುಸ್ಥಾನದ ತುಂಬ ಹಬ್ಬಿಸುವದಕ್ಕಾಗಿ ಸ್ವತಂತ್ರವಾದ ಸಂಸ್ಥೆಗಳನ್ನು ಸ್ಥಾಪಿಸುವರು. ಈಗಾಗಲೆ ಕೆಲವು ಸ್ಥಳಗಳಲ್ಲಿ ಬೀಜ ಬಿತ್ತಿದ್ದಾರೆ. ಈ ಬೀಜಗಳು ಆಲದ ಮರದಂತೆ ಬಲವಾಗಿ ಬೆಳೆಯಬಾರದೆಂದು ಇವನ್ನು ಅಲ್ಲಿಯೇ ಕಮರಿಸಬೇಕೆಂದು ಹಿಂದುಸ್ಥಾನ ಸರಕಾರದವರು ಆಲೋಚಿಸುತ್ತಿದ್ದಾರೆಂದು ಒಂದು ವರ್ತಮಾನ ಪ್ರಸಿದ್ಧವಾಗಿದೆ. ರಾಜಕೀಯ ಚಳವಳಿಯಲ್ಲಿ ಮುಂಚೆ ಓಡುತ್ತಿರುವಂಥವರನ್ನು ಆದಷ್ಟು ಹಿಂದೆ ಜಗ್ಗಬೇಕೆಂದು ಸರಕಾರದವರು ಕಳೆದ ಮೂವತ್ತು ವರ್ಷಗಳಿಂದ ಸತತವಾಗಿ ಪ್ರಯತ್ನ ಮಾಡುತ್ತಾ ಇದ್ದಾರೆ. ರಾಜದ್ರೋಹದ ದಿಸೆಯಿಂದ ಲೋಕಮಾನ್ಯರಿಗೆ ಮಾಡಿದ ಶಿಕ್ಷೆ, ಹೇವರಾಲಿನ ದಿಸೆಯಿಂದ ಅನಿಷ್ಟ ಘಟಿತವಾದ ಬಂದಿವಾಸ, ಅಸಹಕಾರ ಚಳವಳಿಯಲ್ಲಿ ಸಾವಿರಾರು ಜನರಿಗಾದ ತುರಂಗವಾಸ ಇವೆಲ್ಲ ಹಿಂದುಸ್ಥಾನದ ರಾಜಕೀಯ ಚಳವಳಿಯ ಪ್ರಗತಿಯನ್ನೇ ತೋರಿಸುತ್ತವಲ್ಲದೆ, ದುರ್ಗತಿಯನ್ನು ತೋರಿಸುವದಿಲ್ಲ. ಅದೇ ಪ್ರಕಾರ ಪಂಡಿತ ಜವ್ಹೇರಲಾಲ ನೆಹರು ಮೊದಲಾದವರ ಮೇಲೆ ಕತ್ತಿಯನ್ನು ಹಿರಿಯುವರೆಂದಾಗುವದು. ಮಲಗಿದ ಹುಲಿಯನ್ನು ಎಬ್ಬಿಸಿ, ಕಡಿಸಿಕೊಂಡಂತಾಗುವದು. ವಸಾಹಾತಿನ ಸ್ವರಾಜ್ಯವನ್ನಾದರೂ ಕೊಟ್ಟರೆ- ಈ ಹುಟ್ಟುಗೆ ಈ ಬೇಗೆಯಾಗೀತು?

ಲಂಡನದಲ್ಲಿ, ಅಹಮದಖಾನ ಮಹಮದಖಾನನೆಂಬವನು ಮೈಲಾನಾ ಮಹಮದಲಿಯವರ ಸ್ತುತ್ಯ ಪೌಂಡು ಬಂಗಾರದ ನಾಣ್ಯಗಳನ್ನು ಕದ್ದನೆಂಬ ಆರೋಪದ ವಿಚಾರಣೆಯು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ನಡೆದು, ಆರೋಪಿಯು ದೋಷಮುಕ್ತನಾದನು.

ಖಾನಬಹಾದ್ದೂರರ ಮನೆಯಲ್ಲಿ ನಡೆದ ಮುಸಲತ್ತು.

--(೦)—

ಕೋರ್ಟಿನಲ್ಲಿ ಪೋಲೀಸ ಇನ್ಸಪೇಕ್ಟರರ ಜವಾಬು

— ೦—

ಸುಲ್ತಾನ ಪೇಟೆಯ ಶ್ರೀ ಗಣೇಶನ ವಿಗ್ರಹವನ್ನು ಮುಸಲಮಾನರು ಎಷ್ಟು ಪರಿಯಾಗಿ ಭ್ರಷ್ಟ ಮಾಡಿದರೆಂಬದನ್ನು ಕಣ್ಣಾರೆ ಕಂಡ ಪೋಲೀಸ ಇನ್ಸಪೇಕ್ಟರ ಶೇಷಾದ್ರಿಯವರು ಮುಂದೆ ಕೊಟ್ಟಂತೆ ಜವಾಬು ಕೊಟ್ಟಿದ್ದಾರೆ.

ಜುಲೈ ತಿಂಗಳ ೩೦ ನೇ ತಾರೀಖಿನ ದಿವಸ ಸಾಯಂಕಾಲದಲ್ಲಿ ಗಣಪತಿಯ ಪೂಜೆಯಾದ ಕೂಡಲೆ, ಕಲ್ಲುದುಂಡಿಗಳ ಮಳೆ ಸುರಿಯುತ್ತದೆಂಬ ಕೂಗು ಕೇಳಿದೆನು. ಈ ಪಾಷಾಣ ವೃಷ್ಟಿಯು ಕೂತ ಜನರ ಪಾದರಕ್ಷೆಗಳೂ ಬಹುವಾಗಿ ಹಾರುತ್ತಿದ್ದವು. ಕೂಡಿದ ಜನರಲ್ಲಿ ಬಹು ಕ್ರೋಧ ಹುಟ್ಟಿಸಿತು. ಅವರನ್ನು ನಿಯಮನಮಾಡ ವದು ಅಶಕ್ಯವಾಯಿತು. ಪೋಲೀಸ ದಂಡಿನ ಸಹಾಯ ತರಿಸಲು ಟೆಲಿಫೋನ ಮಾಡುವದಕ್ಕಾಗಿ ಖಾನಬಹಾದ್ದೂರರ ಮನೆಯಲ್ಲಿ ಹೋದೆನು. ಹತ್ತು ನಿಮಿಷಗಳ ನಂತರ ಖಾನಬಹದ್ದೂರರು ನನಗೆ ಟೆಲಿಫೋನು ಮಾಡಲು ಅಪ್ಪಣೆ ಕೊಟ್ಟರು. ಆಗ ಮುಸಲ್ಮಾನ ತರುಣರು ಖಾನಬಹಾದ್ದೂರರ ಒಳಂಗಳದಲ್ಲಿ ಕಂಟತಟಾಗಿ ಸೇರಿದ್ದರು. ಟೆಲಿಫೋನು ಮಾಡಿ ಬಂದು ನೋಡವಷ್ಟರಲ್ಲಿ ಈ ಗುಂಡಪುಂಡರು ನಿರ್ಲಜ್ಜತನವೆನಿಸುವಂಥ ಅತ್ಯಾಚಾರ ಮಾಡಿದ್ದರು. ಆಯುಧಪಾಣಿಗಳಾದ ಮುಸಲಮಾನರು ಖಾನಬಹಾದ್ದೂರರ ಮನೆಯಿಂದ ಹೊರಬಿದ್ದು, ಹಿಂದೂ ಜನರನ್ನು ಸಿಕ್ಕಂತೆ ಹೊಡೆಯುತ್ತಿದ್ದರು. ಈ ಧರ್ಮಾಂಧರು ಗಣಪತಿಯನ್ನು ಸ್ಥಾನಭ್ರಷ್ಟಮಾಡಿ, ಕಿತ್ತಿ ತೆಗೆದು ಪಾದರಕ್ಷೆ ಮತ್ತು ಬಡಿಗೆಗಳಿಂದ ಮುನದಣಿ ಹೊಡೆದರು. ನನ್ನನ್ನೂ ಕಲ್ಲು ಮತ್ತು ಬಡಿಗೆಗಳಿಂದ ಘಾಯಪಡಿಸಿದರು. ಶಾಲೆಯ ಮುಂದಿರುವ ಒಂದು ಮನೆಯ ಮೇಲ್ಮಾಳಿಗೆಯಿಂದ ಯಾರೋ ಗುಂಡು ಹಾರಿದ್ದನ್ನೂ ಕೇಳಿದೆನು.

ಮದ್ರಾಸದ ಈಗಿನ ಶಾಯದೆ ಪಂಡಿತರಾದ ಮಿ. ಕೃಷ್ಣನಾಯರರು ಮಲಬಾರದ ಬಂಡಿನ ಆರೋಪಿಯಾದ ಮಿ. ನಾರಾಯಣ ಮೆನನರನ್ನು ಬಂಧಮುಕ್ತ ಮಾಡಿಸಲು ಕೌನ್ಸಿಲದಲ್ಲಿ ಸದ್ದು ಹೊಡೆದು ಭಾಷಣ ಮಾಡುತ್ತಿದ್ದರು. ಈಗ ಮಿ. ನಾರಾಯಣ ಮೆನನರ ವಿಚಾರವೇನೆಂದು ಇವರಿಗೆ ಕೌನ್ಸಿಲದಲ್ಲಿ ಪ್ರಶ್ನೆ ಮಾಡಲು ಇವರ ವಿಷಯಕವಾದ ಕಾಗದ ಪತ್ರಗಳನ್ನು ಓದಲು ತಮಗೆ ಅವಕಾಶನೇದೊರೆಯಲಿಲ್ಲೆಂದು ಉತ್ತರ ಕೊಟ್ಟಿದ್ದಾರೆ!

ಫ್ರಾನ್ಸ ಮತ್ತು ಜರ್ಮನಿಯ ಮನಸ್ತಾಪ.

——(೦)——

ಹೊಟ್ಟೆಯಲ್ಲಿಯ ಸಿಟ್ಟು ರಟ್ಟೆಯಲ್ಲಿಲ್ಲ.

—(೦)- .

ಮಹಾಯುದ್ಧದ ವೇಳೆಯಲ್ಲಿ ಫ್ರೆಂಚರು ಜಯಶಾಲಿಗಳೆಂಬ ಹೆಮ್ಮೆಯಿಂದ ಜರ್ಮನಿಯ ರ್‍ಹೈನಲಂಡವೆಂಬ ಪ್ರದೇಶವನ್ನು ಪಾದಾಕ್ರಾಂತ ಮಾಡಿದರು. ಜರ್ಮನಿಯಿಂದ ತಮಗೆ ಮುಂದೆ ಕೀಟ ಕೋಪದ್ರವವಾಗಬಾರದೆಂದು ಮನಗಂಡರೇ, ಅದನ್ನು ಮರಳಿ ಜರ್ಮನಿಗೆ ಒಪ್ಪಿಸತಕ್ಕವರೆಂದು ಭಾಷೆ ಕೊಟ್ಟರು. ಯುದ್ಧ ಮುಗಿದು ಹತ್ತು ವರ್ಷವಾಗುತ್ತಾ ಬಂತು. ಜರ್ಮನಿಯು ಪಕ್ಕ ಕತ್ತರಿಸಿ, ನಿಶ್ಶಸ್ತ್ರವಾಗಿ ಬಿದ್ದ ದೇಶವಾಗಿದೆ. ಇದರಿಂದ ಫ್ರಾನ್ಸಕ್ಕೆ ಯಾವ ಕೇಡೂ ಆಗುವಂತಿಲ್ಲ. ಇದರ ಮೇಲೆ ಯುದ್ಧ ಮಾಡಬಾರದೆಂದು, ಎಲ್ಲ ದೇಶಗಳು ಮೊನ್ನೆ ಮೊನ್ನೆ ಸಹೀ ಮಾಡಿವೆ. ಆದಕಾರಣ ತಮ್ಮ ರ್‍ಹಾಯಿನಲಂಡವನ್ನು ತಮಗೆ ತಿರುಗಿ ಕೊಡಬೇಕೆಂದು ಜರ್ಮನಿಯು ಎಷ್ಟು ಸರಿಯಾಗಿ ಕೇಳಿದರೂ ಫ್ರಾನ್ಸವು ಉದ್ಧಾಮತನದ ಉತ್ತರವನ್ನೇ ಕೊಡುತ್ತಲಿದೆ. ಜರ್ಮನಿಯನ್ನು ಮಾತ್ರ ನಿಃಶಸ್ತ್ರ ಮಾಡಿದಿರಿ. ಅದರಂತೆ ಬೇರೆ ದೇಶಗಳನ್ನೂ ಮಾಡಬೇಕು. ಜರ್ಮನಿಯು ನಿಃಶಸ್ತ್ರವಾದ್ದರಿಂದ, ಫ್ರಾನ್ಸದ ಉಚ್ಛೃಂಖಲತನ ನಡದಿದೆಂದು ಜರ್ಮನಿಯ ಮಂತ್ರಿಗಳು ನಿಟ್ಟುಸುರು ಹಾಕಿದ್ದಾರೆ.

ಕಾಬೂಲದಲ್ಲಿ ಕಾಜಿಗೆ ಬರಕತ್ತು

— ೦ —

ಅಮೀರ ಸಾಹೇಬರಲ್ಲಿ ಇನ್ನೂ ರಾಜ್ಯಾಧಿಕಾರವನ್ನೇ ತಮ್ಮ ಸ್ವಾಧೀನದಲ್ಲಿ ತಕ್ಕೊಂಡಿಲ್ಲ. ದೇಶ ಸುಧಾರಣೆಯ ಯೋಜನೆಯಲ್ಲಿಯೇ ತೊಡಗಿದ್ದಾರೆ. ಲಂಚ ಗೂಳಿತನವನ್ನು ಅಳಿಯಬೇಕೆಂದು ಸತತವಾದ ಪ್ರಯತ್ನ ನಡೆಸಿದ್ದಾರೆ. ಅನೇಕ ದೊಡ್ಡ ದೊಡ್ಡ ಆಮಲದಾರರು ಬಂತಕ್ಕನ ಹುಳುವನ್ನು ಹಡಕೊಂಡು ನುಸಿಯ ದಾರಿ ಹಿಡಿದರು. ಇವರಲ್ಲಿ ಕಾಬೂಲಿನ ದೊಡ್ಡ ಕಾಜಿಯವರೂ ಒಬ್ಬರಾಗಿದ್ದಾರೆ.

ನೆಹರು ಕಮಿಟಿಯ ರಿಪೋರ್ಟು ತಮಗೆ ಆಗತ್ಯವಿಲ್ಲೆಂದು ಕೆಲ ಮುಸಲಮಾನರು ಹಳವಳಿ ಎಬ್ಬಿಸಿದ್ದಾರೆ.

ಬೆಳಗಾವಿಯಲ್ಲಿ ಪೋಲೀಸರ ಪ್ರಕರಣದ ವಿಚಾರಣೆಯು ಸೆಶನ್ನದಲ್ಲಿ ನಡೆದಿದೆ.

ಬೆಂಗಳೂರಿನ ಅನಾಹುತ

—(೦)—

ಮೂವರು ವಿದ್ಯಾರ್ಥಿಗಳ ಪತ್ತೆಯಿಲ್ಲ!

—(೦) —

ಒಂದು ಹೆಣವು ಕೆರೆಯಲ್ಲಿ ಹೊರಟಿತು.

—೦--

ಬೆಂಗಳೂರಿನ ಅನಾಹುತದ ಸುದ್ದಿಗಳು ಕಡಿಮೆಯಾಗಿಲ್ಲ. ಮೂರು ದಿವಸವಾಯಿತು. ಮೂವರು ವಿದ್ಯಾರ್ಥಿಗಳು ಅದೃಶ್ಯರಾಗಿದ್ದಾರೆ. ಅವರ ಗೊತ್ತೇ ಇಲ್ಲ; ಒಂದು ಹೆಣವು ಕೆರೆಯಲ್ಲಿ ಎದ್ದಿದೆ. ಮೈತುಂಬ ಘಾಯಗಳಿರುವವು.

ಪಟ್ಟಣದಲ್ಲಿ ಭದ್ರತೆಯನ್ನು ಕಾಯುವದಕ್ಕಾಗಿ ಡಾಕ್ಟರ ಅರಮೂಗಮ ಮೊದಲಿಯಾರರ ಚಿರಂಜೀವರಾದ ಮಿ. ಈಶ್ವರನ್ನರನ್ನು ಸ್ಪೇಶಲ ಪೋಲೀಸ ಸುಪರಿಂಟೆಂಡೆಂಟರಾಗಿ ನೇಮಿಸಿದ್ದಾರೆ.

ಇಂದಿನಿಂದ ಸರ ವಿಶ್ವೇಶ್ವರಯ್ಯನವರ ವಿಚಾರಣಾ ಕಮಿಟಿಯು ಕೂಡುವದು ವಾರದಲ್ಲಿ ಸೋಮವಾರ, ಮಂಗಳವಾರ, ಗುರುವಾರ ಮತ್ತು ಶುಕ್ರವಾರದಿವಸ ಕೂಡುವದು. ಸಾಕ್ಷಿ ತಕ್ಕೊಳ್ಳುವದು.

ನಾಗಪೂರ ಕಲಾಪಿಯ ಶ್ರೀ. ರಾಘವೇಂದ್ರರಾಯರ ಪಕ್ಷದವರು ಸಭೆ ಕೂಡಿ, ಪರ್ಮಾರ ಮಿ. ಕೇದಾರರನ್ನು ಎರಡನೆಯ ಮಂತ್ರಿಯನ್ನಾಗಿ ಆರಿಸಿದರು.

ಮದ್ರಾಸ ಸರಕಾರದವರು ನೀಲಗಿರಿಯಲ್ಲಿ ವಾನಗಲ್ಲಿನ ಗಾಜರಿಗೆ ಸೂರಾರು ಎಕರೆ ಭೂಮಿಯನ್ನು ಕೊಟ್ಟಿದ್ದಾರೆ. ಜೆಲೆಯು ಅಷ್ಟು ಕಷ್ಟೀ; ಅಂದ ಒಳಿತ ಇವರು ಸಾಯುವಷ್ಟ ಕಮೀಶನದ ಕೂಡ ಸಹಕಾರ ಮಾಡಿದರೇನು ಆಶ್ಚರ್ಯ?

ಲಖನೌದ ಸರ್ವ ಪಕ್ಷದ ರಾಜಕೀಯ ಸಭೆಗೆ ಹೋಗಿದ್ದ ಶ್ರೀ. ರಂಗನಾಥ ರಾಮಚಂದ್ರ ದಿವಾಕರರು ಕಾಶಿಯ ಹಿಂದೂ ವಿಶ್ವವಿದ್ಯಾಲಯದಲ್ಲಿ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯನ್ನು ಕುರಿತು ಉಪನ್ಯಾಸ ಮಾಡಿದರು.

ವಿರಜಿಯ ಪ್ರಜಾ ಪರಿಷತ್ತು ಮಿ. ರಾನಡೆ ಎಂಬ ವಕೀಲರ ಅಧ್ಯಕ್ಷತೆಯಲ್ಲಾಯಿತು. ಸಭೆಯ ಕೆಲಸವು ಟಿಳಕಿಯ ಸಮಾರಾಧನೆಯಂತೆ ಒಂದೇ ದಿವಸದಲ್ಲಿ ಮುಗಿಯಿತು.

ನಿಜಾಮ ರೇಲ್ವೆಯವರು ಪುನಃ ಸಂಪು ಮಾಡಿದ್ದಾರೆ.

ಹಿಂದುಸ್ಥಾನೀ ಸೇವಾದಲ.

-(೮)-

೧೯೨೮ ನೇ ಇಸವಿಯಿಂದ ನಡೆದ ಸ್ಪರ್ಧೆಗಳ
ನಿಬಂಧದ ಫಲಿತಾಂಶವು.

—೦—

“ಕರ್ನಾಟಕ ಏಕೀಕರಣ” ಈ ವಿಷಯದ ಮೇಲಿನ ಎಲ್ಲಕ್ಕೂ ಶ್ರೇಷ್ಠವಾದ ನಿಬಂಧಕ್ಕೆ ಪಾರಿತೋಷಕವನ್ನು ಕೊಡುವದಕ್ಕೋಸ್ಕರ ತೀರ್ಥಹಳ್ಳಿ (ಶಿವಮೊಗ್ಗ ಜಿ) ಯವರಾದ ಶ್ರೀ ಬಿ ನಾಗಪ್ಪ ಮತ್ತು ಶ್ರೀ. ಯು. ಮಂಜನಾಥಯ್ಯಾ ಇವರು ೫೦ ರೂಪಾಯಿಗಳನ್ನು ಕರ್ನಾಟಕ ದಲಕ್ಕೆ ಕೊಟ್ಟಿದ್ದರು. ಅದ್ದರಿಂದ ೧೯೨೮ ನೇ ಇಸ್ವಿಯ ಏಪ್ರಿಲ ತಿಂಗಳಲ್ಲಿ ಹೊಸಕೋಟೆ (ಮೈಸೂರ ಸಂಸ್ಥಾನದಲ್ಲಿ ನಡಿದ ಕರ್ನಾಟಕ ದಲದ ಸಭೆಯಲ್ಲಿ “ಕರ್ನಾಟಕ ಏಕೀಕರಣ” ಈ ವಿಷಯದ ಮೇಲೆ ಕರ್ನಾಟಕ ಪ್ರಾಂತದ ಎಲ್ಲ ಭಾಗಗಳ ಜನರು ನಿಬಂಧಗಳನ್ನು ಬರೆಯಬೇಕೆಂದೂ ಮತ್ತು ಅವುಗಳಲ್ಲಿ ಎಲ್ಲಕ್ಕೂ ಶ್ರೇಷ್ಠವಾದದ್ದಕ್ಕೆ ಮೇಲಿನ ಪಾರಿತೋಷಕವನ್ನು (೫೦) ರೂ. ಬಂಗಾರದ ಪದಕದ ರೂಪದಲ್ಲಿ ಕೊಡಬೇಕೆಂದೂ ಗೊತ್ತಾಯಿತು. ಈ ನಿಬಂಧಗಳನ್ನು ಸ್ವೀಕರಿಸುವ ಅವಧಿಯು ೧೯೨೮ ನೇ ಇಸ್ವಿಯ ಜೂನ ತಿಂಗಳ ೧೫ ನೇ ತಾರೀಖಿನ ವರೆಗೆ ಇದ್ದಿತ್ತು.

ಈ ವಿಷಯವು ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧವಾದ ಬಳಿಕ ಗೊತ್ತುಮಾಡಿದ ಅವಧಿಯಲ್ಲಿ ಕೇವಲ ನಾಲ್ಕೇ ನಿಬಂಧಗಳು ನಮ್ಮ ಕಡೆಗೆ ಬಂದವು ಮತ್ತು ಶ್ರೀಯುತರಾದ ಶ್ರೀನಿವಾಸರಾವ ಕೌಜಲಗಿ ಬೆಂಗಳೂರ ದಿವಾಕರ ಮತ್ತು ಕೆ. ಸಂಪಗ್ರಿರಾವ ಈ ಮಹನೀಯರುಗಳಿಂದ ಕೂಡಿದ ಪರೀಕ್ಷಕ ಮಂಡಲದಿಂದ ಪರೀಕ್ಷಿಸಲ್ಪಟ್ಟವು. ಈ ಪರೀಕ್ಷೆಯ ಪರಿಣಾಮವು ಸ್ವಲ್ಪ ದಿವಸಗಳ ಹಿಂದೆ ನಮ್ಮ ಕೈಸೇರಿತು. ಶ್ರೀ ಆರ್ ಬಿ ಕುಲಕರ್ಣಿ [illegible] ಬೆಳಗಾಂವ (“ಕನ್ನಡಿಗನ ಸರ್ವಸ್ವ” ಈ ಪುಸ್ತಕವನ್ನು ಬರೆದವರು) ಇವರು ಮೇಲಿನ ಪಾರಿತೋಷಕವನ್ನು ಪಡೆದಿದ್ದಾರೆ. ಇವರ ನಿಬಂಧವು ಮುಂದೆ ಕೂಡುವ ಕರ್ನಾಟಕ ದಲದ ಸಭೆಯ ಮುಂದೆ ಇಡಲ್ಪಟ್ಟು ಅದರ ಪ್ರಕಟನೆಯ ವಿಷಯವು ನಿರ್ಧರಿಸಲ್ಪಡುವದು. ಪಾರಿತೋಷಕವನ್ನು ಕೊಡುವ ವೇಳೆಯ ವಿಷಯವು ಹಿಂದಿನಿಂದ ಪ್ರಕಟಿಸಲ್ಪಡುವದು.

ನಾ. ಸು. ಹರ್ಡೀಕರ,
ಸೇವಾದಲ ಕಾರ್ಯದರ್ಶಿ.

ತಾ| ೯-೯-೧೯೨೮ ಹುಬ್ಬಳ್ಳಿ.

ನಕಲಿ ಮಾಲಿನ ಬಗ್ಗೆ ಎಚ್ಚರಿಕೆ.
ನಮ್ಮ ಉಂಚೀ ಪಟ್ಟಿ ಡಬಿಗಳೇ

ಹಿರಾ ಇಂಗು

ಅವಶ್ಯ ಬೇಕಾರಿ.

ಇದು ದಿನಾಲು ಮನೆಯಲ್ಲಿ ಉಪಯೋಗವಾದದ್ದು ಅಡಿಗೆಯು ಇದರಿಂದ ರುಚಿಕರ ಮತ್ತು ಸ್ವಾದಿಷ್ಟವಾಗುವದು ಎಂಬುದು ಎಲ್ಲರಿಗೂ ಖಾತ್ರಿಯಾಗಿರುವದು ನಾವು ನಮ್ಮ ಗುಮಾಸ್ತರನ್ನು ಕಾಬೂಲಕ್ಕೆ ಕಳಿಸಿ ಉಂಚೀ ಮಾಲನ್ನು ಕೊಳ್ಳುವ ಪದ್ಧತಿ ಇಟ್ಟುಕೊಂಡದ್ದರಿಂದ ನಮ್ಮ ಗಿರಾಕಿಗಳಿಗೆ ಬಹಳ ಸೋಯಿಸ್ಕರ ಬೆಲೆಯಿಂದ ಖಾತ್ರಿ ಮಾಲು ಸಿಗುವದು. ಈ ಇಂಗು ಬಜಾರ ಇಂಗಕ್ಕಿಂತಲೂ ಬಹಳ ತೀಕ್ಷ್ಣವಿದ್ದು ಸುವಾಸಿಕವಾಗಿರುವದರಿಂದ ನಮ್ಮ ಒಂದು ತೊಲಿ ಇಂಗು ಇತರ ಮೂರು ತೊಲಿ ಇಂಗಿಗಿಂತಲೂ ಮೇಲಾಗಿರುವದು. ಇದು ಔಷಧಿ ವಸ್ತುವಾಗಿರುವದರಿಂದ ಅಜೀರ್ಣ, ಜೀರ್ಣಜ್ವರ, ಹೊಟ್ಟೆಕುಟ್ಟು ಹಿಡಿಯೋಣ, ಮಲೇರಿಯಾ, ಕಾಲರಾ, ಇನ್ಫ್ಲುಯೆಂಝಾ, ಮುಂತಾದ ರೋಗಜಂತುಗಳ ಪ್ರತಿಬಂಧವಾಗಿರುವದು. ಉಪ್ಪಿನಕಾಯಿಯಲ್ಲಿ ಉಪಯೋಗಿಸಿದರೆ ಕ್ರಿಮಿಗಳಾಗುವ ಸಂಭವವಿಲ್ಲ. ಇದನ್ನು ಬೇಕಾದಷ್ಟು ಮುಚ್ಚಿಟ್ಟರೂ ವಾಸನೆಯು ಹಾರದೆ ಇರುವದು. ಇದನ್ನು ಸಂಗ್ರಹಿಸುವದು ಯೋಗ್ಯವದೆ

ಅರ್ಧಾ ಔಂಸಿನ ಕಿರಕೋಳ ವಿಕ್ರೀಗೆ ಸೋಯಿಸ್ಕರ ಗ್ಲಾಸ್ ಡಬ್ಬಿಗಳು.

ಇರಾಣಿ ಪ್ಯೂರ್ ಇಂಗು.

ವಜನ ಒಂದಕ್ಕೆ ನಾಲ್ಕು ರೂಪಾಯಿ.

ಡಬ್ಬಿಯು ಒಂದು ಪೌಂಡಕ್ಕಿಂತಲೂ ಕಡಿಮೆ ಜಾಸ್ತಿ ಕೊಡಲಾಗುವದಿಲ್ಲ. ಎಲ್ಲರಿಗೂ ಪ್ಯಾಕಿಂಗ ಪೋಸ್ಟೇಜ ಮಾಫ. ಜಾಸ್ತಿ ಮಾಲು ಬೇಡಿಕೊಳ್ಳುವವರು ಪತ್ರವ್ಯವಹಾರ ಮಾಡಬೇಕು. ವ್ಯಾಪಾರಸ್ಥರಿಗೆ ಬೋರ್ಡರ ಫ್ರೀಟ ಸಿಗುವದು.

ಪತ್ತೆ— ಮೆಸರ್ಸ ಕ. ಬಗೋಡ ಬ್ರದರ್ಸ ಕಾಬೂಲವಾಲೆ

---

೧೦೦ ಕ್ಕೆ ಒಂದು ವರ್ಷಕ್ಕೆ ಒಂದು ರೂಪಾಯಿ ಬಡ್ಡಿ ದರ.

ದಿ ಪಿಪಲ್ಸ ಓನ ಪ್ರಾವಿಡೆಂಟ ಅ್ಯಂಡ ಜನರಲ ಇನ್ಸುಅರನ್ಸ
ಕಂಪನಿ, ಲಿಮಿಟೆಡ ಪುಣೆ.

(Life) ಜೀವವಿಮಾ- ಪ್ರೀಮಿಯಮ ದರ ತಿಂಗಳಿಗೆ ೨ ರೂ, ೧ ರೂ, ಮತ್ತು ೮ ಆಣೆ. ೧೦ ವರ್ಷಗಳ ಮೇಲೆ ಬೋನಸ ಮತ್ತು ಲಾಭ ಸಹಿತ ರಕಮು ಸಿಗುವದು.

Marriage ಲಗ್ನಶಾಖೆ- ದರ ತಿಂಗಳಿಗೆ ೨ ರೂಪಾಯಿಯಂತೆ ಪ್ರೀಮಿಯಮ ಕೊಡಬೇಕಾಗುವದು. ಲಗ್ನದ ವೇಳೆಗೆ ರೂಪಾಯಿ ಕೊಡಲಾಗುವದು.

(Loan) ಸಾಲದಶಾಖೆ- ೧೦೦ ಕ್ಕೆ ವರ್ಷಕ್ಕೆ ಒಂದೇ ರೂಪಾಯಿ ಬಡ್ಡಿ ದರದ ಮೇಲೆ ೫೦ ರಿಂದ ೫೦೦೦ ರೂಪಾಯಿಗಳ ವರೆಗೆ ಜಾಮೀನು ಇಲ್ಲದೆ ಸಾಲ ದೊರೆಯುವದು.

ಧಾರವಾಡ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ.
ಉತ್ಸಾಹೀ ಜನರಿಗೆ ಯೋಗ್ಯ ಕಮಿಶನ ದೊರೆಯುವದು.

ಪತ್ತೆ— ಡಾ| ಸಾಹುಕಾರ ವ್ಹಿ. ಬಿ (ಹೋಮಿಯೋ) ಎನ್ ಬಿ.
ಹಿರೇಕೆರೂರ ಜಿ| ಧಾರವಾಡ.

ನೋಟೀಸಿನ ದರಗಳು.

—೦—

ತಿಂಗಳ ಕಾಲಮಿನ ಹತ್ತು ಸಾಲುಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದು ಆಣೆ ಇಂಗ್ಲಿಷ ಸಾಲೊಂದು ಒಳಗೆ ಐದು ಆಣೆ. ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ದೇವಸ್ಥಾನ ಮುಂತಾದ ಸಾರ್ವಜನಿಕ ನೋಟೀಸುಗಳು ಸಾ. ೧ ಗೆ ಮೂರು ಆಣೆ— ಇಂಗ್ಲಿಷದಿಂದ ತಿದ್ದುಪಡಿ ಕನ್ನಡದಲ್ಲಿ ಹಾಕುವದಿದ್ದರೆ [illegible] ಒಳಗಿನ ಜಾಹೀರಾತುಗಳನ್ನು ಕೊಡುವವರು [illegible] ಪತ್ರವ್ಯವಹಾರ ಮಾಡಬೇಕು

ಚಂದಾದಾರರಿಗೆ ಸೂಚನೆ

—೦—

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಸುವೆನು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 1443

ನಿತ್ಯ ಪತ್ರ ಬಿಡಿ ಪ್ರತಿಗೆ ಅಣೆ

ಸಂಪಾದಕರು:— [illegible]

ವರ್ಷ ೪) ಧಾರವಾಡ ಶುಕ್ರವಾರ ತಾರೀಖು ೧೪ ನೇ ಸಪ್ಟಂಬರ ೧೯೩೪ (ಸಂಚಿಕೆ ೨೦೮

ದಿ ಭಾಗ್ಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ.

[illegible] ಮಂಗಳವಾರಪೇಟೆ, ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ಠೇವಣಿಗಳ ಮೇಲೆ ಸೋಯಿ ದರದಿಂದ [illegible] ಪಡೆಯಬೇಕಾದಷ್ಟು ದೊಡ್ಡ ರಕಮಿನ ಕರ್ಜ ಸಾಲ ದೊರೆಯುವದು. ಬಡ್ಡಿಯ ದರ [illegible] ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮೀಶನ ತಕ್ಕೊಂಡು [illegible] ಲಾಭಕರವಾಗಿ ಅವುಗಳ ಬಡ್ಡಿ ವಸೂಲಿ ಮಾಡಿ ಕೊಡಲ್ಪಡುವದು.

೩ [illegible] ಮಾಡಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ಠೇವಣಿ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು [illegible] ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರ್ಕೆಟ್ಟಿಗೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ [illegible] ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ [illegible] ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ
ಮ್ಯಾನೇಜಿಂಗ ಏಜಂಟ.

—ಃ ಶ್ರೀ ಗುರು ಪ್ರಸನ್ನ ಃ—

ಪ್ರತಿಯೊಬ್ಬ ಕುಟುಂಬಿಕನು ಅವಶ್ಯ ಸಂಗ್ರಹದಲ್ಲಿಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ.

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ನಾಲ್ಕು ತರದ ವ್ಯಾಯುರೋಗಗಳು ಕ್ಷಣಕಾಲದಲ್ಲಿಯೇ ನಾಶಹೊಂದುವವು. ಅಜೀರ್ಣ ಅಪಚನ, ಆಮಾಂಶ, ಅಗ್ನಿಮಾಂದ್ಯ, [illegible], ಹೊಟ್ಟೆಶೂಲಿ, ಹೊಟ್ಟೆನೋವು ಮತ್ತು ಯಾವತ್ತು ತರದ ಧಾತುವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮಟಿಗಿಂತ ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ ಸಾಕು ಪುನಃ ಅರ್ಧತಾಸಿನಲ್ಲಿಯೇ ಹಸಿವೆ [illegible]. ಬೇರೆಯೊಂದ [illegible] ಶಕ್ತಿವರ್ಧಕ ಔಷಧ ತೆಗೆದುಕೊಳ್ಳುವ ಕಾರಣವೇ ಇಲ್ಲ. ಹಳ್ಳಿಗಳಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು ತಮ್ಮ ಹತ್ತರ ಇಟ್ಟುಕೊಂಡರೆ ಸಾಕು ಯಾವತ್ತೂ ಬೇನೆಗಳಿಗೆ ಉಪಯೋಗವಾಗುವದು. ಎಷ್ಟು ದಿವಸದ [illegible] ಮೂರೇ ದಿವಸಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದ ಈ ಸಿದ್ಧೌಷಧವನ್ನು ಪ್ರತಿಬ್ಬನೂ ಅವಶ್ಯ ಸಂಗ್ರಹದಲ್ಲಿಡತಕ್ಕದ್ದು. ಒಂದು ಡಬ್ಬಿಯ ಕಿಮ್ಮತ್ತು ೧೦ ಆ. [illegible] ಒಂದು [illegible]. ಪೋಸ್ಟೇಜ ಬೇರೆ ಸ್ಥಾ. ಪ. ೧ ಅಣೆ.

[illegible] ಬಿ. ಜಿ. ಟೇಲರ [illegible] ಮಾರ್ಕೆಟರೋಡ, ಧಾರವಾಡ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

[illegible] ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

[illegible] ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

[illegible] ಲಕ್ಷದ ಮೇಲಿರುತ್ತದೆ. [illegible] ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ಕಾರ್ಯಾಲಯ ಮತ್ತು ಬೇರೆ [illegible] ಪಟ್ಟಣಗಳಿಗೆ [illegible].

[illegible] ಕೆಳಗೆ ಸಹಿ ಮಾಡಿದವರಿಂದ [illegible] ತಿಳಕೊಳ್ಳಬೇಕು.

ಮಧ್ವರಾವ ಬಿ. [illegible],
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

[illegible] ಬ್ಯಾಂಕಿನಲ್ಲಿ ಮಾಡಿದ, [illegible] ಕಿಂಗ ಪದ್ಧತಿ [illegible] ಹಣವನ್ನು [illegible] ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ಠೇವಣಿಗಳನ್ನು [illegible] ಕೊಡುವ ಬಡ್ಡಿಯ ದರವು ಸೋಸೈಟಿಗಳಿಗೆ ಸಸ್ತೆಯಾಗಿ ಆಗಿಯುತ್ತದೆ.

ಎ. ಕೆ. [illegible]
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀದರ.

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ.
೬ „	೭—೦—೦
೪ „	೪—೦—೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩—೧೨—೦

ವಿಶೇಷ ಸೂಚನೆ ಕೆಳಗಿನ ವಿಳಾಸಕ್ಕೆ

ವಿಜಯ.

ಧಾರವಾಡ ತಾ- ೧೪-೯-೩೮ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಪತಿಗೆ |
ನೀ ವಸುಧಾಪತಿಯ ನರಪತಿ ಸಹಿತ ರಿಪುಗಳಿಂ ||
ದೀ "ವಿಜಯಂ" ಶ್ರೀಕರದಿಂ |
ನಾ ವಿಹಿತಂಗಳ ಪಾವನಿಸಿನಲಿಪ್ಪುದು ಸಾಜಂ ||೧||

ರಶಿಯಾದಲ್ಲಿ ಯುದ್ಧದ ಅದ್ಭುತ ಸಿದ್ಧತೆ

ರಶಿಯಾ ರಾಷ್ಟ್ರವು ಅನೇಕರಿಗೆ ಕೆಲವು ಸಾರೇಬರ ದುರ್ಗ ನಿಲ್ಲಿಸುವ ಪರಸ್ಪರ ಒಪ್ಪಂದದ ಕಾಗದದ ಮೇಲೆ ಸಹೀ ಮಾಡಿದರೂ, ಒಳಗಿಂದೊಳಗೆ ಭಾವೀ ಯುದ್ಧದ ದಸೆಯಿಂದ ಅಪೂರ್ವ ಮತ್ತು ಅದ್ಭುತ ಸಿದ್ಧತೆ ನಡೆಸಿವೆಂದು ಇಂಗ್ರೇಜಿ ಲೇಖಕರು ಹೇಳುತ್ತಾರೆ. ರಶಿಯಾದ ಈಗಿನ ರಾಜ್ಯಕರ್ತರು ರಘುವಂಶಾಧಿಪ ನಿರ್ಮೂಲ ಮಾಡಿ ಝಾರನ ಸಂಸ್ಥಾನದ ನಿರ್ಮಾಣ ಮಾಡಿದರಷ್ಟೇ; ಅದೇ ಪ್ರಕಾರ ಜಗತ್ತಿನ ತುಂಬ ರಾಜಸಂಸ್ಥಾನಗಳನ್ನು ಮಾತ್ರವಲ್ಲ; ರಾಜರಂತೆ ಶ್ರೀಮಂತರಾಗಿರುವ ಬಂಡವಲಗಾರರನ್ನೂ ಮುರಿದು, ಜಗತ್ತಿನ ತುಂಬ ಕೂಲಿಕಾರರ ಸಾಮ್ರಾಜ್ಯವನ್ನೇ ಸ್ಥಾಪಿಸಬೇಕೆಂದಿದ್ದಾರೆ. ರಶಿಯನ್ನು ಸಿವಿತ್ಯ ಮಾತ್ರಕ್ಕೆ ಆಂಗ್ಲಸಾರೇಬರ ಶಾಂತತಾ ಪ್ರತಿಷ್ಠಾಪನೆಯ ಪತ್ರದ ಮೇಲೆ ಸಹೀ ಮಾಡಿದ್ದರೇನೋ ನಿಜ. ಆದರೆ ಅವರು ಜಗತ್ತಿನ ತುಂಬ ಕ್ರಾಂತಿಯನ್ನು ಮಾಡಿಸಿ, ಬಂಡವಾಳಗಾರರನ್ನು ಬುಡಮೇಲು ಮಾಡುವ ಕಪಟ ಕಾರಸ್ಥಾನವನ್ನು ಯಥಾಪ್ರಕಾರ ನಡೆಸಿದ್ದಾರೆಂದು ಇಂಗ್ಲಿಷರ ಹಿಂದಿನ ಮಂತ್ರಿಯಾದ ಚೇಂಬರಲೇನ ಹಿಕ್ಸ ಎಂಬವರು ಉಸುರಿದ್ದಾರೆ.

ತಮ್ಮ ಬೋಲ್ಶೆವಿಕ ತತ್ವವು ಬಂಡವಲಗಾರರ ಮಾಲಿನಷ್ಟೇ ಕಡಿದು ಹಾಕುವಂಥದ್ದಾಗಿದ್ದದರಿಂದ, ತಮ್ಮ ತತ್ವ ಪ್ರಸಾರ ಮತ್ತು ರಕ್ಷಣೆಗೆ ತಾವೇ ಸಮರ್ಥರು, ಸ್ವಾವಲಂಬಿಗಳೂ ಆಗಬೇಕೆಂದು ರಶಿಯಾ ಮುಂದಾಗಿ ನಿಶ್ಚಯಿಸಿ ಮಾಡಿಕೊಂಡು, ರಶಿಯನ ರಾಜ್ಯದಂದದೇ ಸೈನ್ಯದ ಒಂದು ವಿಸ್ತೃತವಾದ ಘಟನೆಯಾಗಿ ಮಾರ್ಪಡಗಿದ್ದಾರೆ. ಈ ಕೆಲಸದಲ್ಲಿ ಬಹುಮಟ್ಟಿಗೆ ಪೂರ್ಣ ಸಫಲ ಹೊಂದಿದ್ದಾರೆಂದರೂ ತಪ್ಪಲ್ಲ. ತಂದೆತಾಯಿಗಳು ಮಕ್ಕಳನ್ನು ಹೆರುವುದೊಂದೇ ಕರ್ತವ್ಯ. ಅವುಗಳ ಪೋಷಣ, ಶಿಕ್ಷಣ ಸಂರಕ್ಷಣೆ ಇವು ದೊಡ್ಡವಾದ ಬಳಿಕ, ತಕ್ಕೊಳ್ಳುವ ಎಲ್ಲ ಜವಾಬದಾರಿಯನ್ನು ಸರಕಾರದವರೇ ಅಂಗೀಕರಿಸುವರು. ವ್ಯಾಸರು ಪರೀಕ್ಷಿತ ರಾಜನಿಗೆ ಗರ್ಭದಲ್ಲಿಯೇ ಮಾಡಿದಂಥ ಉಪದೇಶವೇ ಸೈ. ಜೀವನದ ಮಟ್ಟಿಗೆ ಕಲಿಸುವ ವಿವಿಧ ಕಲೆಗಳಂತಲ್ಲ; ಸೈನ್ಯ ಶಿಕ್ಷಣವನ್ನು ಬಹು ಲಿಂಗಭೇದವಿಲ್ಲದೆ, ಸ್ತ್ರೀ ಪುರುಷರಿಗೆ ಸರಿಯಾಗಿ ಕೊಡುತ್ತಿದ್ದಾರೆ. ಮುಂದಿನ ಯುದ್ಧದಲ್ಲಿ ರಶಿಯಾದ ಸ್ತ್ರೀಯರು ಬಾಂಬು ಹಾಕುವರು, ಮಶಿನ್‌ಗನ್ನು ಹಾರಿಸುವರು, ಕತಿಯನ್ನು ತಿರುವುತ್ತಾ ವೈರಿಗಳ ಕೂಡ ಹೋರಾಡುವವನ್ನು ನಮಗೆ ನೋಡಬಹುದಾಗಿದೆ.

ಯುದ್ಧ ಹತ್ತಿದಾಗ ಗೋಟಿಕ್ಕೆ ಹೋಗು ಹಾಕಿದ ಶತ್ರು ಶಹರಗಳನ್ನು ಮಸಿಮಾಡಬೇಕೆಂಬ ಆಜ್ಞೆಗಳ ಮತ್ತು ಸೇನಾಮಾರ್ಗದಿಂದ ರಶಿಯಾದ ವಸ್ತು ಕೂಡಿಲ್ಲ. "ಹೊಸ ಯುದ್ಧವು ತೀಗ ಪ್ರಾರಂಭಿಸಿದೆ. ಅದು ದಿನ ದಿನಕ್ಕೆ ಸಮೀಪಿಸುತ್ತಿರುವದು. ನಾವು ಆ ಮಹಾಯುದ್ಧದ ಹೊಸ್ತಿಲದ ಮೇಲೆ ನಿಂತಿದ್ದೇವೆ" ಎಂಬುದಾಗಿ ಇಜವೆಸ್ತಿಯಾ ಎಂಬ ಪ್ರಸಿದ್ಧ ಮಾಸಿಕ ಪತ್ರಿಕೆಯು ಸಾರುತ್ತದೆ. ಈ ಯುದ್ಧವು ಯಾವಾಗ ಒದಗುವದೆಂಬ ನಿಶ್ಚಿತಿಗೆ ಇಲ್ಲದ್ದರಿಂದ, ಸ್ತ್ರೀ ಪುರುಷರಿಗೂ ದಿನ ಶಿಕ್ಷಣ ಕೊಡುವ ಶಾಲೆ-ಕಾಲೇಜು ಮತ್ತು ಆದೇ ವಿಶಾಲದ ಹಾರವಿಮಾನದ ಮಾಸು ಸಂಘ ಕ್ಲಬ್ಬಗಳನ್ನು ತೆಗೆದಿದ್ದಾರೆ. ಕ್ಲಬ್ಬಗಳಲ್ಲಿ ಹೋಂಬರಾದಂಥವರ ಸಂಖ್ಯೆಯು ಒಂದೇ ತಿಂಗಳಲ್ಲಿ ಮೂವತ್ತು ಲಕ್ಷವಾಗಿದೆ. ಆಧುನಿಕ ಯುದ್ಧದ ಪ್ರತ್ಯಕ್ಷ ಜ್ಞಾನವಾಗಬೇಕೆಂದು ಚಿತ್ರಗಳನ್ನೂ ಪರಿಷತ್ತುಗಳನ್ನೂ ಕೂಡಿಸಿ, ಹುಸಿಗಾಳಗವಾಡಿಸುವರು.

ಇಂಗ್ಲಂಡ- ಫ್ರಾನ್ಸ- ಅಮೇರಿಕೆ ಮೊದಲಾದ ದೇಶಗಳು ಭಾವೀ ಯುದ್ಧವು ಭೂಬಲಗಳಲ್ಲಾಗದೆ, ಆಕಾಶದಲ್ಲಿ ವಿಮಾನಗಳಲ್ಲಾಗಿ, ಅವುಗಳ ಹಾನಿ ನಷ್ಟಗಳಿಂದ ಜಯಾಪಜಯ ಗೊತ್ತಾಗುವದೆಂದು ನಂಬಿಗೆಯುಳ್ಳವರಾಗಿ, ತಂತಮ್ಮ ದೇಶಗಳಲ್ಲಿ ವಿಮಾನಗಳ ಸಂಖ್ಯೆಯನ್ನು ಬೆಳೆಸುತ್ತಿವೆ. ರಶಿಯೆಗೆ ಮುಸಕ್ಕರ ನಾಲ್ಕೈದು ವೇಲು ವಿಮಾನೋಡ್ಡಾಣ ಮಾಡುವಂಥವ ಹುಡುಗರು ಸಿದ್ಧರಾಗಿವೆ. ರಶಿಯಾ ವಿಮಾನಗಳಲ್ಲಿ ಅಷ್ಟು ವಿಶ್ವಾಸವುಳ್ಳವರಾಗಿಲ್ಲ. ಒಂದು ತರದ ವಿಷವಾಯುವಿನಲ್ಲಿ ಭರವಸೆಯುಳ್ಳವರಾಗಿದ್ದಾರೆ. ಜರ್ಮನರು ಇಂಥದೊಂದು ವಿಷವಾಯುವನ್ನು ಯುದ್ಧಾರಂಭದಲ್ಲಿ ಹುಟ್ಟಿಸಿ, ವೈರಿಗಳ ಪ್ರಾಣಹಾನಿ ಮಾಡಿಕೊಂಡರು. ಕಡೆಗೆ ಇದಕ್ಕೆ ವಿರೋಧಕ್ಕಾಗಿ ಪ್ರತ್ಯಸ್ತ್ರ ಮಾಡಲು ಜರ್ಮನಿಯು ಟ ನಿಂತಿತು. ಆದರೆ [illegible] ಮಾಡಿದ ವಿಷವಾಯುವಿನ ಮೇಲೆ ಪರಿಣಾಮ [illegible] ದಿಂದ ಇವರು ನಿಸರ್ಗದ [illegible] ಮಾಡಿರುವ ಕಾರ್ಯ [illegible] ಹೋಗುತ್ತಿರುವರು. ಈ ಪ್ರಕಾರ ರಶಿಯಾ ರಾಜ್ಯದ ತುಂಬ ನಡೆದ ಯುದ್ಧದ [illegible] ನೋಡಿದರೆ [illegible] ಇಲ್ಲವಾಗುವದು ಆಶ್ಚರ್ಯವೇನು?

[illegible] ಗದಿಂದ ಕರ್ಣಾಟಕ [illegible] ಪರಿಷದಂಗದಲ್ಲಿ ||

ಗಡಿನಾಡಿನ ಕನ್ನಡಿಗರು

[illegible]

[illegible] ರಿಪ್ಪನ್‌ನಿಂದ [illegible] ಗುಬ್ಬಿಯು [illegible] ಸಂತತಿಗಳಿಂದ [illegible] ಕಾಲಗತಿ [illegible] ಶಾಸನಗಳ [illegible] ದೆ. [illegible] ಶ್ರೀಮಂತರು [illegible] ಮುಂದೂ ಬೇಕಾಗಿತ್ತು [illegible] ಸಂಬಂಧವು [illegible] ಲುಗಳ ಅಂತರ [illegible] ಶ್ರೀಮಂತರನ್ನು ಆದರಿಸ [illegible] ವಿಶ್ವಾಸಯುಕ್ತ ಶ್ರೀಮಂತರಿಲ್ಲ; [illegible] ಯೊಂದ ಶ್ರೀಮಂತರು ಪಿತ್ರಾರ್ಜಿತದಿಂದ ಸಂಬಂಧ ಹೊಂದಿರುವ [illegible] ಸೇವೆಗಾಗಿ ಮಾಡುವ ದೇಶ ಭಾವನೆಯುಳ್ಳವರಾಗುವದು [illegible] ಯೋಗ್ಯವೇ ಸರಿ. ಇದರಿಂದ [illegible] ಶ್ರೀಮಂತರು ಗ್ರಾಮದ ಎಲ್ಲ [illegible] ವಾದ ಸಮಾಜಗಳಿಗೆ ಅನೇಕ ತರಹಳ್ಳಿಯ [illegible] ದೊರೆಯುವಂತಾಯಿತು. ಇನ್ನು ಸಿದ್ಧವಾದ [illegible] ಗಳನ್ನು ಶ್ರೀಮಂತರ ಬೆಂಬಲದಲ್ಲಿ ಸಭೆ ಮಾಡಬೇಕೆನ್ನುವರು. ಸಭೆ ಮಾಡಿದರೂ [illegible] ಸ್ವಾಭಾವಿಕವಾಗಿ ನೈಜರು ಸ್ವಂತ [illegible] ಸಭೆ ಮಾಡಿ, ಹೊರ [illegible] ಶ್ರೀ [illegible] ಅಧ್ಯಕ್ಷರನ್ನಾಗಿ ಮಾಡುವಂತೆ [illegible] ಸಿದ್ಧ [illegible] ನ್ನು ತಂದು ನೈಜರಿಗೆ [illegible]

ಹ್ಯಾನಟೆಸಿಯಿಂದ ತಮ್ಮ ರಾಜಧಾನಿಯೊಳಗೆ ಸಭೆ ಮಾಡುವಂತೆಯೂ, ಸಂಸ್ಥಾನದ ಪ್ರಜರೇ ಅದರ ಧನು ಅಧ್ಯಕ್ಷರಾಗಬೇಕೆಂದೂ ನಿಬಂಧನೆ ಹಾಕಿ ಅಪ್ಪಣೆ ಕೊಟ್ಟರು. ಇದರಲ್ಲಿ ತಕರಾರು ತೀರಿಯು ಸಂಪೂರ್ಣವಾಗಿತ್ತು. ಸಂಸ್ಥಾನದವರೇ ಆದಲ್ಲಿ, ತಮ್ಮ ವಿರುದ್ಧ ಟೀಕೆ ಮಾಡಲಾರರೆಂಬುದು!! ಮಹಾರಾಜರ ಚಾಣಕ್ಯ ನೀತಿ ನೋಡಿರಿ! ಕೇರಳದ [illegible] ಶ್ರೀ. ಜನಾರ್ದನ ಸಂ[illegible] ಅಧ್ಯಕ್ಷರಾಗಬೇಕೆನ್ನಲು— ಸಂಸ್ಥಾನಿಕ [illegible] ಇವರು ಅಧ್ಯಕ್ಷರಾಗ[illegible] ಸಭೆಯ ದಿವಸವು ಸಮೀಪಿಸ್ತ[illegible], ಪ್ರಜರು ನಾಲ್ಕು ಹೆಸರುಗಳನ್ನು ಸೂಚಿಸಿ ಇವರಲ್ಲಿ ಒಬ್ಬರನ್ನು ನೀವೇ ಆರಿಸಿರಿ, ದಿವಾನಜಿಯವರನ್ನು ಅವರ ಮೇಲೆ [illegible] ತಮ್ಮ ಮಂತ್ರಿ ತಮಗೇ ತಿರುಗಿಬಿದ್ದನ್ನು ಕಂಡು ಶ್ರೀ [illegible] ಎಂಬ ವಕೀಲರು ಅಧ್ಯಕ್ಷರಾಗಬೇಕೆಂದರು. ಇವರು ಅಧ್ಯಕ್ಷರಾದರು. ಸಭೆಯ ಕೆಲಸ ಕಳೆದ ಆವೇಶದ ಪ್ರಾರಂಭವಾಯಿತು. ಕೂಡಲೆ ಅಧಿಕಾರಿಗಳು ತಂತ್ರ ಕಾರ್ಯರಂಗೆ ನಡೆಸಿದರು. ಸಭೆಯಲ್ಲಿ ಸಂಸ್ಥಾನದ ಹೊರಗಿನ ಗೃಹಸ್ಥರು ಭಾಷಣ ಕೂಡದೆಂದು ಬಗೆಳ ತೆಗೆದರು — [illegible] ಶ್ರೀಮಂತರ ತನಕ ಹೋಗಿ ಅಪ್ಪಣೆ ಪಡೆದುಕೊಂಡು ಬರಬೇಕಾಯಿತು. ಸಂಸ್ಥಾನದ ಪ್ರಜರಿಗೆ ಬ್ರಿಟಿಶ ಪ್ರಜರಿಗಿರುವಂಥ ಯಾವ ಹಕ್ಕು ಸ್ವಾತಂತ್ರ್ಯವಿರುವದೇ ಇಲ್ಲ. ಮಿರಜೆಯಂಥ ರಾಜಧಾನಿಯ ಮ್ಯುನಿಸಿಪಾಲಿಟಿಯಲ್ಲಿ ಲೋಕನಿಯುಕ್ತ ಮೆಂಬರರಿರುವದಿಲ್ಲ. ಇಷ್ಟರಿಂದ ನೋಡಲು ಸಂಸ್ಥಾನದ ಪ್ರಜರು ಕೇವಲ ಗುಲಾಮಗಿರಿಯನ್ನು ಅನುಭವಿಸುತ್ತಾರೆಂದು ಕಂಡು ಬರುವದು. ತಮಗೆ ಬ್ರಿಟಿಶ ರಾಜ್ಯದಲ್ಲಿರುವಂಥ ಪ್ರಜಾ ಸ್ವಾತಂತ್ರ್ಯವಿರಬೇಕೆಂದೂ, ಸಂಸ್ಥಾನದ ಪ್ರಜರಾಗುವದಕ್ಕಿಂತ ಬ್ರಿಟಿಶ ಪ್ರಜರಾಗುವದು ಲೇಸೆಂದೂ ಇವರಿಗೆ ಅನಿಸುವದು ಸಹಜವಾಗುತ್ತದೆ.

ಕಾಬೂಲದ ರಾಷ್ಟ್ರೀಯ ನಿಶಾನೆ.

—೦—

ಕಾಬೂಲ ರಾಜ್ಯದ ನಿಶಾನೆಯು ಹೊಸ ಮಾದರಿಯದಾಗುವದು. ನಿಶಾನೆಯ ಬಣ್ಣವು ಕೆಂಪು, ಹಸಿರು ಮತ್ತು ಕರಿಯದಾಗುವದು. ಪರ್ವತಶ್ರೇಣಿ ಅದರ ಮೇಲೆ ಉದಯಿಸುವ [illegible] ಗೋಧಿಯ ತೆನೆಯು [illegible] ನಿಶಾನೆಯಲ್ಲಿ ತೋರಿಸಿ, ಕಾಬೂಲವು ಒಕ್ಕಲತನದ ದೇಶವೆಂದು ಜಗತ್ತಿಗೆ ಗುರ್ತು ಕೊಡುವರು. ಅಲ್ಲಲ್ಲಿ ಧರ್ಮವೇ [illegible] ಪಕ್ಷದ ನುಡಿಗಳನ್ನು ಬರೆಯುವರು.

ಮನುಷ್ಯನ ಜನನ ಮರಣದ ಹೊಸ ಶೋಧ.

—(೦)—

ಲಂಡನದ ಪ್ರೊಫೇಸರ ಹಿಲ್ಲರೆಂಬ ಸಾಹೇಬರು ಮನುಷ್ಯನ ಜನನ ಮರಣದ ಹೊಸ ಶೋಧನಮಾಡಿದ್ದಾರೆ. ಇವರು ಮನುಷ್ಯಾಕೃತಿಯ ಒಂದು ಯಂತ್ರ ಮಾಡಿದ್ದಾರೆ. ಇದರಲ್ಲಿ ಅನ್ನಕೋಶ, ಜಲಕೋಶ, ನರ, ಕರುಳ, ಎಲುಬು ಮಿದುಳು ರಕ್ತಾಭಿಸರಣದ ಎಲ್ಲ ವ್ಯವಸ್ಥೆ ಮಾಡಿದ್ದು, ಇದರಲ್ಲಿ ಉಸಿರನ್ನು ಹಾಕಿದಂತೆ ದೇಹ ಚಲನವಾಗುವದು. ಉಸಿರು ನಿಂತ ಕೂಡಲೆ ದೇಹ ಮೃತಾವಸ್ಥೆ ಹೊಂದುತ್ತದೆಂಬುದನ್ನು ತೋರಿಸಿದ್ದಾರೆ. ಇದರ ಶಾಸ್ತ್ರೀಯ ಪ್ರಯೋಗವನ್ನು ಸಾರ್ವಜನಿಕವಾಗಿ ಬೇಗನೆ ಮಾಡಿ ತೋರಿಸುವರು.

ವಿಜಾಪೂರದ ನಾಜರ ಕಚೇರಿಯಲ್ಲಿ ಕಳವು

—(೦)—

ವಿಜಾಪೂರದ ನಾಜರ ಕಚೇರಿಯಲ್ಲಿ ಕಳ್ಳರು ಕುಶಲತನದಿಂದ ಕಳವು ಮಾಡಿದ್ದಾರೆ. ಕಚೇರಿಯ ಬಾಗಿಲು ಅದರ ಕೀಲಿ ಯಥಾ ಪ್ರಕಾರ ಇರುವವು. ಒಡಗೆ ನಿಲ್ಲಿಸಿದ ಕಬ್ಬಿಣದ ಗಜಗಳನ್ನು ಸಡಿಲಿಸಿ, ಒಳಗೆ ತಲೆ ಮತ್ತು ಕೈಗಳು ಹೋಗುವಂತೆ ಮಾಡಿ, ಪೆಟ್ಟಿಗೆಯ ಹಿಂದಿನ [illegible]ಗಳನ್ನು ತೆಗೆದು ಬಾಯಿಯನ್ನು ಹಾರ ಹೊಡೆದು, ಒಳಗಿನ ಮೂರು ಸಾವಿರದ ಆಸ್ತಿಯನ್ನು ಹೊರಗೆ ತೆಗೆದು, ಮೆಲ್ಲಗೆ ತಲೆ ಮತ್ತು ಕೈಗಳನ್ನು ಹೊರಗೆ ತಕ್ಕೊಂಡು, ಗಂಟು ಬಗಲಿಗೆ ಹಾಕಿ, ಗೇಸ್ಟ ಮೇಳಿಸಿದ್ದಾರೆ.

ಸಾಯಮನ್ನ ಕಮೀಶನದ ಮಾಟ!!

—೦—

ಕೌನ್ಸಿಲ ಆಫ್ ಸ್ಟೇಟ ಮತ್ತು ಅಸೆಂಬ್ಲಿಯವರು ಬೇರೆ ಏಳು ಜನ ಮೆಂಬರರನ್ನು ಆರಿಸಬೇಕು. ಇವರು ತಮ್ಮನ್ನು ಪುಣೆಯಲ್ಲಿ ಕೂಡಿಕೊಂಡು, ಇಡೀ ಹಿಂದುಸ್ಥಾನದ ಕೂಡ ತಮ್ಮೊಂದಿಗೆ ಸಂಚಾರ ಮಾಡಬೇಕು. ಅವರ ವಿದ್ದರೆ ತಮ್ಮ ಸ್ವತಂತ್ರ ರಿಪೋರ್ಟನ್ನು ನಮ್ಮ ರಿಪೋರ್ಟಿನ ಕೂಡ ಕಳಿಸಬೇಕೆಂದು ಸರ ಸಾಯಮನ್ನ ಸಾಹೇಬರು ವಿಲಾಯತಿಯಿಂದ ಹಿಂದುಸ್ಥಾನ ಸರಕಾರಕ್ಕೆ ತಾರುಮಾಡಿದ್ದಾರೆ.

ಬೆಳಗಾವಿಯ ಪೋಲೀಸ ಆರೋಪಿಗಳು ತಮ್ಮ ವಿಚಾರಣೆಯು [illegible] ಬೇರೆ ಜಿಲ್ಲೆಯಲ್ಲಿ ನಡೆಯಬೇಕೆಂದು ಹಾಯಕೋರ್ಟಿನಲ್ಲಿ ಅರ್ಜಿ ಮಾಡಿಕೊಂಡಿದ್ದರು. [illegible] ವಿನಂತಿಯನ್ನು ನಾಮಂಜೂರ ಮಾಡಿದರು.

ಇಬ್ಬರು ಬ್ರಾಹ್ಮಣರ ಮೇಲೆ ರಾಜದ್ರೋಹದ ಫಿರ್ಯಾದಿ.

—೦—

ದಕ್ಷಿಣ ಹಿಂದುಸ್ಥಾನ ರೇಲ್ವೆಯ ಸಂಪಿನಲ್ಲಿ ಭಾಷಣ ಮಾಡಿ, ರಾಜದ್ರೋಹ ಮಾಡಿದರೆಂದು [illegible] ಅಯ್ಯರ ಮತ್ತು [illegible] ಮೇಲೆ [illegible] ಮಾಡಿದ್ದಾರೆ. [illegible] ಇವರನ್ನು [illegible]

ಬಿನ್ನಹ

ಹೋದ ವರ್ಷದಂತೆ ಈ ಸಾರೆ [illegible] ನವರಾತ್ರಿ ಉತ್ಸವವನ್ನು [illegible] ಶ್ರೀ [illegible] ಸಭೆ ನೆರೆಯುವದು. ಈ ಕಾಲಕ್ಕೆ ಎಲ್ಲ ಸಜ್ಜನರು [illegible] ಆಗಬೇಕಾಗಿ ಬಿನ್ನಹ.

೧ [illegible] ಗೊತ್ತುಪಡಿಸುವದು.

೨ ಉತ್ಸವ ಮಂಡಳವನ್ನು ಸ್ಥಾಪಿಸುವದು.

ಉಳಿದ ವಿಷಯಗಳನ್ನು ವಿಚಾರಿಸುವದು.

ಕಾರ್ಯದರ್ಶಿ

ಸಾಧ [illegible]

ದೇವಿ ಸರೋಜಿನಿಯವರು ಅಮೇರಿಕೆಗೆ ಹೋದಾಗಿನಿಂದ, ಇವರಿಗೆ [illegible] ಯಲ್ಲಿ [illegible] ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಕೂಡಿತ್ತು. [illegible] ಇವರಿಗೆ ಸೂಚನೆ ಮಾಡಿದ್ದಾರೆ.

ಕಲಕತ್ತೆಯಲ್ಲಿ ಕಾಲೇಜಿನ ವಿದ್ಯಾರ್ಥಿಗಳಲ್ಲಿ [illegible] ಒಬ್ಬನು [illegible] ಪ್ರಕರಣದ [illegible] ಪ್ರತಿಜ್ಞೆ [illegible] ಪಟ್ಟಿದ್ದಾನೆ.

ಜಾಹೀರನಾಮೆ

— (೦) —

ಲಾ. ಅಸಲ ನಂ ೧೨೩/೨೫

ಧಾರವಾಡ ೨ ನೇ ವರ್ಗ ಜಾಯಿಂಟ ಸಬ್ಬ

ಜಡ್ಜ ಕೋರ್ಟಿನಲ್ಲಿ—

ವಾದಿ ಲಿಂಗನಗೌಡಾ ಮಲ್ಲನಗೌಡಾ ಪಾಟೀಲ ಸಾ॥ ಗಿಡದಹುಬ್ಬಳ್ಳಿ ವಗೈರೆ ೧೭ ಇಸಮು.

ವಿರುದ್ಧ

ಪ್ರತಿವಾದಿ- ರಾಮನಗೌಡಾ ಬಿಂನ ಕೊಂಪನಗೌಡಾ ಪಾಟೀಲ ಸಾ॥ ನಿಗದಿ ವಗೈರೆ ೭ ಮಂದಿ

ದಾವಾ ರೂಪಾಯಿ ೩೦೧

ಇದರಲ್ಲಿ ಶಿ| ಪ್ರೊ ಕೋಡ ಆರ್ಡರ ೧ ರೂಲ ೮ ನೇ ಪ್ರಕಾರ ಧಾರವಾಡ ತಾಲೂಕ ಗಿಡದ ಹುಬ್ಬಳ್ಳಿ ವ ನಿಗದಿ ಗ್ರಾಮದ ಯಾವತ್ತೂ ಜನರಿಗೆ ತಿಳಿಸುವದೇನಂದರೆ.

ವಾದಿಯರು ಗಿಡದಹುಬ್ಬಳ್ಳಿ ಗ್ರಾಮದ ಜನರ ವತಿಯಿಂದ ದೇವರಹುಬ್ಬಳ್ಳಿ ಗ್ರಾಮದ ಗ್ರಾಮದೇವತಿ ಅಂದರೆ- ದ್ಯಾಮವ್ವಾ ವ ದುರ್ಗವ್ವಾ ಇವು ನಿಗದಿ ಗ್ರಾಮದಲ್ಲಿ ಇಲ್ಲದೆ ಐದವರ್ಷ ನಿಗದಿ ಗ್ರಾಮದವರು ದೇವರಹುಬ್ಬಳ್ಳಿ ಗ್ರಾಮದವರಿಗೆ ವೋಳೀಯುಣ್ಣಿಯಲ್ಲಿ ಕರಿ ಕೊಡಬೇಕು ದೇವರಹುಬ್ಬಳ್ಳಿಯವರು ತಮ್ಮ ಗ್ರಾಮ ದೇವತೆಗಳನ್ನು ನಿಗದಿ ಗ್ರಾಮದವರಿಗೆ ಜಾತ್ರೆ ವ ಉಡಿ ತುಂಬುವ ಕಾರ್ಯಗಳಿಗೋಸ್ಕರ ಕಳಿಸಿಕೊಡಬೇಕು ನಿಗದಿಯವರು ಸದರ ದೇವತೆಗಳನ್ನು ಕೆಲಸ ತೀರಿದ ಮೇಲೆ ಪರತ ಕಳಿಸಿಕೊಡಬೇಕು. ಈ ಪ್ರಕಾರದ ವಹಿವಾಟ ಬಹಳ ದಿನಗಳಿಂದ ಇದೆ ಮತ್ತು ನಿಗದಿ ಗ್ರಾಮದವರು ಸಂನ ೧೯೨೩ನೇ ಇಸ್ವಿಯಲ್ಲಿ ದೇವರಹುಬ್ಬಳ್ಳಿ ದೇವತೆಗಳನ್ನು ಒಯ್ದವರು ಪರತ ಕೊಟ್ಟಿಲ್ಲಾ. ಕಾರಣ ಸದರ ದೇವತೆಗಳು ದೇವರಹುಬ್ಬಳ್ಳಿ ಗ್ರಾಮದವರು ಅಂತಾ ಠರಾಯಿಸಿ ಪರತ ಕೊಡಬೇಕಂತ ವಾದೀರು ದೇವರಹುಬ್ಬಳ್ಳಿಯವರ ವತಿಯಿಂದ ಪ್ರತಿವಾದೀರ ಮೇಲೆ ನಿಗದಿ ಯಾವತ್ತು ಜನರ ವತಿಯಿಂದ ಅಂತಾ ದಾವೆ ಮಾಡಿರುತ್ತಾರೆ ಕಾರಣ ಮರ್ಜಿ ಇದ್ದವರು ಶಿ. ಪ್ರೊ. ಕೋಡ ಆರ್ಡರ ೧ ರೂಲ ೮ (೨)ನೇ ಪ್ರಕಾರ ಈ ಕೋರ್ಟಿಗೆ ತಾ| ೧೩-೧೦-೨೮ ವರೆಗೆ ಅರ್ಜಿ ಮಾಡಿಕೊಳ್ಳತಕ್ಕದ್ದು.

ತಾ| ೨೭—೮—೧೯೨೮ ನೇ ಇಸ್ವಿ.

Sd/- N. M. Udapi.
pleader.

True Copy.
R. K. Neglur.
Clark of The Goint F. C. Court.
Dharwar.

—॥ ಶ್ರೀ ಗುರು ಪ್ರಸನ್ನ ॥—

ಪ್ರತಿಯೊಬ್ಬ ಕುಟುಂಬಿಕರು ಅವಶ್ಯ ಸಂಗ್ರಹ ದಲ್ಲಿಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ನಾಲ್ಕು ತರದ ರೋಗಗಳು ತ್ವರಿತದಲ್ಲಿಯೇ ನಾಶಹೊಂದುವವು. ಅಜೀರ್ಣ ಅಪಚನ, ಅಮಾಂಶ, ಅಗ್ನಿಮಾಂದ್ಯ ಸಂಗ್ರಹಿಣಿ, ಹೊಟ್ಟೆಶೂಲೆ, ಹೊಟ್ಟೆನೋವು ಮತ್ತು ಅಂಥವೇ ತರದ ವಾತವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮಟಿಗೆಯಷ್ಟು ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ- ಸಾಕು ಪುನಃ ಅರ್ಧತಾಸಿನಲ್ಲಿಯೇ ಹಸಿವೆಯಾಗುವದು. ರೋಗದಿಂದ ಗುಣವಾಗಿದ್ದ ಅಶಕ್ತ ಮನುಷ್ಯರು ಪುನಃ ಶಕ್ತಿಗಳಿಸಿ ಔಷಧ ತಗೆದುಕೊಳ್ಳುವ ಕಾರಣವೇ ಇಲ್ಲಾ. ಹಳ್ಳಿಗಳಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬಿಯನ್ನು ತಮ್ಮ ಹತ್ತರ ಇಟ್ಟುಕೊಂಡರೆ- ಸಾಕು ಯಾವತ್ತೂ ಬೇನೆಗಳಿಗೆ ಉಪಯೋಗವಾಗುವದು. ಎಷ್ಟು ದಿವಸದ ಅಮಾಂಶವಿದ್ದರೂ ಮೂರೇ ದಿವಸಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದ ಈ ಸಿದ್ಧೌಷಧವನ್ನು ಪ್ರತಿಯೊಬ್ಬನೂ ಅವಶ್ಯ ಸಂಗ್ರಹದಲ್ಲಿಡತಕ್ಕದ್ದು ಒಂದು ಡಬ್ಬಿಯ ಕಿಮ್ಮತ್ತು ೧೦ ಆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ನ್ಯಾ ಪಾ. ೧ ಆಣೆ.

ಏಜಂಟ— ಬಿ. ಬಿ. ಟಿಕಾರೆ ಭ್ಯಾಂಡ ಸ್ಟಲ್, ಮಾರ್ಕೆಟರೋಡ ಧಾರವಾಡ.

---

೧೦೦ ಕ್ಕೆ ಒಂದು ವರ್ಷಕ್ಕೆ ಒಂದು ರೂಪಾಯಿ ಬಡ್ಡಿ ದರ.

ದಿ ಪಿಪಲ್ಸ ಪಿನ ಪ್ರಾವಿಡಂಟ ಆ್ಯಂಡ ಜನರಲ ಇನ್ಸುಅರನ್ಸ
ಕಂಪನಿ, ಲಿಮಿಟೆಡ ಪುಣೆ.

(Life) ಜೀವವಿಮಾ- ಪ್ರೀಮಿಯಮ ದರ ತಿಂಗಳಿಗೆ ೨ ರೂ, ೧ ರೂ, ಮತ್ತು ೮ ಆಣೆ. ೧೦ ವರ್ಷಗಳ ಮೇಲೆ ಬೋನಸ ಮತ್ತು ಲಾಭ ಸಹಿತ ಹಣವು ಸಿಗುವದು.

Marriage ಲಗ್ನಶಾಖೆ. ದರ ತಿಂಗಳಿಗೆ ೨ ರೂಪಾಯಿಯಂತೆ ಪ್ರಿಮಿಯಮ ಕೊಡಬೇಕಾಗುವದು. ಲಗ್ನದ ವೇಳೆಗೆ ರೂಪಾಯಿ ಕೊಡಲಾಗುವದು.

(Loan) ಸಾಲದಶಾಖೆ- ೧೦೦ ಕ್ಕೆ ವರ್ಷಕ್ಕೆ ಒಂದೇ ರೂಪಾಯಿ ಬಡ್ಡಿ ದರದ ಮೇಲೆ ೫೦ ರಿಂದ ೫೦೦೦ ರೂಪಾಯಿಗಳ ವರೆಗೆ ಜಾಮೀನು ಇಲ್ಲದೆ ಸಾಲ ದೊರೆಯುವದು.

ಧಾರವಾಡ ಜಿಲ್ಹೆಯ ಎಲ್ಲ ತಾಲೂಕುಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಉತ್ಸಾಹೀ ಜನರಿಗೆ ಯೋಗ್ಯ ಕಮೀಶನ ದೊರೆಯುವದು.

ಪತ್ತೆ— ಡಾ| ನಾಡಗೀರ ವ್ಹಿ ಜಿ (ಹೋಮಿಯೋ) ಎಲ್. ಬಿ.
ಹಿರೇಕೇರಿ ದ| ಧಾರವಾಡ.

ನೋಟೀಸಿನ ದರಗಳು.

—೦—

ತಿಂಗಳ ಕಾಲಮಿನ ಹತ್ತು ಪಙಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಙಕ್ತಿಗೆ ಒಂದಾಣೆ ಇಂಗ್ಲಿಷ ಪತ್ರಿಕೆಯೊಂದು ಪಙಕ್ತಿಗೆ ಎರಡು ಆಣೆ. ಸರಕಾರಿ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ದೇವಸ್ಥಾನ ಮುಂತಾದ ಸಾರ್ವಜನಿಕ ನೋಟೀಸುಗಳು ಸಾ ೦ ಗೆ ಮೂ ೮ ಕ— ಇಂಗ್ಲಿಷದಿಂದ ಅಪಕರಿಸಿ ಕನ್ನಡದಲ್ಲಿ ಹಾಕುವದಿದ್ದರೆ [illegible] ಅನೇಕ ಕಾಲಮಿನ ಜಾಹೀರಾತುಗಳಿಗೆ ತಮ್ಮ ಕಾರ್ಯಾಲಯಂ ಜಾಹಿರಾತುಗಳನ್ನು ಕೊಡುವವರು [illegible] ಒಪ್ಪಂದ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

—೦—

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ವಾರಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಆದ್ಯಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:— ಆಚಾರ್ಯ ಬಾಳಾಚಾರ್ಯ ಹೊಸಕೇರಿ

ವರ್ಷ ೯) ಧಾರವಾಡ ಶನಿವಾರ ತಾರೀಖು ೧೫ ನೇ ಸಪ್ಟಂಬರ ೧೯೨೮ (ಸಂಚಿಕೆ ೨೦೯

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ

ಸ್ಥಳ— ಮಂಗಳವಾರಪೇಟೆ, ಕ್ರಿಶ್ಚನ ಚರ್ಚಿನ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸಾಲ ದರದಿಂದ ತುಸು ಮತ್ತು ಬಹಳ ಮುದ್ದತಿಯ ತನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು [illegible] ಕಮೀಶನ ತಕ್ಕಷ್ಟಂದು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ರಕಮನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ
ಮ್ಯಾನೇಜಿಂಗ ಏಜಂಟ.

ಬಾಲ ನಟರ ಆನಂದ ಸಂಗೀತ ನಾಟಕ ಮಂಡಳಿ

ಶನಿವಾರ ತಾ. ೧೫ ಸಪ್ಟಂಬರ ೧೯೨೮ ನೇ ರಾತ್ರಿ
ಶ್ರೀ ಅನ್ನಪೂರ್ಣಾ ಥಿಯೇಟರದಲ್ಲಿ
[illegible] ಕೃತ.

ಸಿಂಹಾಚಾ ಭಾವಾ

ಅರ್ಥಾತ್

ಕುಮಾರ ಅಭಿಮನ್ಯು.

ರವಿವಾರ ತಾ. ೧೬ನೇ ಸಪ್ಟಂಬರ ೧೯೨೮ ಹಗಲು ೪॥ ಘಂಟೆಗೆ.

ಬ್ರಹ್ಮಘೋಟಾಳ.

(ನವೀನ ಪೌರಾಣಿಕ ಪ್ರಯೋಗ)

ಮ್ಯಾ. ಆ. ಸ. ನಾ. ಮಂಡಳಿ.

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಂದಿಗೆಯು ಏಳು ಲಕ್ಷದ ಮೇಲುಂಟು. ಚಾಲ ಕುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ [illegible] ನಡೆಯುವವು. ಶಾಹೀನ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಬಡ್ಡಿ ದೊರೆಯುವವು.

ವಿಶೇಷ ಸಂಗತಿಗಳನ್ನು ಕಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು [illegible] ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ಮೂರಕ್ಕೆ ತಿಂಗಳಿಗೆ [illegible] ಅನ್ನಯಿಸುತ್ತದೆ.

ಎ. ಕೆ. [illegible]
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ.

—೦—

ನಿತ್ಯ ಪತ್ರಕ್ಕೆ

೧೨ ತಿಂಗಳಿಗೆ	೧೨–೮–೦ ರೂ.
೬ ,,	೭–೦–೦
೪ ,,	೪–೦–೦
ವಾರ ಪತ್ರಕ್ಕೆ ೧ ವರ್ಷಕ್ಕೆ	೩–೧೨–೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾ. ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೧೫-೯-೨೫ ನೇ ಇಸ್ವಿ.

ಶ್ರೀ.

ಆ ವಿಜಯಂ ಶ್ರೀಕಟ್ಟುಯು |
[illegible] ಸಷುವತಿಯು ನಲಿಸಿರೆ ಸುಹಿತ ಶರಿತೆಗಳಿಂ ||
[illegible] " ವಿಜಯಂ " ಶ್ರೀಕರಂಬ |
[illegible] ವಿಹಿತಂಗಳ ನಿವಾರಿಸುವಂತಪ್ಪುದು ಸಾಜಂ ||೧||

ನಾಯಿಮನ್ನ ಸಾಹೇಬರ ದೆಸೆಯಿಂದ ಸರಕಾರಕ್ಕೂ ಅಸೆಂಬ್ಲಿಗೂ ಮಲ್ಲಯುದ್ಧ.

ಸರ ನಾಯಿಮನ್ನ ಸಾಹೇಬರು ಹಿಂದುಸ್ಥಾನ [illegible]ಸರಕಾರಕ್ಕೆ ತಾರು ಮಾಡಿ, ಕೌನ್ಸಿಲ ಅಫ ಸ್ಟೇಟ ಮತ್ತು ಅಸೆಂಬ್ಲಿಯವರು ತಮ್ಮ ಕೂಡ ಕೆಲಸ ಮಾಡಲು ಏಳು ಜನರನ್ನು ಆರಿಸಬೇಕೆಂದು ಮಾಡಿದ ಸೂಚನೆಯು ಬಿಟ್ಟಿಗಾಳಿಯದಲ್ಲಿ ಪರ್ಯವಸಾನ ಹೊಂದುತ್ತಲಿದೆ. ಕೌನ್ಸಿಲ ಅಫ ಸ್ಟೇಟವು ಆಳರಸಗೆ ಒಂದು ಆತ್ಮರಕ್ಷಣೆಯ ಸ್ಥಳವಾಗಿರುವದರಿಂದ ಅಲ್ಲಿ ಅವರ ಚುನಾವಣೆಯು ನಿರ್ವಿಘ್ನವಾಗಿಯೂ ಆಗುವದು. ಇಂಥ ಸಂಸ್ಥಿತಿಯು ಅಸೆಂಬ್ಲಿಯಲ್ಲಿರುವದಿಲ್ಲ. ಅಧ್ಯಕ್ಷರು ಸರ್ವಸ್ವತಂತ್ರರಿದ್ದಾರೆ. ಚುನಾಯಿಸಲ್ಪಟ್ಟ ಮೆಂಬರರು ಒಮ್ಮೆ ಬಹುಮತದಿಂದ ಸರಕಾರದ ಠರಾವನ್ನು ತೂರಿ ಚೆಲ್ಲಿದ್ದಾರೆ. ಮೇಲಾಗಿ ಯಾವದೊಂದು ಠರಾವು ಹೇಗೇ ಪಾಸಾಗಲಿ; ಅದನ್ನೇ ಒಂದು ವರ್ಷದ ತನಕ ಅಸೆಂಬ್ಲಿಯು ಮುಂದೆ ತರಬಾರದೆಂಬ ಕಾಯಿದೆಯು. ಆಳರಸರು ಈ ಕಾಯಿದೆಯನ್ನು ಮುರಿಗೊಳ್ಳುವ ಸಂಭವವುಂಟು. ಏಕಂದರೆ ಮದ್ರಾಸದಲ್ಲಿ ಹಾಗೆ ಮಾಡಿ ತೋರಿಸಿದ್ದಾರೆ. ಒಂದು ವೇಳೆ ಶ್ರೀ ಪಟೇಲರು ಈ ಠರಾವಿಗೆ ಜೀವ ಕಳಿ ತುಂಬುವದಾದರೆ- ಮೆಂಬರರು ಬಹುಮತದಿಂದ ಹೊಡೆದು ಹಾಕಬಹುದು. ಎರಡು ಮೂರು ಮತಗಳ ಅಂತರವಿರುವದರಿಂದ, ಯಾವದು ಹೇಗಾಗುವದೆಂಬ ನಿಯಮವಿಲ್ಲ. ಅಧಿಕಾರದ ಆಶೆ ಬಹಳ ಕೆಟ್ಟದು. ಮದ್ರಾಸದಲ್ಲಿ ಸ್ವರಾಜ್ಯ ಪಕ್ಷದವರೇ ಅಧ್ಯಕ್ಷರಿದ್ದು, ಅವರೇ ಮುಂದಾದ ತಿರವಿ ಠರಾವಿಗೆ ಅಸುವು ಕೊಟ್ಟರು. ಒಮ್ಮೆ ಬಹಿಷ್ಕಾರ ಹಾಕಿದ ಜಸ್ಟಿಸ ಪಕ್ಷದವರು ಸರಕಾರದ ಸ್ತುತಿಪಾತ್ರರಾದರು. ಇದೇ ಪ್ರಕಾರ ಅಸೆಂಬ್ಲಿಯಲ್ಲಿಯೂ ಕೆಲವರ ಹಿಂದಿನಲ್ಲಿ ಹೊಂಬಗಾಗಿ ಹೋರಾಡಬಹುದು. ಆದುದರಿಂದ- ಈ ಠರಾವಿನ ಗೋಜಿಗೆ ಹೋಗದೆ, ಸರಕಾರದವರು ನಾಯಿಮನ್ನ ಕಮಿಟಿಯ ಕೂಡ ಸಹಕಾರ ಮಾಡಬೇಕೆ? ಎಂಬ ತತ್ವದ ಬಗ್ಗೆ ಚುನಾವಣೆಯಾಗಬೇಕು; ಈ ಪ್ರಕಾರ ಚುನಾವಣೆಯಾಗುವಂತೆ ಸರಕಾರದವರು ಅಸೆಂಬ್ಲಿ ಮತ್ತು ಕೌನ್ಸಿಲಗಳ ವಿಸರ್ಜನೆ ಮಾಡಿ, ಚುನಾವಣೆಯ ಜಾಹೀರನಾಮೆಯನ್ನು ಹಚ್ಚಬೇಕೆಂದು ಪ್ರಮುಖ ಮೆಂಬರರು ಗವ್ಹರ್ನರ ಜನರಲಸಾಹೇಬರಿಗೆ ಒಂದು ವಿನಂತಿ ಪತ್ರ ಬರೆದಿದ್ದಾರೆ. ಇದರ ಮೇಲೆ ಕನಿಷ್ಠ ೩೫ ಜನ ಮೆಂಬರರಾದರೂ ಸಹಿ ಮಾಡುವರು.

ಅಧ್ಯಕ್ಷರು ಠರಾವನ್ನು ಅಂಗೀಕರಿಸದಿದ್ದರೆ ಒಂದು ವೇಳೆ ಅವರು ಅಪ್ಪಣೆ ಕೊಟ್ಟು, ಠರಾವು ಅಸೆಂಬ್ಲಿಯ ಮುಂದೆ ಬಂದು ಪಾಸಾಗದಿದ್ದರೆ- ಗವ್ಹರ್ನರಸಾಹೇಬರು ತಾವಾಗಿ ಅಸೆಂಬ್ಲಿಯ ಮತಿಯಿಂದ ಆದರ ನಾಲ್ವರು ಮೆಂಬರರನ್ನು ನೇಮಿಸುವರೆಂದೂ ಪ್ರಸಿದ್ಧವಾಗಿದೆ. ಆಳರಸರು ಹೀಗೆ ಮಾಡುವದು ಖಂಡಿತ. ಏಕಂದರೆ- ಸರ ನಾಯಿಮನ್ನ ಸಾಹೇಬರು ಇಂದು ತಿಂಗಳೊಳಗಾಗಿ ಹಿಂದುಸ್ಥಾನಕ್ಕೆ ಬಂದು, ಕೆಲಸ ಪ್ರಾರಂಭಿಸುವರು. ಅದಕ್ಕೆ ಅನುಕೂಲವಾಗಿ ನಡೆಯುವದಲ್ಲದೆ, ಲೋಕಪಕ್ಷದ ಮೆಂಬರರ ಆಗ್ರಹದ ಸೂಚನೆಯ ಮೂಲಕ ಅಸೆಂಬ್ಲಿ ಮತ್ತು ಕೌನ್ಸಿಲಗಳನ್ನು ಬರಖಾಸ್ತ ಮಾಡಿ, ಸರ ನಾಯಿಮನ್ನ ಸಾಹೇಬರಿಗೆ ವಿಳಂಬಯಿಲ್ಲದೆ ಬಿಕಧ್ಯಾನ ಮಾಡಲಿಕ್ಕೆ ಹೇಳಕಾರರು ಈ ವಿಷಯವಾಗಿ ಅಸೆಂಬ್ಲಿಯಲ್ಲಿ ಉಭಯ ಪಕ್ಷಗಳಿಗೆ ಕುಸ್ತಿ ಹತ್ತಿದರೂ, ಅಧಿಕಾರ ಒಂದೆಡೆಯಲ್ಲಿ! ಮಾತು ಬೇರೊಂದೆಡೆಯಲ್ಲಿ!! ಆಗುವದರಿಂದ ಮತ್ತು ಆಳರಸರು ತಮ್ಮ ದೃಷ್ಟಿಯಿಂದ ರಾಜಕೀಯ ಸುಧಾರಣೆ ಮಾಡತಕ್ಕವರಾದ್ದರಿಂದ ಅಸೆಂಬ್ಲಿಯ ಮೆಂಬರರು ಮಾಡುವ ಶ್ರಮವೆಲ್ಲ ಸದ್ಯದಲ್ಲಿ ವ್ಯರ್ಥವಾಗುವದೇ ಸರಿ.

ಪಾರಿಸದಲ್ಲಿ ಬೋಲ್ಶೆವಿಕರ ಮೇಲೆ ಹಲ್ಲೆಯು.

—೦—

ಫ್ರೆಂಚ ಸರಕಾರದವರು ರಾಜಧಾನಿಯಾದ ಪಾರಿಸ ಪಟ್ಟಣದಲ್ಲಿ ಒಬ್ಬವಾದರು ಬೋಲ್ಶೆವಿಕರಿರಬಾರದೆಂಬ ಪೂರ್ವಗ್ರಹ ಮಾಡಿಕೊಂಡು, ಇವರನ್ನು ಇದ್ದಲ್ಲಿ ಹಿಡಿಯುವ ಪೂರ್ವ ಸನ್ನಾಹವು ಮಾಡಿ, ಇದಕ್ಕೆ ಅವಶ್ಯವಾಗಿ ಬೇಕಾಗುವ ಪೋಲೀಸ ಮತ್ತು ಪಡೆಯನ್ನು ಸಜ್ಜುಗೊಳಿಸಿದರು. ಸಾವಿರಾರು ಜನ ಪೋಲೀಸರಲ್ಲದೆ ಖಾಸಾ ನಾವಿಕ ಸೈನಿಕರನ್ನು ತಂದು ಬಂದೋಬಸ್ತಿಗಾಗಿ ಕೇರಿ ಕೇರಿಗೆ ನಿಲ್ಲಿಸಿ ಬೋಲ್ಶೆವಿಕರ ದಸ್ತಗಿರಿಗೆ ಪ್ರಾರಂಭಿಸಿದರು. ಈ ಹೋಳಿಯಲ್ಲಿ ಇವರಿಗೆ ದೊರೆತವರು ಎಷ್ಟೋ [illegible] ಜನರು!!!

ಪೆನಶನದ ಬದಲಾಗಿ ಪ್ರಾವ್ಹಿಡೆಂಟ ಫಂಡು

—೦—

ಕೆಲಸದಿಂದ ನಿವೃತ್ತರಾದ ನೌಕರರಿಗೆ ಈಗಿನ ಸರಕಾರವು ಕೊಡುವ ತನಕ ಪೆನಶನ ಪ್ರತಿಫಲವೆಂದು ಪೆನಶನ ಕೊಡುತ್ತದೆಂಬದು ನಾಗರಿಕರದಲ್ಲಿ ಬಹಳ ಬಂದ ಕಂಡಿತು. ರೇಲ್ವೆ, ಮ್ಯುನಿಸಿಪಾಲಿಟಿ ಸಂಸ್ಥಾನದವರು ಮುಂತಾದವರು ಪೆನಶನದ ಬದಲಿಗೆ ಪ್ರಾವ್ಹಿಡೆಂಟ ಫಂಡು ಕೊಡುವದನ್ನು, ನೌಕರರು ಹತ್ತಿಪ್ಪತ್ತು ನೌಕರಿ ಮಾಡಿಯೂ ಮನೆಗೆ ಒಯ್ಯುವದನ್ನು ನೌಕರರು ನಿತ್ಯದ ಮಂದರುಮಕ್ಕಳಿಗೆ ಪರ್ಮೆಂಟು ನಾಸ್ತಿ ಆಗ [illegible] ಕೆಯುತ್ತದೆಂಬದನ್ನು ಸರಕಾರದ ಲಕ್ಷ್ಯಕ್ಕೆ ತಂದಿದ್ದಾರೆ. ಆದ್ದರಿಂದ ಸರಕಾರದವರು ಪ್ರಾವ್ಹಿಡೆಂಟ ಫಂಡಿನ ವ್ಯವಸ್ಥೆ ಇರಬೇಕೆಂದು ತಿಳಿಸಿರುವರು. ಪೆನಶನದ ತನಕ ಹೋಗುವದು ನೌಕರರಿಗೆ ಸಾಧ್ಯವಿಲ್ಲ. ಇದರಲ್ಲಿ ಪರ್ಮೆಂಟ ನೌಕರಿ ಪೆನಶನ ಭೋಗಿಸುವಂಥವರು ಬಹಳ ಸ್ವಲ್ಪ. ನೌಕರಿಯಲ್ಲಿ ಸಗಿತ್ತು ಹೊಡರು ಮಕ್ಕಳ ಕರ್ಮ ಪರಿಸ್ಥಿತಿ ಕೊಡುವಂಥವರೇ ಅನೇಕರು! ಅನೇಕ ಕುಟುಂಬಗಳ ಅವಸ್ಥೆಯು ದಿನಾರ್ಧಗಳಲ್ಲಿ ಉಪ್ಪಿಗೆ ಹೋಗಿ ತಿಪ್ಪೆಯಂತಾಗುತ್ತದೆ. ಆದುದರಿಂದ ರೇಲ್ವೆಯಂತೆ ಸರಕಾರದಲ್ಲಿಯೂ ಪ್ರಾವ್ಹಿಡೆಂಟ ಫಂಡು ಕೊಡಬೇಕೆಂಬ ಠರಾವು ಮುಂಬಯಿಯ ಕೌನ್ಸಿಲದಲ್ಲಿ ಬರತಕ್ಕದ್ದಿದೆ.

ಮುಸಲಮಾನರು ಸಮಾನರಲ್ಲಿ ಹೊಡೆದಾಟ. ಗಡ್ಡ ಬಿಡುವದು ಧರ್ಮ ಲಕ್ಷಣವೇ?

—(೧)—

ಮುಸಲಮಾನರಲ್ಲಿ ಸಾಮಾನ್ಯವಾಗಿ ಗಡ್ಡಕ್ಕೆ ಬಹಳ ಮರ್ಯಾದೆ ಕೊಡುವರು. ಗಡ್ಡ ಬಿಡುವದೊಂದು ಧರ್ಮದ ಲಕ್ಷಣವೆಂದು ಭಾವಿಸುವರು. ಆದರೆ ಇತ್ತಲಾಗಿನ ಸುಧಾರಣೆಯ ಪ್ರಕಾರ ಅನೇಕ ಜನ ಮುಸಲಮಾನರು ಗಡ್ಡ ತೆಗೆಸುವರು. ಹೀಗಾಗಿ ಗಡ್ಡ ಬಿಡುವದು ಧರ್ಮ! ಇಲ್ಲದಿದ್ದರೆ ಅದು ಅಧರ್ಮವೆಂದು ಕಲಕತ್ತೆಯಲ್ಲಿ ಮುಸಲಮಾನರ ಮಸೀದೆಯಲ್ಲಿ ವಾದ ನಡೆದು, ಅದರ ಕೊನೆಯು ಹೊಡೆದಾಟದಲ್ಲಾಯಿತು. ಪೋಲೀಸರು ಬಂದು ಹೊಡೆದಾಟ ನಿಲ್ಲಿಸಿ, ಮಸೀದೆಯು ಸ್ವಲ್ಪ ದಿವಸ ಬಂದಿರುವಂತೆ, ಅದರ ಬಾಗಿಲಕ್ಕೆ ಬೀಗ ಹಾಕಿಸಿದರು.

ಝೆಕೊ ಸ್ಲೊ. ವ್ಯಾಕಿಯಾದಲ್ಲಿ ರುವರು ವಂದೇ ಮಾತರಂದ ಜಯಘೋಷದಲ್ಲಿ ತಮ್ಮ ಕರ್ತವ್ಯದ ವೇಳೆ ಭಾರತ ರಾಷ್ಟ್ರೀಯ ನಿಶಾನೆಯನ್ನು ಹಾರಿಸಿದರು.

ಹಾಯಕೋರ್ಟಿನ ಜಡ್ಜರಿಗೆ ಈಗಿನ ಸಂಬಳ ಸಾಲದು!

—೦—

ಹಾಯಕೋರ್ಟಿನ ಜಡ್ಜರಿಗೆ ತಿಂಗಳಿಗೆ ತುಸು ಕಡಿಮೆ ನಾಲ್ಕು ಸಾವಿರ ರೂಪಾಯಿ ಸಂಬಳವುಂಟು. ಇದು ಅವರ ಜೀವನಕ್ಕೆ ಸಾಲದ್ದರಿಂದ, ಮತ್ತು ಅವರು ತಮ್ಮ ದರ್ಜೆಯ ಪ್ರಕಾರ ಇರಬೇಕಾದ್ದರಿಂದ, ಸಂಬಳವನ್ನು ೪೦೦-೫೦೦ ದಷ್ಟು ಹೆಚ್ಚಿಸಬೇಕೆಂದು ದಿಲ್ಲಿಯಲ್ಲಿ ಅಸೆಂಬ್ಲಿಯ ಮುಂದೆ ಠರಾವು ಬಂತು. ಇಂಗ್ಲಂಡದಲ್ಲಿ ಜಡ್ಜರು ಇಲ್ಲಿಯವರಂತೆ ಹೆಡಿಗೆಗಟ್ಲೆ ಸಂಬಳ ತಕ್ಕೊಳ್ಳುವದಿಲ್ಲ. ಅಮೇರಿಕೆಯಲ್ಲಿ ಜಡ್ಜರ ಸಂಬಳ ಇಷ್ಟಿಲ್ಲ. ಅಮೇರಿಕೆಯು ಗರ್ಭ ಶ್ರೀಮಂತದೇಶ. ಹಿಂದುಸ್ಥಾನವು ಬಡದೇಶ. ಇಲ್ಲಿಯ ಜಡ್ಜ ಮತ್ತು ಸಿವ್ಹಿಲ ಸರ್ವಂಟರ ಸಂಬಳವು ಸಾವಿರಕ್ಕಿಂತ ಹೆಚ್ಚಿರಬಾರದು. ಜಡ್ಜರ ಸಂಬಳ ಹೆಚ್ಚಿಸಿದರೆ- ಪುನಃ ಸ್ಟಾಂಪ ಡ್ಯೂಟಿ ಹೆಚ್ಚಿಸಬೇಕಾಗುತ್ತದೆ. ಇದು ಸದ್ಯದ ಸರಕಾರಕ್ಕೆ ೨॥ ಇದ್ದು, ಜಗತ್ತಿನಲ್ಲಿ ಇಷ್ಟು ಡ್ಯೂಟಿಯು ಎಲ್ಲಿಯೂ ಇಲ್ಲ. ಸಂಬಳ ಹೆಚ್ಚಿಸಿ, ಸಾಲಗಾರರ ಗೋಣು ಕೊಯ್ಯುವಂಥ ಪ್ರಸಂಗ ತರಬಾರದೆಂದು ಪ್ರಜಾಪಕ್ಷೀಯರು ಠರಾವನ್ನು ವಿರೋಧಿಸಿದರು. ಕೊನೆಯಲ್ಲಿ ಹೋಟು ತಕ್ಕೊಳ್ಳಲು- ಬಹುಮತದಿಂದ ಸಂಬಳ ಹೆಚ್ಚಿಸಬಾರದೆಂಬ ಠರಾವು ಪಾಸಾಯಿತು.

ಬುದ್ಧನ ಮೂರ್ತಿಯು ಕ್ಷಯ ರೋಗ ಕಳೆಯಿತು.

—(೦)—

ಚೀನದ ಹಳೇ ರಾಜಧಾನಿಯಾದ ಪೆಕಿಂಗದ ಹತ್ತರ ಒಂದು ಗ್ರಾಮದಲ್ಲಿರುವ ಬುದ್ಧನ ಮೂರ್ತಿಗೆ ಒಬ್ಬಾತನೊಬ್ಬ ಕ್ಷಯ ರೋಗಿಯು ನಡೆಕೊಂಡನು. ಒಂದು ರಾತ್ರಿ ಮೂರ್ತಿ ಎದ್ದು ಬಂದು, ತನ್ನನ್ನು ರೋಗಮುಕ್ತನನ್ನಾಗಿ ಮಾಡಿತೆಂದು ಅವನು ಜಾಹೀರಮಾಡಿದನು. ಈ ವರ್ತಮಾನ ಕೇಳಿ, ಅನೇಕ ಕ್ಷಯರೋಗಿಗಳು ಅಲ್ಲಿಗೆ ಸಾಲಿಗೆ ಹಚ್ಚಿದರು. ಬುದ್ಧನು ಎದ್ದು ಬಂದು ಗುಣಪಡಿಸಲೇ ಇಲ್ಲ. ರೋಗಿಗಳು ನೆಟ್ಟಗಾಗುವದೆಂತಿರಲಿ; ರೋಗಿಗಳ ಒಂದು ಯಾತ್ರೆ ಮಾತ್ರ ಕೂಡಿದಂತಾಯಿತು. ಮತ್ತು ಬುದ್ಧನ ಮೂರ್ತಿಗೆ ಎದ್ದು ಗಾಳಿ ಬರುವಂತೆಯೂ ತೋರಿತು. ಸರಕಾರದವರು ದೇವರ ಸುತ್ತಲು ಪೋಲೀಸ ಕಾವಲಿಟ್ಟು, ರೋಗಿಗಳು ಕೂಡದಂತೆ ಭದ್ರೋಪಾಯ ಕೈಕೊಂಡಿದ್ದಾರೆ.

ಹುಬ್ಬಳ್ಳಿಯಲ್ಲಿ ಕೂಡಿದ ರೇಲ್ವೆ ಕಮೀಟಿಯು.

—೦—

ಹೋದ ಮಂಗಳವಾರದ ದಿವಸ ಹುಬ್ಬಳ್ಳಿ ರೇಲ್ವೆ ಕಮಿಟಿ ಕೂಡಿತ್ತು. ಅಲ್ಲಿ ನಡೆದ ಕೆಲಸಗಳು:-

೧ ಸೊಲ್ಲಾಪೂರ ಪಟ್ಟಣದಲ್ಲಿ ಟಿಕೀಟು ಮತ್ತು ಪಾರ್ಸಲ ಆಫೀಸನ್ನು ತೆರೆಯುವದು.

೨ ಕೊಲ್ಹಾಪೂರ ಸ್ಟೇಶನದಲ್ಲಿ ದೀಪದ ವ್ಯವಸ್ಥೆ ಮಾಡುವದು

೩ ಕರಜಗಿ ಸ್ಟೇಶನದಲ್ಲಿ ಪ್ರಯಾಣಿಕರಿಗಾಗಿ ನೀರಿನ ನಳ ಹಾಕುವದು ಈ ಬಗ್ಗೆ ವಿಚಾರ ಮಾಡುವಂತೆ ಏಜಂಟರು ಆಶ್ವಾಸನ ಕೊಟ್ಟಿದ್ದಾರೆ.

ಜರ್ಮನಿಯು ಬೂದಿ ಮುಚ್ಚಿದ ಕೆಂಡವೇ ಕೆಂಡ!

—೦—

ನಾವು ಜರ್ಮನ್ನರು ನಿರ್ಬಲರಾಗಿದ್ದೇವೆ ನಮ್ಮ ಶಸ್ತ್ರಾಸ್ತ್ರಗಳನ್ನು ಕಸಕೊಂಡು ಪೌರುಷಹೀನಮಾಡಿದರೂ ನಮ್ಮ ರ್ಹಾಯಿನಲೆಂಡ ದೇಶವನ್ನು ನಮಗೆ ಕೊಡವಲ್ಲರೆಂದು ಜರ್ಮನಿಯ ಮಂತ್ರಿಯು ಮಾಡಿದ ಭಾಷಣಕ್ಕೆ ಫ್ರೆಂಚ ಪ್ರಧಾನಿಯೋರ್ವನಾದ ಮೆ. ಬ್ರಾಯಿಂಡಸಾಹೇಬನು ಉತ್ತರಕೊಟ್ಟಿದ್ದಾನೆ.

"ಜರ್ಮನಿಯು ನಿಃಶಸ್ತ್ರವಾದದ್ದು ತೋರಿಕೆಯಲ್ಲಿ. ಅದರ ಯುದ್ಧದ ಸಾಹಿತ್ಯಗಳನ್ನು ಮಾಡುತ್ತಿದ್ದ ಕಾರಖಾನೆಗಳು ಇಂದು ವ್ಯಾಪಾರದ ಸರಕುಗಳನ್ನು ಮಾಡುತ್ತಿದ್ದರೂ, ಯುದ್ಧದ ಸೂಚನೆಯಾದ ಕೂಡಲೆ- ಅವುಗಳಲ್ಲಿ ಮೊದಲಿನಂತೆ ಬೇಕಾದಂಥ ತೋಫು ತುಬಾಕಿಗಳನ್ನು ಹೊಯ್ಯುವಂಥ ರಚನೆ, ವ್ಯವಸ್ಥೆ ಮತ್ತು ಸಾಹಿತ್ಯ ಸಂಗ್ರಹವುಂಟು ಜರ್ಮನ ಸೈನ್ಯವು ಒಂದೇ ಲಕ್ಷವಿರುವದು ನಿಜ ಆದರೆ ಮೊದಲು ದಂಡಿನಲ್ಲಿ ಸೇರಿದಂಥ ಮತ್ತು ಯುದ್ಧ ನೋಡಿದಂಥ ವೀರ ತರುಣರು ಕೋಟಿ ಸಂಖ್ಯೆಯಿಂದ ಜೀವಂತರಿದ್ದಾರೆ. ಎಲ್ಲಾ ವೀರರೂ ಬಾಹುಸ್ಫುರಿತರಾಗಿ ಯುದ್ಧಾಪೇಕ್ಷಕರಾಗಿದ್ದಾರೆ. ಅಂದ ಬಳಿಕ ಇವರು ಶಸ್ತ್ರಹೀನರಾದಂಥ ನಿರ್ಬಲ ದುರ್ಬಲರೋ?"

ಹೀಗೆಂದು ಮೆ. ಬ್ರಾಯಿಂಡಸಾಹೇಬರು ಅನ್ನುತ್ತಾರೆ.

ಹೈದರಾಬಾದಿನ ಹಿಂದೂ ಜನರಲ್ಲಿ ಅಸಂತೋಷ.

ಹೈದರಾಬಾದಿನಲ್ಲಿ ಬ್ರಹ್ಮಚಾರಿ ಚನ್ನಬಸಪ್ಪ ಎಂಬ ಹೆಸರಿನಿಂದ ಸಾರವಾರದವನು ಒಂದು ಹೆಸರಿನ ಪುಸ್ತಕ ಮುದ್ರಿಸಿ, ಹಿಂದೂ ಜನರು ಗೋಮಾಂಸ ತಿನ್ನುತ್ತಿದ್ದರೆಂದೂ, ಕೃಷ್ಣ ಮತ್ತು ಅರ್ಜುನರಿಬ್ಬರು ಆಕಳ ಕೊಯ್ಯುತ್ತಿದ್ದಾರೆಂಬ ಚಿತ್ರವನ್ನು ಹಾಕಿ, ಹಿಂದೂ ಜನರಲ್ಲಿ ಅಸಂತೋಷವನ್ನುಂಟುಮಾಡಿದ್ದಾನೆ. ಈ ಪುಸ್ತಕವನ್ನು ಸರಕಾರ ಜಪ್ತ ಮಾಡಬೇಕೆಂದು ನಿಜಾಮನ ಸರಕಾರಕ್ಕೆ ವಿನಂತಿಮಾಡಿಕೊಳ್ಳಲು ಹೈದರಾಬಾದಿನಲ್ಲಿ ರಾಜಾಬನ್ಸಿಲಾಲರ ಅಧ್ಯಕ್ಷತೆಯಲ್ಲಿ ಹಿಂದೂ ಜನರ ಪ್ರಚಂಡ ಸಭೆಯು ಕೂಡಿತ್ತು.

ಬಹಾಯಿಗಳ ಜಗದ್ಗುರುವಿನಂಥ ವೀರರ ದಸ್ತಗಿರಿ

ಸ್ವರ್ಗವಾಸಿ ಅಮೀರ ಹಬಿಬುಲ್ಲಾ ಖಾನರ ಧರ್ಮಗುರುವಾಗಿ, ಆಫ್ಘಾನರಿಗೆ ಜಗದ್ಗುರುವೆನಿಸುವಂಥ ಹಾಜರತ ಸಾಹೇಬರು- ಅಮೀರರು ಸ್ತ್ರೀಯರ ಘೋಷಾ ತೆಗೆದು ಹಾಕಿ, ಅವರ ಸಕ್ತಿಯ ಶಿಕ್ಷಣ ಕೊಡಬೇಕೆಂದು ಮಾಡಿದ ಠರಾವಿನ ವಿರುದ್ಧ ಮತ ಕೊಟ್ಟು, ಅಮೀರರ ಹುಕುಮಿನ ಪ್ರಕಾರ, ದಾಸ ತಿರಸ್ಕಾರ ಸಹಿತ ಛಾವಣಿ ಬಾಗಕ್ಕೆ ಹೋಗಿ, ಅವರನ್ನು ದಸ್ತಗಿರಮಾಡಿ, ಕಾಬೂಲಕ್ಕೆ ಕರಕೊಂಡು ಹೋಯಿತು.

ಸತ್ತವರ ಕೂಡ ಮಾತಾಡುವದು.

ಲಂಡನದಲ್ಲಿ ಕೂಡಿದ ಧರ್ಮ ಪರಿಷತ್ತಿನಲ್ಲಿ ಡಾಕ್ಟರ ವಾಲೇಶರೆಂಬವರು ಭಾಷಣಮಾಡುತ್ತಿದ್ದಾಗ- ಒಮ್ಮೆಂದೊಮ್ಮೆ ನೆಲದಿಂದ- ಸರ ಆಲಿವ್ಹರ ಲಾಜ ಮತ್ತು ಆರ್ಥರ ರಾಬರ್ಟ್ಸ ಮಾತಾಡುತ್ತಿದ್ದಾರೆ. ಈಗ ಈ ಕೋಣೆಯ ಹತ್ತಿರ ಬಂದರೆ ಅವರು ಮಾತಾಡುವದು ಕೇಳಿಸುತ್ತದೆ ಎಂದು ಹೇಳಿ, ಜನರಿಗೆ ಆ ತರಹದ ಕೂಗಿನ ಶಬ್ದ ಅವರ ಸಂದೇಶ ಕೇಳಿಸುತ್ತಿದ್ದದ್ದು ಸ್ಪಷ್ಟವಾಗಿ ಕೇಳಿಸಿತು

ಕಂಪೋಜಿಟರು ಬೇಕು.

ಇಂಗ್ಲಿಷ ಮತ್ತು ಕನ್ನಡ ಮೊಳೆ ಜೋಡಿಸಲು ಬರುವ ಕಂಪೋಜಿಟರು ಬೇಕಾಗಿದ್ದಾರೆ. ಸಂಬಳ ಕೆಲಸದ ಅನುಭವದ ಪ್ರಕಾರ. ಸ್ವತಃ ಭೆಟ್ಟಿಯಾದರೆ ಉತ್ತಮ.

ಮ್ಯಾನೇಜರ ವಿಜಯ,

ಧಾರವಾಡ.

ಒಕ್ಕಲಿಗರೂ ಒಕ್ಕಲತನವೂ

ನಮ್ಮ ಮಾಸ ಪತ್ರಿಕೆಯು ಈಗ ಸುಮಾರು ೧೬ ವರ್ಷಗಳಿಂದ ದೇಶಭಿಮಾನಿಗಳ ಸೇವೆಯನ್ನು ಮಾಡಿ ಯಾವತ್ತು ಜನರ ಆದರಕ್ಕೆ ಪಾತ್ರವಾಗಿರುವದು. ಇತ್ತೀಚೆಗೆ ಒಕ್ಕಲತನದ ಬೆಳೆಗೆಯ ಸಮ್ಮಂಧಗಳಿಂದೊಡಗೂಡಿದ ವಿಷಯಗಳೂ ಅಂದವಾದ ಮುದ್ರಣವೂ ಇರುವದರಿಂದ ವಾಚಕರ ಮನಸ್ಸನ್ನು ತನ್ನ ಕಡೆಗೆ ಎಳೆಯದೆ ಎಂದೂ ಬಿಡದು. ಕೃಷಿಕರ ಸೇವೆ ಶ್ರೇಷ್ಠವಾದದ್ದೆಂದು ಸರ್ವ ಸಮ್ಮತವಿರುವದರಿಂದ ಈ ವಿಷಯಕ್ಕೆ ಅನಾದರವನ್ನು ತೋರಿಸದೆ, ಇಂಥ ಮಾಸಪತ್ರಿಕೆಗಳನ್ನು ಆದರಿಸಬೇಕೆಂದು ನಮ್ಮ ಆಗ್ರಹಪೂರ್ವಕ ವಿನಂತಿ. ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ೧-೩-೦

ಸಂಪಾದಕ

ಒಕ್ಕಲಿಗರೂ ಒಕ್ಕಲತನವೂ

ಧಾರವಾಡ

ಜಗತ್ಪ್ರಸಿದ್ಧವಾದ

ಊದು ಬತ್ತಿಗಳು.

ನಮಲ್ಲಿ ಎಲ್ಲಾ ವಿಧವಾದ ಊದು ಬತ್ತಿಗಳು ಸೇರು ೧ ಕ್ಕೆ ೧-೦-೦ ಆಗಾಯಿತ ೩॥ ರೂ. ವಿರವಿಗೂ ಅರಗಜ ಜಲ್ಲೆ, ಸನ್ನಿ ತ, ಶೃಂಗಾರಮಲ್ಲಿಗೆ ತೈಲ, ದಶಾಂಗ, ಇವೇ ಮೊದಲಾದ ಸುಗಂಧ ದ್ರವ್ಯಗಳು ಸೋವಿ ದರಕ್ಕೆ ದೊರೆಯುತ್ತೆ. ಬೇಕಾದವರು ನಮಗೆ ಆರ್ಡರ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿ. ಎಲ್. ಉಪಾಧ್ಯಾಯ ಎಂಡ ಸನ್ಸ.

ಸುಗಂಧಾಧಿಕಾರ ಮೈಸೂರ.

THE ANKALIGI BANK LTD.

Head Office–

Kamankatta Dharwar

Branches

Ranebennur & Hirekerur

5%

Interest allowed on

ANNA SAVINGS BANK

DEPOSIT.

Dharwar } K. B. ANKALIGI
3-1-1927 } Managing Director

—: ಶ್ರೀ ಗುರು ಪ್ರಸನ್ನ :—

ಪ್ರತಿಯೊಬ್ಬ ಕುಟುಂಬಿಕನು ಅವಶ್ಯ ಸಂಗ್ರಹ ಮಾಡತಕ್ಕ ಒಂದೇ ಔಷಧ.

ಭಾಸ್ಕರ ಚೂರ್ಣ.

ಸುಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರ ಸೂಚನೆಯ ಮೇರೆಗೆ ಈ ಚೂರ್ಣವು ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ನಾಲ್ಕು ತರದ ವ್ಯಾಧಿಗಳು ಸ್ವಲ್ಪದರಲ್ಲಿಯೇ ನಾಶಹೊಂದುವವು. ಅಜೀರ್ಣ, ಅಪಚನ, ಆಮಾಂಶ, ಅಗ್ನಿಮಾಂದ್ಯ, ಸಂಗ್ರಹಣಿ, ಹೊಟ್ಟೆಶೂಲೆ, ಹೊಟ್ಟೆನೋವು ಮತ್ತು ಯಾವತರದ ಧಾತುವಿಕಾರಗಳ ಮೇಲೆ ಇದೊಂದೇ ರಾಮಬಾಣ ಔಷಧವಿರುವದು. ಒಂದು ಚಿಮಟಿಗೆಯಷ್ಟು ಈ ಚೂರ್ಣವನ್ನು ಬಾಯಿಯಲ್ಲಿ ಹಾಕಿಕೊಂಡರೆ ಸಾಕು ಪುನಃ ಅರ್ಧತಾಸಿನಲ್ಲಿಯೇ ಹಸಿವೆಯಾಗುವದು. ಬೇನೆಯಿಂದ ಗುಣವಾಗಿದ್ದ ಅಶಕ್ತ ಮನುಷ್ಯರು ಎರಡನೆ ಶಕ್ತಿವರ್ಧಕ ಔಷಧ ತೆಗೆದುಕೊಳ್ಳುವ ಕಾರಣವೇ ಇಲ್ಲ. ಹಳ್ಳಿಗಳಲ್ಲಿಯ ಜನರು ಒಂದು ಭಾಸ್ಕರ ಚೂರ್ಣದ ಡಬ್ಬಿಯನ್ನು ತಮ್ಮ ಹತ್ತರ ಇಟ್ಟುಕೊಂಡರೆ ಸಾಕು ಯಾವತ್ತೂ ಬೇನೆಗಳಿಗೆ ಉಪಯೋಗವಾಗುವದು. ಎಷ್ಟು ದಿವಸದ ಆಮಾಂಶವಿದ್ದರೂ ಮೂರೇ ದಿವಸಗಳಲ್ಲಿ ಗುಣವಾಗುವದು. ಕೇವಲ ವನಸ್ಪತಿಯಿಂದಲೇ ತಯಾರಿಸಿದ್ದ ಈ ಸಿದ್ಧೌಷಧವನ್ನು ಪ್ರತಿಒಬ್ಬನೂ ಅವಶ್ಯ ಸಂಗ್ರಹದಲ್ಲಿಡತಕ್ಕದ್ದು. ಒಂದು ಡಬ್ಬಿಯ ಕಿಮ್ಮತ್ತು ೧೦ ಆಣೆ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಪೋಸ್ಟೇಜ ಬೇರೆ ಸ್ವಾ. ವಾ. ೧ ಆಣೆ.

ಏಜಂಟ— ಬಿ. ಬಿ. ಟಿಕಾರೆ ಎಂಡ ಸನ್ಸ, ಮಾರ್ಕೆಟರೋಡ ಧಾರವಾಡ.

೧೦೦ ಕ್ಕೆ ಒಂದು ವರ್ಷಕ್ಕೆ ಒಂದು ರೂಪಾಯಿ ಬಡ್ಡಿ ದರ.

ದಿ ಪೀಪಲ್ಸ ಓನ ಪ್ರಾವಿಡೆಂಟ ಎಂಡ ಜನರಲ ಇನ್ಸೂರನ್ಸ

ಕಂಪನಿ, ಲಿಮಿಟೆಡ ಪುಣೆ.

(Life) ಜೀವವಿಮಾ– ಪ್ರೀಮಿಯಮ ದರ ತಿಂಗಳಿಗೆ ೨ ರೂ, ೧ ರೂ, ಮತ್ತು ೮ ಆಣೆ, ೧೦ ವರ್ಷಗಳ ಮೇಲೆ ಬೋನಸ ಮತ್ತು ಲಾಭ ಸಹಿತ ರಕಮು ಸಿಗುವದು.

Marriage ಲಗ್ನಶಾಖೆ– ದರ ತಿಂಗಳಿಗೆ ೨ ರೂಪಾಯಿಯಂತೆ ಪ್ರೀಮಿಯಮ ಕೊಡಬೇಕಾಗುವದು. ಲಗ್ನದ ವೇಳೆಗೆ ರೂಪಾಯಿ ಕೊಡಲಾಗುವದು.

(Loan) ಸಾಲದಶಾಖೆ– ೧೦೦ ಕ್ಕೆ ವರ್ಷಕ್ಕೆ ಒಂದೇ ರೂಪಾಯಿ ಬಡ್ಡಿ ದರದ ಮೇಲೆ ೫೦ ರಿಂದ ೫೦೦೦ ರೂಪಾಯಿಗಳ ವರೆಗೆ ಜಾಮೀನು ಇಲ್ಲದೆ ಸಾಲ ದೊರೆಯುವದು.

ಧಾರವಾಡ ಜಿಲ್ಹೆಯ ಎಲ್ಲ ತಾಲೂಕುಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ. ಉತ್ಸಾಹೀ ಜನರಿಗೆ ಯೋಗ್ಯ ಕಮಿಶನ ದೊರೆಯುವದು.

ಪತ್ತೆ— ಡಾ|| ನಾಡಗೀರ ವ್ಹಿ. ಜಿ. (ಹೋಮಿಯೋ) ಎಮ್. ಬಿ. ಹಿರೇಕೇರೂರ ದಿ|| ಧಾರವಾಡ.

ನೋಟೀಸಿನ ದರಗಳು.

—o—

ತಿಂಗಳು ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದು ಆಣೆ ಇಂಗ್ಲಿಷ ಪಂಕ್ತಿಯೊಂದು ಒಳಗೆ ಐದು ಆಣೆ ದರದಿಂದ, ಮ್ಯುನಿಸಿಪಾಲಿಟಿ ಲೋಕಲಬೋರ್ಡ ಇವುಗಳ ದ್ವಾರ ಮುಂತಾದ ಸಾರ್ವಜನಿಕ ನೋಟೀಸುಗಳಿಗೆ ಸಾ ೦ ಗೆ ಮೂ ರಾ ಣೆ— ಇಂಗ್ಲಿಷದಿಂದ ಅವತರಣಿಕೆ ಕನ್ನಡದಲ್ಲಿ ಹಾಕುವದಿದ್ದರೆ ಅರೆ ಆಣೆ ಹೆಚ್ಚು. ಕಾಲಮಿನ ಒಳಗೆ ಅಮ್ಮದಿ ಜಾಹೀರಾತುಗಳನ್ನು ಕೊಡುವವರು ಕೇಳಿದ ಕಕ್ಷಿಯಲ್ಲಿ ಪತ್ರವ್ಯವಹಾರ ಮಾಡಬಹುದು

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ

—o—

ಸಪ್ಟಂಬರ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ಕಾರ್ಯ ಮತ್ತು ವಾರಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕರಿಸಿ ವಿಜಯವನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಿಜಯ ಮುದ್ರಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು

R. N. B. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಆಚಾರ್ಯ ಬಾಳಾಚಾರ್ಯ ಹೊಸಕೇರಿ

ವರ್ಷ ೯) ಧಾರವಾಡ ರವಿವಾರ ತಾರೀಖು ೧೬ ನೇ ಸಪ್ಟಂಬರ ೧೯೨೮ (ಸಂಚಿಕೆ ೩೧೦

ದಿ ಜಯಲಕ್ಷ್ಮಿ ಬ್ಯಾಂಕ ಲಿಮಿಟೆಡ, ಧಾರವಾಡ

ಸ್ಥಳ- ಮಂಗಳವಾರಪೇಟೆ, ಅತವಲೆ ವಕೀಲ ಪಾಂಡುರಂಗರಾಯರ ಮನೆ.

೧ ಈ ಬ್ಯಾಂಕಿನಲ್ಲಿ ದಾಗೀನೆಗಳ ಮೇಲೆ ಸೋಯಿ ದರದಿಂದ ತುಸು ಮತ್ತು ಜಪಳ ಮುದ್ದತಿಯ ತನಕ ಸಣ್ಣ ರಕಮಿನಿಂದ ಬೇಕಾದಷ್ಟು ದೊಡ್ಡ ರಕಮಿನ ತನಕ ಸಾಲ ದೊರೆಯುವದು. ಬಡ್ಡಿಯ ದರ ಸುಲಭ ಸಮಕ್ಷಮ ತಿಳಕೊಳ್ಳಬೇಕು.

೨ ಸರಕಾರಿ ಪ್ರಾಮಿಸರಿ ನೋಟುಗಳ ಖರೀದಿ, ವಿಕ್ರಿ ನಡೆಯುವದು. ಅವುಗಳ ಮೇಲೆ ಸಾಲ ದೊರೆಯುವದು. ಮತ್ತು ಯೋಗ್ಯ ಕಮಿಶನ ತಕ್ಕೊಂಡು ಗಿರಾಕಿಗಳಿಗೆ ಲಾಭಕರವಾಗಿ ಅವುಗಳ ಮಾರಾಟ ಮಾಡಿ ಕೊಡಲ್ಪಡುವದು.

೩ ಮುದ್ದತಿ ಠೇವಿನ ಹಣವನ್ನು ಇಟ್ಟುಕೊಳ್ಳಲಾಗುವದು. ಸ್ವಲ್ಪ ರಕಮಿನಿಂದ ದೊಡ್ಡ ರಕಮಿನ ತನಕ ಇಟ್ಟುಕೊಳ್ಳಲಾಗುವದು. ಬಡ್ಡಿಯ ದರವನ್ನು ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

೪ ಈ ಬ್ಯಾಂಕಿನ ಶೇರುಗಳು ಮಾರಾಟಕ್ಕೆ ದೊರೆಯುವವು.

೫ ಬ್ಯಾಂಕಿಗೆ ಸಂಬಂಧಿಸಿದ ಚಾಲತಿ ವ್ಯವಹಾರ ಮೊದಲಾದ ಎಲ್ಲ ಕೆಲಸಗಳು ನಡೆಯುವವು. ವಿಶೇಷ ಸಂಗತಿಗಳನ್ನು ಆಫೀಸಿನ ವೇಳೆಯಲ್ಲಿ ಸಮಕ್ಷಮ ಅಥವಾ ಪತ್ರವ್ಯವಹಾರದಿಂದ ತಿಳಕೊಳ್ಳಬೇಕು.

ಕೃಷ್ಣರಾವ ವೆಂಕಟರಾವ ಭಂಡಿವಾಡ.
ಮ್ಯಾನೇಜಿಂಗ ಏಜಂಟ.

ಬಾಲ ನಟರ ಆನಂದ ಸಂಗೀತ ನಾಟಕ ಮಂಡಳಿ

ಶನಿವಾರ ತಾ. ೧೫ ಸಪ್ಟಂಬರ ೧೯೨೮ ನೇ ರಾತ್ರಿ

ಶ್ರೀ ಅನ್ನಪೂರ್ಣಾ ಥಿಯೆಟರದಲ್ಲಿ

ರವಿವಾರ ತಾ. ೧೬ನೇ ಸಪ್ಟಂಬರ ೧೯೨೮ ಹಗಲು ೪॥ ಘಂಟೆಗೆ.

ಬ್ರಹ್ಮಘೋಟಾಳ.

ಮ್ಯಾ. ಆ. ಸಂ. ನಾ. ಮಂಡಳಿ.

ದಿ ಧಾರವಾಡ ಅರ್ಬನ ಕೋಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಏಳು ಲಕ್ಷದ ಮೇಲುಂಟು. ಚಳತ ಕುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ಮಾಡಲ್ಪಡುವದು. ಶಾಹೀಮ ಮತ್ತು ಬೇರೆ ತರದ ಠೇವು ಜಟಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀ,
ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣೀ ದರ.

ನಿತ್ಯ ಪತ್ರಿಕೆ	
೧೨ ತಿಂಗಳಿಗೆ	೧೨-೮-೦ ರೂ.
೬ ,,	೭-೦-೦
೪ ,,	೪-೦-೦
ವಾರ ಪತ್ರಿಕೆ ೧ ವರ್ಷಕ್ಕೆ	೩-೧೨-೦

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾ. ವಿಜಯ ಧಾರವಾಡ

ವಿಜಯ.

ಧಾರವಾಡ ತಾ- ೧೬-೯-೨೮ ನೇ ಇಸ್ವಿ.

ಶ್ರೀ.

ಅ-ವಿಜಯಂ ಶ್ರೀಶ್ರೀಯ |
ಇ, ಹೃದಯಮಂ ನಲಿಸಿರೆ ಸುಹೃಜ್ಜನರೆಲ್ಲಂ ||
ಈ "ವಿಜಯಂ" ಶ್ರೀಕರಂ |
ಸ್ಥಾವಿಹಿತಂಗಳ ತಿವಾಸಿಸಲಿಷ್ಟದು ಸಾಜಂ ||

ಬೊಲ್ಶೆವಿಕ ಭೂತವನ್ನು ಹೊರಗೆ ಹಾಕುವ ಕಾಯದೆ.

ಹಿಂದುಸ್ಥಾನ ಸರಕಾರದವರು ಬೊಲ್ಶೆವಿಕ ಭೂತವನ್ನು ಹೊರಗೆ ಹಾಕಬೇಕೆಂಬ ಉದ್ದೇಶದಿಂದ ಠಾವಲೆಟ್ಟ ಅಕ್ಟಿನಂಥ ಒಂದು ಕಾಯದೆ ಮಾಡಬೇಕೆಂದಿದ್ದಾರೆಂಬ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಈ ಕಾಯದೆಯು ವಾದವಿವಾದವು ಅಸೆಂಬ್ಲಿಯಲ್ಲಿ ನಡೆದಿದ್ದು, ಅದರ ಪರಿಣಾಮವು ಇಂದು ನಾಳೆ ಪತ್ರರಲ್ಲಿ ತಿಳಿಯತಕ್ಕದ್ದುಂಟು.

ಸರಕಾರದವರು ಈ ಕಾಯದೆಯನ್ನು ಮಾಡುವಾಗ ಒಂದು ಮಹತ್ವದ ಸಂಗತಿಯನ್ನು ಈಗ ಹೇಳಿ, ಮತ್ತೊಂದು ಮಹತ್ವದ ಸಂಗತಿಯನ್ನು ಬಚ್ಚಿಟ್ಟಿದ್ದಾರೆಂದು ಲೋಕಪಕ್ಷದ ಸಾಮಾನ್ಯವಾದ ತಿಳುವಳಿಕೆಯಾಗಿದೆ. ಈಗಿನ ಕಾಯದೆಯು ಉದ್ದೇಶವು- ಹೊರಗಿನಿಂದ ಬರುವಂಥ ಬೊಲ್ಶೆವಿಕರನ್ನು ಅಸೆಂಬ್ಲಿ ನೋಡದೆ ಹೊರಗೆ ದಬ್ಬಿ ಕೊಡುವದಾಗಿದೆ. ಪರದೇಶಗಳಿಂದ ಬರುವಂಥವರು ರಶಿಯಾ, ಫ್ರಾನ್ಸ, ಚೀನ, ಜಪಾನದವರಲ್ಲ. ಇಂಗ್ಲೀಷರೇ. ಇವರನ್ನು ಹಿಂದುಸ್ಥಾನದ ಹೊರಗೆ ಹಾಕಬೇಕಾದರೆ- ಕಾಯದೆ ಬೇಕಾಗಿದೆ, ಆರೋಪ ಹೊರಿಸಿ, ಕೋರ್ಟಿನಲ್ಲಿ ವಿಚಾರಣೆ ನಡಿಸಿ, ಆರೋಪ ಸಿದ್ಧಮಾಡಿ, ಅನಂತರ ದಬ್ಬಿ ಕೊಡುವ ಪ್ರವಿಧಿ ಪ್ರಾಣಾಯಾಮ ಮಾಡುವದಕ್ಕಿಂತ ಕಾಯದೆಯ ಬಲದಿಂದಲೇ ದೂಡಿಕೊಡಬೇಕೆಂದು ಪ್ರತ್ಯಕ್ಷದ ಉದ್ದೇಶವಾಗಿದೆ.

ಇಂದು ಪಂಕ್ತಿಯರ ದೆಸ್ಸೆಯಿಂದ ಕಾಯದೆ ಮಾಡಿದವರು ನಾಳೆ ಹಿಂದೀ ಜನರ ದೆಸೆಯಿಂದಲೂ ಏಕೆ ಮಾಡಲಾರರೆಂದು, ಅಸೆಂಬ್ಲಿಯ ಮೆಂಬರಾದ ಶ್ರೀ. ರಂಗಯ್ಯರರು ಅಳರಸರಿಗೆ ಸವಾಲು ಹಾಕಿದ್ದಾರೆ. ಪಂಡಿತ ಜವಾಹರಲಾಲ ನೆಹರು, ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರು ನಾವು ಬೆಳವಿ ಮೊದಲಾದವರು ಹಿಂದುಸ್ಥಾನವು ಸಂಪೂರ್ಣ-ಸ್ವಾತಂತ್ರ್ಯದ್ದಾಗಬೇಕೆಂಬ ಪಂಥ ಹಿಡಿದಿದ್ದಾರೆ. ಇವರನ್ನೂ ದೇಶಾಂತರಕ್ಕೆ ಕಳಿಸಬೇಕೆಂದು, ಮುಂದೆ ಈ ಕಾಯದೆಯಲ್ಲಿ ದುರಸ್ತಿಯನ್ನು ಏಕೆ ಮಾಡಲಾರರೆಂದು ಶ್ರೀ. ಅಯ್ಯರರು ಮಾಡಿದ ಪ್ರಶ್ನವು ಸಮಯೋಚಿತವಾಗಿರುತ್ತದೆ. ಒಮ್ಮೆಂದೊಮ್ಮೆ, ಹೇಳದೆ- ಕೇಳದೆ ತಮಗೆ ಸಂಶಯ ಬಂದಿತೆಂದು ಯಾವನೊಬ್ಬನನ್ನು ಹದ್ದುಪಾರು ಮಾಡುವ ಕಾಯದೆಯು ಜಗತ್ತಿನಲ್ಲಿ ಯಾವ ದೇಶದಲ್ಲಿಯೂ ಇಲ್ಲ. ಅಂಥ ಗಹನ ಕಾಯದೆ ಮಾಡಿ, ಹಿಂದುಸ್ಥಾನ ಸರಕಾರವು ಹೆಸರು ಪಡೆಯಬೇಕೆಂದಿರುತ್ತದೆ.

ರಶಿಯಾ ರಾಜ್ಯವು ತೀರ ಬೇಬಂದಶಾಹಿಯಾಗಿರುತ್ತದೆಂದು ಪಾಶ್ಚಿಮಾತ್ಯ ರಾಜರ ಪೂರ್ಣ ತಿಳುವಳಿಕೆ. ಇಂಥ ಅನಾಯಕತನದ ರಾಜ್ಯವು ಹತ್ತು ವರ್ಷ ಹೇಗೆ ನಡೆಯಿತೆಂದು ಯಾರೂ ಹೇಳುವದಿಲ್ಲ. ಎಂಟೇ ದಿವಸವಾಗಲಿ; ಅಲ್ಲಿಯ ಸ್ಥಿತಿಯ ಅವಲೋಕನ ಮಾಡಿದ ಪಂಡಿತ ಜವಾಹರಲಾಲರ ತರುವಾಯಾ- ಶ್ರೀನಿವಾಸ ಅಯ್ಯಂಗಾರರು ಅಲ್ಲಿಗೆ ಹೋಗಿ ಬಂದಿದ್ದಾರೆ. ಅವರು ಅಸೆಂಬ್ಲಿಯಲ್ಲಿಯೇ ಆ ಸ್ಥಿತಿಯ ವರ್ಣನೆಯನ್ನು ಮುಂದೆ ಕೊಟ್ಟಂತೆ ಮಾಡಿದ್ದಾರೆ; —

ರಶಿಯಾದ ರಾಜ್ಯಸ್ಥಿತಿಯು ಸುಧಾರಣೆ ಹೊಂದಿದೆ. ಬಂಡವಲಗಾರ ಮತ್ತು ಕೂಲಿಕಾರರೆಂಬುವರಲ್ಲಿ ಒಡಂಬಡಿಕೆಯಾಗಿ ವ್ಯವಹಾರವು ಸುರಳೀತವಾಗಿ ನಡೆದಿದೆ. ದೇವಾಲಯಗಳಲ್ಲಿ ಜನ ಭರತಿಯಿದ್ದು, ನಿತ್ಯಕ್ರಮದಂತೆ ಪ್ರಾರ್ಥನೆಗಳು ನಡೆಯುತ್ತವೆ. ಮುಸಲಮಾನರಿಗೆ ಮೌಲ್ವಿಗಳಿಂದಲೇ ಧರ್ಮ ಶಿಕ್ಷಣ ದೊರೆಯುತ್ತದೆ. ದೇವರು ಬಂಡವಲಗಾರರ ದೇವರಾಗಿಲ್ಲ. ಆಯಾ ಪ್ರಾಂತಗಳಿಗೆ ಸ್ವರಾಜ್ಯ ಸ್ವಾತಂತ್ರ್ಯ ಕೊಟ್ಟಿದ್ದಾರೆ ಪ್ರಾಂತಗಳನ್ನು ಭಾಷೆಯ ಪ್ರಕಾರ ವಿಂಗಡಿಸಿದ್ದಾರೆ".

ರಶಿಯಾ ರಾಜ್ಯ ಸುಧಾರಣೆಯು ಮೇಲಿನಂತಿದ್ದು, ಅದರಲ್ಲಿ ಕೆಲ ಭಾಗಗಳನ್ನಾದರೂ, ಹಿಂದುಸ್ಥಾನ ಸರಕಾರದವರು ಅನುಕರಣದಲ್ಲಿ ತಂದು ರಶಿಯಾಕ್ಕೆ ಹೆಸರಿಡುವದು ಲೇಸು. ಇದು ಹೇಗೇ ಇರಲಿ; ಅನ್ಯಾಯವಾಗಿ ಒಬ್ಬನನ್ನು ಹದ್ದುಪಾರ ಮಾಡಬೇಕೆಂಬ ಕಾಯದೆಯು ಘೋರವಾದ ಬದಲಾಗಿ ದೂಷಣ ತರುತ್ತದೆಂತಲೇ ಆಳರಸರು ಮುಂದಿನವಾಗಿ ತಿಳಿಯತಕ್ಕದ್ದು.

ಅಹಮದಾಬಾದಿನಲ್ಲಿ ಸರಕಾರೀ ಮತ್ತು ಮಹಾರಾಜಾ ಹಾಯಸ್ಕೂಲಿನ ವಿದ್ಯಾರ್ಥಿಗಳಿಗೆ ಇಷ್ಟದ ಸ್ಥಳದ ದೆಸೆಯಿಂದ ಹೊಡದಾಟವಾಗಿ ಒಬ್ಬನು ಸತ್ತನು, ಇಬ್ಬರು ಮರಣೋನ್ಮುಖರಾಗಿದ್ದಾರೆ.

ಸ್ವಾಮುದಾರ ಬೆಳವಿಯವರು ಸ್ವಾತಂತ್ರ್ಯ ಸಂಘದ ಮೆಂಬರರಾದರು.

—(೦)—

ಪಂಡಿತ ಜವಾಹಿರಲಾಲ ನೆಹರುರವರು ಹಿಂದುಸ್ಥಾನವು ಸಂಪೂರ್ಣ ಸ್ವತಂತ್ರವಾಗಬೇಕೆಂದು ಕಾಂಗ್ರೆಸಾಂತರ್ಗತವಾಗಿ ಸ್ಥಾಪಿಸಿದ ಲೀಗದೆಯಲ್ಲಿ ಅಸೆಂಬ್ಲಿಯ ಅನೇಕ ಜನ ಮೆಂಬರರೂ ಮೆಂಬರರಾಗಿದ್ದಾರೆ. ಅವರ ಹೆಸರುಗಳು—

೧ ಶ್ರೀನಿವಾಸ ಅಯ್ಯಂಗಾರ ೨ ರಂಗಸ್ವಾಮಿ ದಾವುದಿ ೩ ಶೇಷಅಯ್ಯರ ೪ ರಾಮನಾರಾಯಣಸಿಂಗ ೫ ಸಯ್ಯದ ಮುರ್ತುಜಾ ಯುಸಫ ಇಮಾಮ ೬ ದತ್ತಾತ್ರಯ ವೆಂಕಟೇಶ ಬೆಳವಿ ೭ ನೀಲಕಂಠದಾಸ ಜಮನಾದಾಸ ಮೆಹ್ತಾ ೮ ಎಸ್, ಸಿ, ಮಿತ್ರ ೯ ದೊರೈಸ್ವಾಮಿ ಅಯ್ಯಂಗಾರ ೧೦ ರಂಗ ಅಯ್ಯರ ೧೧ ಎಸ್, ಸಿ, ಚಂದರ ೧೨ ಪಿ, ಸಿ, ರಾಯ ೧೩ ನಾಯುಡು ೧೪ ಕೆಮರನಾಥ ದತ್ತ, ೧೫ ಕಿಡವಾಯಿ, ವ್ಹಿ, ವ್ಹಿ, ಜೋಗೆಯ್ಯಾ

ಇವರ ಹೊರ್ತು ಇನ್ನೂ ಅನೇಕ ಜನರು ಮೆಂಬರರಾಗತಕ್ಕವರಿದ್ದಾರೆ. ೨೦ ವರ್ಷಗಳ ಹಿಂದೆ ಹೋಮರೂಲಿನ ಚಳವಳಿಯ ಪ್ರಾರಂಭದಲ್ಲಿ ಒಬ್ಬ ಸಾಹೇಬರು ನಾಮದಾರ ಬೆಳವಿಯವರಿಗೆ ನಿಮಗೆ ಹೋಮ ರೂಲ ಬೇಕೆಂದು ಪ್ರಶ್ನ ಮಾಡಲು- ನನ್ನ ಮಗನು ಕಲೆಕ್ಟರನಾಗಬೇಕೆಂದು ಇವರು ಉತ್ತರ ಕೊಟ್ಟಿದ್ದರು. ಈಗ ಸಂಪೂರ್ಣ ಸ್ವಾತಂತ್ರ್ಯವನ್ನು ಬಯಸುವದರಿಂದ, ತಮ್ಮ ಮಗನು ಇಂಗ್ಲಂಡ ಅಮೇರಿಕೆ ಅಥವಾ ರಶಿಯಾದಲ್ಲಿ ಹಿಂದುಸ್ಥಾನದ ರಾಯಭಾರಿಯಾಗಬೇಕೆಂಬ ಮಹತ್ವಾಕಾಂಕ್ಷೆ ಪಡೆದಿರಬೇಕೆಂದು ಧ್ವನಿತವಾಗುವದಿಲ್ಲವೇ?

ಕೌನ್ಸಿಲ ಮೆಂಬರನಿಗೆ ಸಗಣಿಯ ಪೂಜೆ!

—(೦)—

ಸಿಲೋನ ಅಸೆಂಬ್ಲಿಯ ಸಂಬಂಧವಾದ ಮಿ ನಟೇಶ ಅಯ್ಯರರು ಕೋಲಂಬದಲ್ಲಿ ಸಾಯಂಕಾಲದಲ್ಲಿ ಒಂದು ಕೂಟದಲ್ಲಿ ಹೊರಳುವಾಗ, ಅಡಗಿಕೊಂಡಿದ್ದ ಇಬ್ಬರು ಇವರನ್ನು ಸಗಣಿಯಿಂದ ಬಹುವಾಗಿ ಪೂಜೆಮಾಡಿ, ಪಲಾಯನ ಹೇಳಿಸಿದರು. ಅಯ್ಯರರು ಈ ಶೃಂಗಾರದ ಬಟ್ಟೆಗಳಲ್ಲಿಯೇ ಪೋಲೀಸ ಸ್ಟೇಶನಕ್ಕೆ ಹೋಗಿ, ಫಿರ್ಯಾದಿ ಕೊಟ್ಟಿದ್ದಾರೆ.

ನೆಹರು ಕಮೀಟಿಯು ಮಾಡಿದ ಸಾಯಮನ್ನ ಕಮೀಶನದವರು ಸ್ಥಿತಿಯ ಪರಿಭಾಷಣೆ ಮಾಡಬೇಕೆಂದು ವಿಲಾಯತಿಯ ಕಾಮಗಾರರ ಪಕ್ಷದ ಪ್ರಮುಖರು ಪ್ರಯತ್ನ ಮಾಡುವರೆಂದು ಪ್ರಸಿದ್ಧವಾಗಿದೆ

ಸರ ವಿಶ್ವೇಶ್ವರಯ್ಯನವರ ಕಮಿಟಿ

ಮುಸಲಮಾನ ಪೋಲಿಸಸಾಹೇಬರ ಸಾಕ್ಷಿ.

ಎಲ್ಲಾದಕ್ಕೂ ನೋ? ನೋ? ಉತ್ತರ.

ಬುಧವಾರ ದಿವಸ ಬೆಂಗಳೂರಲ್ಲಿ ಸರ ವಿಶ್ವೇಶ್ವರಯ್ಯನವರ ಕಮಿಟಿಯು ದಂಗೆಯ ಸಂಬಂಧವಾಗಿ ಸಾಕ್ಷಿಗಳನ್ನು ತಕ್ಕೊಳ್ಳುವದಕ್ಕೆ ಪ್ರಾರಂಭ ಮಾಡಿತು. ಸರಕಾರೀ ಆಗಲಿ; ಇತರ ಗೃಹಸ್ಥರಾಗಲಿ ಸಾಕ್ಷಿಯನ್ನು ನಿರ್ಭಿಡೆಯಿಂದ ಕೊಡಬೇಕು. ಅವರಿಗೆ ಸರಕಾರದಿಂದ ಯಾವ ಭಯ- ತ್ರಾಸ- ಹಿಂಸೆಯಾಗಲಾರದೆಂಬ ಸರ ವಿಶ್ವೇಶ್ವರಯ್ಯನವರು ಜಾಹೀರ ಪ್ರಾರಂಭದಲ್ಲಿ ಮಾಡಿದನಂತರ- ದಂಗೆಗೆ ಮುಖ್ಯ ಕಾರಣವಾದ ಸುಲ್ತಾನಪೇಟೆಯ ಇಂಗ್ಲಿಷ ಶಾಲೆಯ ಕೃಷ್ಣನ್ನ ಹೆಡ್ಡಮಾಸ್ತರರಾದ ಮಿ. ಜಾನ ಅಪ್ಪಾಜಿಯವರ ಮೊದಲನೆಯ ಸಾಕ್ಷಿಯಾಯಿತು. ಗಣಪತಿಯನ್ನು ಪುನಃ ಪ್ರತಿಷ್ಠಾಪನೆ ಮಾಡಬಾರದೆಂದು ತಮಗೆ ವಿದ್ಯಾಖಾತೆಯ ಇನ್ಸಪೇಕ್ಟರ ಜನರಲ್ಲರಿಂದ ಗುಪ್ತವಾಗಿ ಹುಕುಮು ಬಂದಿತ್ತೆಂಬ ಇವರು ಕಬೂಲಿ ಜವಾಬು ಕೊಟ್ಟರು. ಇವರ ಸಾಕ್ಷಿಯಲ್ಲಿ ಇದೇ ಮಹತ್ವದ ಭಾಗವು.

ಇವರ ನಂತರ ಪೋಲೀಸ ಸುಪರಿಂಟೆಂಡೆಂಟರಾದ ಮಿ. ಸುರಾಜುದ್ದೀನಸಾಹೇಬರ ಸಾಕ್ಷಿಯಾಯಿತು. ಇವರು ಪ್ರತಿಯೊಂದು ಪ್ರಶ್ನಕ್ಕೂ ನಕಾರದ ಉತ್ತರ ಕೊಟ್ಟಿದ್ದಾರೆ. ಇವರು ಅಂದದ್ದು- ನಾನು ದಂಗೆಯ ವೇಳೆಯಲ್ಲಿ ಹಾಜರಿದ್ದೆನು. ದಂಗೆ ಶಾಂತ ಮಾಡಲು ಯಾವ ಉಪಾಯ ಮಾಡಲಿಲ್ಲ. ಏಕಂದರೆ- ಏನಾದರು ಕೆಲಸ ಮಾಡಲಿಕ್ಕೆ ಮೇಲಧಿಕಾರಿಗಳ ಹುಕುಮು ಬೇಕಾಗಿತ್ತು.

ಪ್ರ- ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಅಪ್ಪಣೆ ಪಡೆಕೊಳ್ಳಬೇಕಾಗಿತ್ತಲ್ಲವೇ?

ಉ- ನೋ

ಪ್ರ- ದಂಗೆ ಶಾಂತ ಮಾಡಲು ನಿಮ್ಮ ಖಾತೆಯ ಇನ್ಸಪೇಕ್ಟರ ಜನರಲ್ಲರಿಂದಾದರೂ ಹುಕುಮು ಕೇಳಿಕೊಂಡಿರೇನು?

ಉ- ನೋ.

ಪ್ರ- ದಂಗೆ ನಡೆದದೆಂದು ಅವರಿಗೆ ತಿಳಿಸಿದಿರಾ?

ಉ- ನೋ- ಅವರೇ ನನಗೆ ಹಿಂದೂ ಜನರು ಮುಸಲಮಾನರನ್ನು ಹೊಡೆಯುತ್ತಾರೆಂದೂ ಮಸೀದೆಗಳ ಮೇಲೆ ಕಲ್ಲೊಗೆಯುತ್ತಾರೆಂದೂ ಹೇಳಿದರು.

ಪ್ರ- ಹಿಂದೂ ಅಥವಾ ಮುಸಲಮಾನರು ನಿಮಗೆ ಗಾಯಗಳನ್ನು ತೋರಿಸಿದ್ದರೇ?

ಉ- ನೋ.

ಪ್ರ- ತಕರಾರು ಅಥವಾ ಅರ್ಜಿ?

ಉ- ನೋ.

ಪ್ರ- ಹಿಂದೂ ಜನರು ಮುಸಲಮಾನರನ್ನು ಹೊಡೆಯುವದನ್ನು ನೋಡಿದಿರಾ?

ಉ- ನೋ.

ಪ್ರ- ಹಿಂದೂ ಜನರು ಮುಸಲಮಾನರನ್ನು ಹೊಡೆಯುವದನ್ನು ನೋಡಿದಿರಾ?

ಉ- ನೋ. ಮುಸಲಮಾನರು ಬಡಿಗೆ ಬೊಣ್ಣೆಗಳನ್ನು ಹಿಡಕೊಂಡಿದ್ದರು. ದಿವಾನರಿಗೆ ಹೊಡತ ಬಿದ್ದವೇನೆಂದು ನನ್ನನ್ನು ಕೇಳಿದರು. ತುಸು ಚಿಮರಿಕೊಂಡಂತಾಗಿದೆ. ಹೊಂಟುಹೋಗಿರೆಂದು ನಾನು ಅವರಿಗೆ ಹೇಳಿದೆನು. ಆದರೆ ಇವರಲ್ಲಿ ನಾನು ಒಬ್ಬನನ್ನೂ ಗುರ್ತಿಸಲಾರೆನು.

ಪ್ರ- ಹಿಂದೂ ಜನರ ತಕರಾರವೇನಿತ್ತು?

ಉ- ಮುಸಲಮಾನರು ತಮ್ಮನ್ನು ಹೊಡೆಯುತ್ತಾರೆಂದು?

ಪ್ರ- ಗುಂಡು ಹಾರಿದ ಬಗ್ಗೆ ನಿಮಗೆ ಯಾರಾದರೂ ಹೇಳಿದರೇ?

ಉ- ಇಲ್ಲ. ಮುಸಲಮಾನರು ಬೇಕಾಯಿದೇಶೀರ ಟೋಳಿಯುವರಾಗಿಲ್ಲ. ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಬೇಕಾಯಿದೇಶೀರ ಎಂದು ಹೇಳಿದ್ದೇನೆ. ಆ ಜವಾಬು ಇಲ್ಲಿ ಹಿಂದೆ ತಕ್ಕೊಳ್ಳುತ್ತೇನೆ.

ಪ್ರ- ದಂಗೆಗಾರರನ್ನೇಕೆ ಹಿಡಿಯಲಿಲ್ಲ?

ಉ- ಸಮಯವಿರಲಿಲ್ಲ.

ಪ್ರ- ಒಬ್ಬ ಪೋಲೀಸ ಕಾಮದಾರನನ್ನು ದಂಗೆಗಾರರು ಹೊಡೆಯುತ್ತಾರೆಂದು ತಿಳಿದಾಗ ಅವರನ್ನು ಹಿಡಿಯಲು ನಿಮಗೆ ಮೇಲಧಿಕಾರಿಗಳಿಂದ ಹುಕುಮು ಬೇಕೇ?

ಉ- ಇಂಥ ಅಪರಾಧವಾಗಿದೆಂದು ಅರ್ಜಿ ಇರಲಿಲ್ಲ. ಕಾರಣ ಯಾರನ್ನೂ ಹಿಡಿಯಲಿಲ್ಲ. ಅಸಿಸ್ಟಂಟ ಸುಪ|ನಾಹೇಬನು ಅಲ್ಲಿದ್ದದರಿಂದ ನಾನು ಯಾರನ್ನೂ ಹಿಡಿಯುಹೋಗಲಿಲ್ಲ.

ಪ್ರ- ದಿವಾನರನ್ನು ಹೊಡೆದಿರುತ್ತಾರೆಂದು ಕೇಳಿಯೂ ನೀವು ಜನರನ್ನು ದಸ್ತಗಿರಮಾಡಕೂಡದೇ?

ಉ- ನಾನು ಒಂಟಿಗನಾಗಿದ್ದೆನು.

ಪ್ರ- ಅವರ ಹೆಸರು ಬರಕೊಳ್ಳುವದಕ್ಕೆ ನಿಮಗಾವ ತೊಂದರೆಯಾಯಿತು?

ಉ- ಹತ್ತರ ಪೆನಸಿಲ ಇದ್ದಿಲ್ಲ. ಮತ್ತು ಅವಸರ ಸ್ಥಳದಲ್ಲಿದ್ದೆನು.

ಇದೇ ಪ್ರಕಾರ ಇತರರೂ ನಕಾರದ ಜವಾಬು ಕೊಟ್ಟಿದ್ದಾರೆ.

ಕಾಲೇಜ ಹಾಯಸ್ಕೂಲಿನ ಫೀ ಹೆಚ್ಚುವದು ನಿಂತಿತು.

—(o)—

ಹಾಯಸ್ಕೂಲು ಮತ್ತು ಕಾಲೇಜುಗಳಲ್ಲಿ ಫೀಯನ್ನು ಹೆಚ್ಚಿಸುವದರಿಂದ, ಮಧ್ಯಮ ಪ್ರತಿಯ ಮತ್ತು ಬಡಸ್ಥಿತಿಯ ಜನರ ಮೇಲೆಯೆ ಭಾರ ಬೀಳುವ ಮೂಲಕ- ಅದನ್ನು ಹೆಚ್ಚುವ ವಿಚಾರವನ್ನು ಮುಂಬಯಿ ಸರಕಾರದವರು ರಹಿತ ಪಡಿಸಿದುತೆ ಪ್ರಸಿದ್ಧವಾಗಿದೆ.

ಜಳಗಾವಿನಲ್ಲಿ ಟಿಳಕ ಪಂಚಾಂಗ ಪ್ರಕಾರ ಗಣಪತ್ಯುತ್ಸವ ಮಾಡಿದ್ದಕ್ಕೆ ಶಿ.ಭವಾನಿಲಿಲ್ಲ. ಅಲ್ಲಿ ಸಾರ್ವಜನಿಕವಾಗಿ ಕೂಡಿಸಿದ ಗಣಪ್ಪನ ಹುದರಗವು ಎರನೆಯ ದಿವಸ ಬಿದ್ದು, ಗಣಪ್ಪನು ಚೂರುಚೂರಾದನು. ಸಾರ್ವಜನಿಕ ಮೆರವಣಿಗೆಯ ಬದಲಾಗಿ ಸದ್ದಿಲ್ಲದೆ ಒಂದು ಬಾವಿಯಲ್ಲಿ ಬಿದ್ದು ಜಲಸಮಾಧಿ ಹೊಂದಿದನು.

೧೯೩೦ ನೇಯ ಇಸವಿಯ ನಂತರ ಯಾವ ಇಲಾಖೆಯಲ್ಲಿಯೂ ಕೌನ್ಸಿಲದ ಮಂಜೂರಿ ಪಡಕೊಂಡು ರವ್ವಿಜನಮಾಡಿ, ಹಪ್ತೆ ಏರುವ ಗುಪ್ತ ಸನ್ನಾಹ ನಡೆಯಬಾರದೆಂದು ಕೌನ್ಸಿಲ ಅಫ ಸ್ಟೇಟದಲ್ಲಿ ಶ್ರೀ ರಾಮದಾಸಪಂತಲುನವರು ಠರಾವು ತಂದರು. ಪಂತಲುನವರ ಠರಾವಿನ ವಿಚಾರವನ್ನು ಇಲಾಖೆ ಸರಕಾರಗಳಿಗೆ ತಿಳಿಸ ಮಂತೆ ಸರಕಾರದವರು ಒಪ್ಪಲು ಪಂತಲುನವರು ತಮ್ಮ ಠರಾವನ್ನು ಹಿಂಗಕ್ಕೆ ತಕ್ಕೊಂಡರು.

ಬೆಂಗಳೂರ ಮ್ಯುನಿಸಿಪಾಲಿಟಿಯಲ್ಲಿ ಖಾನಬಹಾದ್ದೂರ ಅಬ್ಬಾಸಖಾನರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಪದಕ್ಕಾಗಿ ಯಾವ ಚುನಾವಣೆ ನಡೆಯುವ ಮೆಂಬರರೂ ಉಮೇದವಾರರಾಗಲಿಲ್ಲ. ಮಿ. ಸುಬ್ಬಯ್ಯಶೆಟ್ಟರೆಂಬವರು ಅಧ್ಯಕ್ಷರಾಗುವರೆಂದು ವರ್ತಮಾನವಾಗಿದೆ.

ಧಾರವಾಡ—

ಮೊನ್ನೆ ರಾತ್ರಿ ಊರಲ್ಲಿ ಚೆನ್ನಾಗಿ ಹಸಿವ ಮಳೆಯಾಯಿತು.

ನಾಳಿನ ರಜೆ—

ವಿನಾಯಕ ಚತುರ್ಥಿಯ ರಜೆಯಿಂದ ನಾಳೆ ಮುದ್ರಾಲಯಕ್ಕೆ ರಜೆ ಇರುವದರಿಂದ, ನಾಳಿನ ಸಂಖ್ಯದ ವಿಜಯವು ಪ್ರಕಟಿಸಲ್ಪಡಲಾರದು.

R. N. B. 1443

ಸಾಪ್ತಾಹಿಕ **ವಿಜಯ** ಬೆಲೆ ಒಂದು ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೯) ಧಾರವಾಡ ಮಂಗಳವಾರ ತಾರೀಖು ೧೮ ನೇ ಸಪ್ಟಂಬರ ೧೯೨೮ (ಸಂಚಿಕೆ ೩೭

ವಿಜಯ.

ಧಾರವಾಡ ತಾ- ೧೮-೯-೨೮ ನೇ ಇಸ್ವಿ.

ಬೊಲ್ಸೆವಿಕ ಭೂತವನ್ನು ಹೊರಗೆ ಹಾಕುವ ಕಾಯಿದೆ.

